ರಂಜನೆ ಬೋಧನೆ ಪ್ರಚೋದನೆ

ಲಂಕೇಶ್


ಜೂನ್ 22, 2011 ಪುಟ 20 ರೂ. 14/-



ಮತ್ತೆ ಬರುವೆನೆಂದಿದ್ದ ಲಿಂಗದೇವರು

ಗಾಂಧಿವಾದಿಯನ್ನು ತುಳಿದ ಕೋಮುವಾದಿ

ಬೂಸಿ ಬಾಬಾ





ಶಿವಮೊಗ್ಗೆ ಅಭಯಾರಣ್ಯದ ಮೇಲೆ ಯಡ್ಡಿ ಕಾಲೇಜು



ಇಸ್ಕಾನ್ ವಂಚಕನ ದೈವ ದರೋಡೆ



ಸಿದ್ದಲಿಂಗಯ್ಯ

ಬ್ರಾಹ್ಮಣ್ಯ ಪ್ರೀತಿ

ಬಿನಾಯಕ್ ಸೇನ್ ಸಂದರ್ಶನ



ಕೆಲ ದಿನಗಳ ಹಿಂದೆ ಸುಪ್ರೀಂ ಕೋರ್ಟ್‌ನ ಆದೇಶದಂತೆ ಸೆರೆಮನೆಯಿಂದ ಬಿಡುಗಡೆಯಾಗಿ ಹೊರಬಂದಿರುವ ಮಾನವ ಹಕ್ಕುಗಳಿಗಾಗಿನ ಹೋರಾಟಗಾರ ಡಾ.ಬಿನಾಯಕ್ ಸೇನ್‌ರೊಂದಿಗಿನ ಸಂದರ್ಶನದ ಆಯ್ದಭಾಗವನ್ನು ಇಲ್ಲಿ ಪ್ರಕಟಿಸಿದೆ...

ಛತ್ತೀಸ್‌ಗಡ್ ಸರ್ಕಾರವು ತಮ್ಮ ವಿರುದ್ಧದ ಆರೋಪವನ್ನು ಮುಂದುವರೆಸುತ್ತಲೇ ಇದೆ. ಕೇಂದ್ರ ಯೋಜನಾ ಆಯೋಗದ ಆರೋಗ್ಯ ಸಮಿತಿಯಲ್ಲಿ ನಿಮ್ಮನ್ನು ಸದಸ್ಯರನ್ನಾಗಿ ಸೇರಿಸಿಕೊಂಡಿದ್ದರಿಂದ ಮುಖ್ಯಮಂತ್ರಿ ರಮಣ್ ಸಿಂಗ್ ಆಯೋಗದ ಸಭೆಯಿಂದ ಹೊರಬಂದಿರುವುದು ಮಾತ್ರವಲ್ಲದೆ ಈ ವಿಷಯವಾಗಿ ಮಧ್ಯ ಪ್ರವೇಶಿಸುವಂತೆ ಪ್ರಧಾನಿ ಮನಮೋಹನ್ ಸಿಂಗ್‌ಗೆ ಪತ್ರ ಬರೆದಿದ್ದಾರೆ. ನಿಮ್ಮ ಅಭಿಪ್ರಾಯವೇನು?

ಆರೋಗ್ಯದ ವಿಶೇಷ ಸಮಿತಿಗೆ ನನ್ನ ನಾಮಕರಣವಾಗಿರುವುದು ನನ್ನ ಕೋರಿಕೆಯ ಮೇಲಲ್ಲ, ಬದಲಾಗಿ ಇದು ಯೋಜನ ಆಯೋಗದ ನಿರ್ಧಾರ. ಆದ್ದರಿಂದ ಈ ವಿಷಯವಾಗಿ ಯಾವುದೇ ವಿಧವಾದ ಸಮಸ್ಯೆ ಇದ್ದಲ್ಲಿ ರಮಣ್ ಸಿಂಗ್ ಅವರು ಅದನ್ನು ಅಲ್ಲಿಗೇ ಒಯ್ಯಬೇಕು.

ಭಾರತದ ಆರೋಗ್ಯ ಆರೈಕಾ ಕ್ಷೇತ್ರದಲ್ಲಿ ನೀವು ಮೊದಲಿನಿಂದಲೂ ಒಂದು ಧ್ವನಿಯಾಗಿದ್ದೀರಿ. ಭಾರತ ಈಗ ಎದುರಿಸುತ್ತಿರುವ ಸವಾಲುಗಳ ಕುರಿತು ಸಂಕ್ಷಿಪ್ತವಾಗಿ ತಿಳಿಸುವಿರಾ?

ಇದು ದೊಡ್ಡ ವ್ಯಾಪ್ತಿ ಹೊಂದಿರುವುದರಿಂದ ನಿರ್ದಿಷ್ಟ ಸಮಸ್ಯೆಗಳ ಕುರಿತು ಬೊಟ್ಟು ಮಾಡಿ ತೋರಿಸುವುದು ನಿಜಕ್ಕೂ ಕಷ್ಟದ ಕೆಲಸ. ಇತ್ತೀಚೆಗೆ ವಿಶ್ವ ಆರೋಗ್ಯ ಸಂಸ್ಥೆ (WHO) ಯು ಆರೋಗ್ಯದ ಸಾಮಾಜಿಕ ಆಯಾಮಗಳನ್ನು ತಿಳಿಯಲು ಮೈಕೆಲ್ ಮರ್ಮೊಟ್ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿತ್ತು. ಈ ಸಮಿತಿಯು ಪ್ರಪಂಚದಾದ್ಯಂತದ ಸಾಮಾಜಿಕ ಆರೋಗ್ಯ ಕುರಿತು ಅಧ್ಯಯನ ನಡೆಸಿತು. ಆ ಸಮಿತಿಯ ಅಂತಿಮ ತೀರ್ಮಾನವಾದ "ಅಸಮಾನತೆ ಅಥವಾ ಪಕ್ಷಪಾತ ಧೋರಣೆ ಜನರನ್ನು ದೊಡ್ಡ ಮಟ್ಟದಲ್ಲಿ ಕೊಲೆಗೈಯುತ್ತಿದೆ" ಎಂಬುದು ಒಂದು ಘೋಷವಾಕ್ಯವೇ ಆಗಿಹೋಗಿದೆ. ನನಗನ್ನಿಸಿದಂತೆ ಇದು ಭಾರತಕ್ಕೂ ಅನ್ವಯಿಸುತ್ತದೆ. ಸಾಮಾಜಿಕವಾಗಿ ಇನ್ನೂ ನಿರ್ದಿಷ್ಟವಾಗಿ ಹೇಳಬೇಕೆಂದರೆ ಆರೋಗ್ಯ ಕ್ಷೇತ್ರದಲ್ಲಿ ಸಮಾನತೆಯನ್ನು ಸಾಧಿಸುವುದು ತುಂಬಾ ಮುಖ್ಯವಾದ ಸಂಗತಿ.

ಇತ್ತೀಚೆಗೆ ತಾನೆ ನೀವು ಭಾರತಕ್ಕೆ ಸಾರ್ವಜನಿಕ ಆರೋಗ್ಯ ಮೂಲಸೌಕರ್ಯದ ಅವಶ್ಯಕತೆ ಇದೆ ಎಂದು ಹೇಳಿದ್ದಿರಿ....

ನೋಡಿ, ಆರೋಗ್ಯ ಮೂಲಸೌಕರ್ಯ ಕೇವಲ ಒಂದು ಆಯಾಮ ಅಷ್ಟೆ. ನಾವೀಗ ಕುಡಿಯುವ ನೀರು ಮತ್ತು ನೈರ್ಮಲ್ಯತೆಯ ಲಭ್ಯತೆಯಂತಹ ಸಮಸ್ಯೆಗಳಿಂದ ಪ್ರಾರಂಭಿಸಬೇಕಾದ ಅನಿವಾರ್ಯತೆ ಇದೆ. ತುಂಬ ಮುಖ್ಯವಾಗಿ ಈ ದೇಶದಲ್ಲಿ ಅಪೌಷ್ಠಿಕತೆ ಹರಡಿಹೋಗಿದೆ.

ವಯಸ್ಸಿಗೆ ತಕ್ಕಂತಹ ತೂಕದ ಮಾನದಂಡವನ್ನು ಪರಿಗಣಿಸುವುದಾದರೆ ಐದು ವರ್ಷಕ್ಕಿಂತ ಕಡಿಮೆ ವಯೋಮಾನದ ಶೇ. 47 ರಷ್ಟು ಮಕ್ಕಳು ಅಪೌಷ್ಠಿಕತೆಯಿಂದ ಬಳಲುತ್ತಿದ್ದಾರೆ. ರಾಷ್ಟ್ರೀಯ ಪೌಷ್ಠಿಕ ದಾಖಲನಾ ಸಂಸ್ಥೆ **(National Nutrition Monitoring Bureau)** ಹೇಳುವಂತೆ ಭಾರತದ ಶೇ.37 ರಷ್ಟು ವಯಸ್ಕ ಜನಸಂಖ್ಯೆ 18.5 ಬಾಡಿ-ಮಾಸ್-ಇಂಡೆಕ್ಸ್ **(BMI)** ಅನ್ನು ಹೊಂದಿದ್ದಾರೆ, ಇದು ದೀರ್ಘಕಾಲದ ಅಪೌಷ್ಠಿಕತೆಯನ್ನು ಸೂಚಿಸುತ್ತದೆ.

ಈ ಅಂಕಿಅಂಶವನ್ನು ನೀವು ಬಿಡಿಸಿ ನೋಡುವುದಾದರೆ, ಶೇ. 50ರಷ್ಟು ಪರಿಶಿಷ್ಟ ಪಂಗಡದ, ಶೇ.60 ರಷ್ಟು ಪರಿಶಿಷ್ಟ ಜಾತಿಯ ಹಾಗೂ ಬೃಹತ್ ಪ್ರಮಾಣದ ಅಲ್ಪಸಂಖ್ಯಾತ ವರ್ಗದವರು ಅಪೌಷ್ಠಿಕತೆಯಿಂದ ಬಳಲುತ್ತಿರುವುದು ಸಾಚಾರ್ ಸಮಿತಿಯ ವರದಿಯಿಂದ ತಿಳಿದುಬರುತ್ತದೆ. ಇವನ್ನೆಲ್ಲಾ ಗಮನಿಸಿದಾಗ ಭೀಕರ ಆರೋಗ್ಯ ಕ್ಷಾಮದ ಜೊತೆಗೆ ಹೆಜ್ಜೆಹಾಕುತ್ತಿರುವ ಪರಿಸ್ಥಿತಿಯಲ್ಲಿ ನಾವಿರುವುದು ಅರಿವಿಗೆ ಬರುತ್ತದೆ. ಅಭಿವೃದ್ಧಿಯ ಪಥದಲ್ಲಿರುವ ಒಂದು ದೇಶಕ್ಕೆ ಇದು ಅಪಾಯಕಾರಿ ಸಂಗತಿ.

ಈಗ 'ರಾಷ್ಟ್ರದ್ರೋಹ' ಕಾನೂನುಗಳ ಕುರಿತಾದ ತಮ್ಮ ಟೀಕೆಯ ವಿಷಯಕ್ಕೆ ಬರೋಣ. ಈ ಕಾನೂನುಗಳನ್ನು ಸರ್ಕಾರಗಳು ತಮ್ಮ ವಿರುದ್ಧದ ಟೀಕೆಗಳನ್ನು ದಮನ ಮಾಡಲು ಬಳಸುತ್ತಿವೆ ಎಂದು ನಿಮಗನ್ನಿಸುತ್ತದೆಯೆ?

ಹೌದು, ನಾನು ಕಾನೂನುಗಳನ್ನು ಟೀಕಿಸಿದ್ದೇನೆ, ಆದರೆ ಈ ವಿಷಯದಲ್ಲಿ ನಾನು ಏಕಾಂಗಿಯೂ ಅಲ್ಲ ಮೊದಲಿಗನೂ ಅಲ್ಲ, ನನ್ನ ಮೇಲಿನ ರಾಷ್ಟ್ರ ದ್ರೋಹದ ಆರೋಪದ ಕುರಿತಾಗಿ ರಾಜ್ಯವು ಸೂಕ್ತ ಸಾಕ್ಷ್ಯಗಳನ್ನು ನೀಡಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದ ನಂತರ ಮೊಯ್ಲಿ ರಾಷ್ಟ್ರ ದ್ರೋಹದ ಕಾನೂನುಗಳನ್ನು ಪುನರ್ ಪರಿಶೀಲಿಸಬೇಕು ಎಂದು ಹೇಳಿದ್ದಾರೆ. ಆದ್ದರಿಂದ ಕೇವಲ ನಾನೊಬ್ಬನೆ ಮಾತ್ರವಲ್ಲ ಇನ್ನು ತುಂಬಾ ಮುಖ್ಯ ವ್ಯಕ್ತಿಗಳು ಇದೇ ಅಭಿಪ್ರಾಯವನ್ನು ಹೊಂದಿದ್ದಾರೆ.

ರಾಷ್ಟ್ರ ದ್ರೋಹಕ್ಕೆ ಸಂಬಂಧಿಸಿದ ಕಾನೂನುಗಳಿಂದಾಗಿ ಜೈಲಿನಲ್ಲಿರುವ ನೂರಾರು, ಬಹುಶಃ ಸಾವಿರಾರು (ನಮ್ಮ ಬಳಿ ನಿರ್ದಿಷ್ಟವಾದ ಅಂಕಿಅಂಶಗಳಿಲ್ಲ) ಜನ ಇದೇ ಅಭಿಪ್ರಾಯ ಹೊಂದಿದ್ದಾರೆ. ರಾಷ್ಟ್ರ ದ್ರೋಹಕ್ಕೆ ಸಂಬಂಧಿಸಿದ ಕಾನೂನುಗಳ ಕುರಿತಾದ ರಾಷ್ಟ್ರೀಯ ಮಟ್ಟದ ಅಭಿಪ್ರಾಯ ಕ್ರೋಢೀಕರಣವನ್ನು P.U.C.L ಇತ್ತೀಚೆಗಷ್ಟೆ ಮುಗಿಸಿದೆ.

ಈ ಕ್ರೋಢೀಕರಣದಲ್ಲಿ ಭಾಗವಹಿಸಿದ್ದ ಕಾನೂನು ಶಾಸ್ತ್ರಜ್ಞರ ಪ್ರಕಾರ ರಾಷ್ಟ್ರ ದ್ರೋಹ ಕಾನೂನುಗಳು ಈಗಿನ ಸ್ಥಿತಿಯಲ್ಲಿ ಸ್ವತಂತ್ರ ದೇಶದ ಸ್ವತಂತ್ರ ನಾಗರಿಕತ್ವಕ್ಕೆ ಯೋಗ್ಯವಾಗಿ ಉಳಿದಿಲ್ಲ ಎನ್ನಲಾಗಿದೆ. ಇವು ಗತಿಸಿ ಹೋದ ಬ್ರಿಟಿಷ್ ಸಾಹಹುಶಾಹಿ ಕಾಲಕ್ಕೆ ಸೂಕ್ತವಾದವುಗಳು. ಮಹಾತ್ಮ ಗಾಂಧಿಯವರೂ ಸಹ ರಾಷ್ಟ್ರ ದ್ರೋಹ ಆಪಾದನೆಗೆ ಗುರಿಯಾಗಿದ್ದರು. ಈ ರಾಷ್ಟ್ರ ದ್ರೋಹ ಕಾನೂನುಗಳು ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆಯನ್ನು ಪ್ರತಿಫಲಿಸುವುದಿಲ್ಲ.

ಅಂದರೆ ಇವು ಔಟ್‌ಡೇಟೆಡ್ ಆಗಿವೆ ಮತ್ತು ಸದ್ಯದ ಸಾಮಾಜಿಕ ವ್ಯವಸ್ಥೆಗೆ ಇವುಗಳನ್ನು ಬದಲಾಯಿಸಬೇಕಾಗಿದೆ ಎಂದು ಹೇಳುತ್ತೀರಾ?

ಇಲ್ಲ, ಇವು ಕೇವಲ ಔಟ್‌ಡೇಟೆಡ್ ಮಾತ್ರವಲ್ಲ, ಈ ಕಾನೂನುಗಳ ರೂಪುರೇಷೆಯು ಈ ದೇಶದಲ್ಲಿ ಪ್ರಜಾಪ್ರಭುತ್ವದ ಬೆಳವಣಿಗೆಗೆ ಅಡ್ಡಿಯಾಗುವಂತಿದೆ.

ಸಾಲ್ವಾ ಜುಡುಮ್‌ನ ವಿರೋಧವಾಗಿ ಪಿ.ಯು.ಸಿ.ಎಲ್. ಕೆಲಸದ ಬಗ್ಗೆ ಸ್ವಲ್ಪ ತಿಳಿಸಿ. ನಕ್ಸಲೈಟರ ವಿರುದ್ಧ ನಡೆಸಲಾದ ಮಾನವ ಹಕ್ಕುಗಳ ಉಲ್ಲಂಘನೆಗಳನ್ನು ಬೆಳಕಿಗೆ ತರುವ ಪಿ.ಯು.ಸಿ.ಎಲ್‌ನ ಕೆಲಸದ ಮೇಲೆ ನಿಮ್ಮ ಬಂಧನ ಪರಿಣಾಮ ಉಂಟುಮಾಡಿದೆಯೆ?

ಸಾಲ್ವಾ ಜುಡುಮ್ ವಿರುದ್ಧ ಪಿ.ಯು.ಸಿ.ಎಲ್ ತನಿಖೆಯನ್ನು ನಡೆಸಿತು. ಮೇಲ್ನೋಟಕ್ಕೆ ಕಾಣುವಂತೆ ಇದು ಬುಡಕಟ್ಟುಗಳ ಏಕಾಏಕಿ ಚಳವಳಿಯಲ್ಲ, ಬದಲಾಗಿ ಸರ್ಕಾರವೇ ಇದನ್ನು ಪ್ರಾರಂಭಿಸಿ, ಹಣಕಾಸು ನೆರವು ನೀಡಿ, ವ್ಯವಸ್ಥಿತವಾಗಿ ಯೋಜಿಸಿ ಕಾರ್ಯರೂಪಕ್ಕೆ ತರಲಾಗಿದೆ ಎಂಬ ನಿರ್ಧಾರಕ್ಕೆ ತನಿಖೆ ಬಂದಿತು.

ಶಸ್ತ್ರಧಾರಿ ಸ್ವಯಂಪ್ರೇರಿತ ರಕ್ಷಣಾ ಪಡೆಯ ನಿರ್ಮಾಣವು ಸಾಲ್ವಾ ಜುಡುಮ್ ಚಳವಳಿಯ ಒಂದು ಭಾಗ. ಈಗ ಸ್ವತಃ ಸುಪ್ರೀಂ ಕೋರ್ಟ್ ಸಾಲ್ವಾ ಜುಡುಮ್ ಮತ್ತು ಖಾಸಗಿ ಸ್ವಯಂ ಪ್ರೇರಿತ ರಕ್ಷಣಾ ಪಡೆಯ ಸಶಸ್ತ್ರೀಕರಣದ ವಿರುದ್ಧ ಸ್ಪಷ್ಟವಾಗಿ ಅಭಿಪ್ರಾಯ ವ್ಯಕ್ತಪಡಿಸಿದೆ.

ಇನ್ನು ಪಿ.ಯು.ಸಿ.ಎಲ್ ಬಗ್ಗೆ ಹೇಳುವುದಾದರೆ, ಬೃಹತ್ ಸಂಖ್ಯೆಯ ಸಮರ್ಪಣಾ ವ್ಯಕ್ತಿಗಳಿಂದ ಅದು ನಿರ್ಮಿತವಾಗಿದೆ, ಅವರಲ್ಲಿ ನಾನೂ ಒಬ್ಬ

(16ನೇ ಪುಟಕ್ಕೆ)

ಸುತ್ತ ಮುತ್ತ

ಅಮ್ಮಾ ತಾಯೀ ಕವಳಾ...!

ಸುಷ್ಮಾ ಸ್ವರಾಜ್ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಲು ಅನೇಕ ಬಾರಿ ಪ್ರಯತ್ನಿಸಿದೆ. ಆದರೆ ಅವರ ಸಂಪರ್ಕ ಸಾಧ್ಯವಾಗಿಲ್ಲ. ಸುಷ್ಮಾ ಸ್ವರಾಜ್ ಯಾವುದೋ ಕಾರಣಕ್ಕೆ ನಮ್ಮ ಮೇಲೆ ಮುನಿಸಿಕೊಂಡಿರಬಹುದು. ಒಂದೊಮ್ಮೆ ನಾವು ತಪ್ಪು ಮಾಡಿದ್ದರೆ ಅದನ್ನು ಮನ್ನಿಸಬೇಕು. ಅವರು ನೀಡಿರುವ ಹೇಳಿಕೆಯಿಂದ ನಮ್ಮ ಮನಸ್ಸಿಗೆ ತೀವ್ರ ನೋವಾಗಿದೆ. ಆದರೆ ಅವರು ಈಗಲೂ ನಮ್ಮ ಪಾಲಿನ ದೇವರು. ಅವರು ಏನೇ ಅಂದರೂ ಅವರು ನಮ್ಮ ತಾಯಿ.

- ಬಿ. ಶ್ರೀರಾಮುಲು

ಭಂಡತನದ ಪರಮಾವಧಿ

ಎನ್‌ಡಿಎ ಆಡಳಿತವಿರುವ ರಾಜ್ಯಗಳು ಉತ್ತಮವಾಗಿ ಆಡಳಿತ ನಡೆಸುತ್ತಿವೆ. ಆದರೆ ಕರ್ನಾಟಕದಲ್ಲಿ ಆಗುತ್ತಿರುವ ಬೆಳವಣಿಗೆಗಳ ಬಗ್ಗೆ ನನಗೆ ತೃಪ್ತಿಯೂ ಇಲ್ಲ, ಸಂತಸವೂ ಇಲ್ಲ.

- ಎಲ್.ಕೆ. ಅಡ್ವಾಣಿ

ಅಡ್ವಾಣಿ ಅವರು ನಮ್ಮ ಹಿರಿಯ ನಾಯಕರು. ಅವರು ನೀಡಿರುವ ಸಲಹೆಗಳನ್ನು ಪಾಲಿಸುತ್ತೇನೆ. ಸಚಿವರೊಂದಿಗೆ ಚರ್ಚಿಸಿ ಇನ್ನು ಮೂರು ತಿಂಗಳಲ್ಲಿ ಪಕ್ಷ ಮತ್ತು ಸರ್ಕಾರದ ವರ್ಚಸ್ಸನ್ನು ಹೆಚ್ಚಿಸುತ್ತೇನೆ.

- ಯಡಿಯೂರಪ್ಪ

ಉದ್ದೇಶಕ್ಕೂ ದುರುದ್ದೇಶಕ್ಕೂ ಇರುವ ವ್ಯತ್ಯಾಸ

'ನಾನು ರಾಷ್ಟ್ರದ ಹಿತಕ್ಕಾಗಿ ಹೋರಾಡುತ್ತಿದ್ದೇನೆ. ನಮ್ಮ ಉದ್ದೇಶ ಅಚಲವಾಗಿದೆ. ಬೇಕಾದರೆ ನನ್ನನ್ನು ಬಂಧಿಸಿ' ಎಂದು ಬಾಬಾ ರಾಮದೇವ್ ಹೇಳಿ ಸ್ವತಃ ಬಂಧನಕ್ಕೆ ಒಳಗಾಗಿದ್ದರೆ ಇಡೀ ಹೋರಾಟಕ್ಕೆ ಮತ್ತಷ್ಟು ಬಲ ಬರುತ್ತಿತ್ತು, ಬಾಬಾರ ಮೇಲೆ ಇನ್ನಷ್ಟು ವಿಶ್ವಾಸ ಹೆಚ್ಚುತ್ತಿತ್ತು,

- ಶ್ರೀ ಶಿವಮೂರ್ತಿ ಮುರುಘಾ ಶರಣರು

ಅನ್ಯಾಯ, ನ್ಯಾಯ

ಕೃಷಿಯಿಂದ ಗಳಿಸಿದ ಆದಾಯ ಎಂದು ನೀವು ಮತ್ತು ನಿಮ್ಮ ಪತ್ನಿ ಆದಾಯ ತೆರಿಗೆ ಇಲಾಖೆಗೆ ನೀಡಿರುವ ಹೇಳಿಕೆ ಕಪೋಲಕಲ್ಪಿತ ಮತ್ತು ಸತ್ಯಕ್ಕೆ ದೂರವಾದದ್ದು, ... ನೀವು ನೀಡಿರುವ ಹಲವು ತೀರ್ಪುಗಳು ಪೂರ್ವಗ್ರಹದಿಂದ ಕೂಡಿದ್ದು, ನ್ಯಾಯಾಂಗದ ಬಗ್ಗೆ ಗೌರವವಿಲ್ಲದ, ಶಿಸ್ತಿಲ್ಲದ, ಅಧಿಕಾರದ ದುರ್ಬಳಕೆ ಮತ್ತು ದುರ್ವರ್ತನೆಯಿಂದ ಕೂಡಿದೆ.

- ನ್ಯಾಯಾಧೀಶ ಪಿ.ಡಿ. ದಿನಕರ್ ಅವರನ್ನು ಕುರಿತ ತನಿಖಾ ಸಮಿತಿಯ ವರದಿಯಲ್ಲಿ

ನ್ಯಾಯಾಧೀಶ ರಾಮಸ್ವಾಮಿ ತಪ್ಪಿತಸ್ಥ ಎಂದು ಹೇಳಿದ್ದೇ ನ್ಯಾಯಾಧೀಶರು. ಆದರೆ ಆತನನ್ನು ಆರೋಪ ಮುಕ್ತ ಮಾಡಿದ್ದು ರಾಜಕಾರಣಿಗಳು. ಭ್ರಷ್ಟಾಚಾರ ಒಂದು ರೋಗ.

- ಕರ್ನಾಟಕದ ಮಾಜಿ ಮುಖ್ಯ ನ್ಯಾಯಾಧೀಶ ವಿ.ಎಸ್. ಮಳಿಮಠ್

ಹೀಗೊಂದು ಸತ್ಯಾಗ್ರಹ

2.5 ಲಕ್ಷ ಚದುರಡಿಯಷ್ಟು ವಿಸ್ತಾರವಾದ ಎಸಿ ಟೆಂಟು, 1,000 ಕ್ಕಿಂತ ಹೆಚ್ಚು ಸೀಲಿಂಗ್ ಫ್ಯಾನ್ ಮತ್ತು ಶೌಚಾಲಯಗಳು, ಒಂದು ದಿನಕ್ಕೆ ಬೇಕಾದ ಐದು ಲಕ್ಷ ಲೀಟರ್ ನೀರಿಗಾಗಿ ತೋಡಿಸಿದ ಹೊಸ ಬೋರ್‌ವೆಲ್....

- ರಾಮದೇವನ ಸತ್ಯಾಗ್ರಹಕ್ಕೆ ನಡೆದ ಸಿದ್ಧತೆ ಕುರಿತು ಪತ್ರಿಕಾ ವರದಿ

ರಾಮದೇವ್ ಸತ್ಯಾಗ್ರಹದಲ್ಲಿ ಪಾಲ್ಗೊಂಡ ಪೇಜಾವರ ಶ್ರೀಗಳು, ಕರ್ನಾಟಕದ ಬಹುತೇಕ ಸ್ವಾಮೀಜಿಗಳು ಭ್ರಷ್ಟಾಚಾರ ಮತ್ತು ಹಗರಣಗಳ ಸುಳಿಯಲ್ಲಿ ಮುಳುಗೇಳುತ್ತಿರುವ ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಅವರ ಸರ್ಕಾರದ ಪರ ನಿಂತಿದ್ದಾರೆ.

- ಪಿ. ತ್ಯಾಗರಾಜ್, ಕನ್ನಡ ಪ್ರಭದಲ್ಲಿ

ಭ್ರಷ್ಟಾಚಾರ ವಿರುದ್ಧ ಹೋರಾಟ ಆರಂಭಿಸಿರುವ ಯೋಗ ಗುರು ರಾಮದೇವ್ ಜನರನ್ನು ತಪ್ಪುದಾರಿಗೆ ಎಳೆಯುತ್ತಿದ್ದಾರೆ. ರೂ. 11,000 ಕೋಟಿಗಳ ಸಾಮ್ರಾಜ್ಯ ಹೊಂದಿರುವ ಬಾಬಾ ಮೊದಲಿಗೆ ತಮ್ಮ ಮನೆಯನ್ನು ಶುದ್ಧೀಕರಣಗೊಳಿಸಿಕೊಳ್ಳಲಿ.

- ಶಂಕರಾಚಾರ್ಯ ಸ್ವರೂಪಾನಂದ ಸರಸ್ವತಿ ಸ್ವಾಮಿ

ಕವಿ ದಿವಂಗತ ಆದದ್ದು

ಬ್ರಾಹ್ಮಣರ ಕುರಿತು ನನ್ನಲ್ಲಿ ಹಿಂದಿದ್ದ ಉಗ್ರತೆ ಕಡಿಮೆಯಾಗಿದೆ. ಹಿಂದಿನಂತೆ ಬಂಡಾಯ ಸಾಹಿತ್ಯ ರಚಿಸಲು ಈಗ ನನ್ನಿಂದ ಸಾಧ್ಯವಿಲ್ಲ, 'ಇಕ್ಕಿರ್ಲಾ, ಒದಿರ್ಲಾ' ಎಂಬಂತಹ ಕವಿತೆಗಳನ್ನು ನಾನೀಗ ಬರೆಯಲಾರೆ!

- ದಲಿತ ಕವಿ ಸಿದ್ಧಲಿಂಗಯ್ಯ

ಇವರು ಸರಳಜೀವಿಗಳಂತೆ

ನೂರಾರು ಅರ್ಚಕರ ವೇದಘೋಷ, ಹಲವಾರು ಗಣ್ಯರ ಶುಭ ಹಾರೈಕೆಗಳ ನಡುವೆ ಇನ್ಫೋಸಿಸ್ ನಾರಾಯಣಮೂರ್ತಿಯವರ ಪುತ್ರ ರೋಹನ್ ಮೂರ್ತಿ ಮತ್ತು ಟಿವಿಎಸ್ ಗ್ರೂಪ್‌ನ ವೇಣು ಶ್ರೀನಿವಾಸನ್‌ರ ಪುತ್ರಿ ಲಕ್ಷ್ಮಿ ವೇಣು ಹೊಸ ಬಾಳಿಗೆ ಕಾಲಿಟ್ಟರು.

- ಪತ್ರಿಕಾ ವರದಿ

ಎಂತಹ 'ಸಾಧನೆ, ಅಭಿವೃದ್ಧಿ'!

ಹಣಕಾಸಿನ ಲಾಭದಾಸೆಗೆ ಕೆಲವರು ಗಣಿಗಳ ಹಗಲು ದರೋಡೆ ನಡೆಸುತ್ತಿದ್ದು ಅದನ್ನು ತಡೆಯಲಾರದ ವಿಷಮ ಪರಿಸ್ಥಿತಿಯಲ್ಲಿ ನಾವಿದ್ದೇನೆ. ಜಗತ್ತಿನ ಯಾವುದೇ ಮುಂದುವರಿದ ದೇಶದಲ್ಲಿ ಗಣಿ ಸಂಪತ್ತಿನ ಲೂಟಿಗೆ ಅವಕಾಶ ನೀಡಿಲ್ಲ. ಆದರೆ ನಾವು ಅವಕಾಶ ಕೊಟ್ಟಿದ್ದೇವೆ.

- ಯಡಿಯೂರಪ್ಪ

ನೋ ಕಾಮೆಂಟ್ಸ್

ಭ್ರಷ್ಟಾಚಾರದ ವಿರುದ್ಧ ಅಥವಾ ಅದಕ್ಕೆ ಸಂಬಂಧಿಸಿದ ಸಮಸ್ಯೆಗಳ ಕುರಿತು ಮಾತನಾಡಲು ಭಾರತೀಯ ಜನತಾ ಪಕ್ಷ ನೈತಿಕ ಹಕ್ಕನ್ನು ಕಳೆದುಕೊಂಡಿದೆ.

- ಗೋವಿಂದಾಚಾರ್ಯ, ಆರೆಸ್ಸೆಸ್ ಮತ್ತು ಬಿಜೆಪಿಯ ಮಾಜಿ ಹಿರಿಯ ನಾಯಕ

ಸಾಧುಸಂತರು ಭ್ರಷ್ಟಾಚಾರದ ವಿರುದ್ಧ ಹೋರಾಟ ನಡೆಸುತ್ತಿರುವುದು ಒಳ್ಳೆಯ ವಿಷಯ. ಆದರೆ ಕಂಬಾಲಪಲ್ಲಿಯಲ್ಲಿ ಎಂಟು ಮಂದಿ ದಲಿತರ ಸಜೀವ ದಹನವಾದಾಗ ಯಾವುದೇ ಸಾಧು, ಸಂತರು ತುಟಿ ಬಿಚ್ಚಲಿಲ್ಲ, ಆಗ ಅವರೆಲ್ಲ ಎಲ್ಲಿಗೆ ಹೋಗಿದ್ದರು?

- ಶಾಸಕ ನರೇಂದ್ರ ಸ್ವಾಮಿ

ಬೆಳಗಾವಿಯಲ್ಲಿ ನಡೆದ ವಿಶ್ವಕನ್ನಡ ಸಮ್ಮೇಳನದಲ್ಲಿ ಐಶ್ವರ್ಯ ರೈ 'ನಗು'ವಿಗಾಗಿ ಸರ್ಕಾರ ಮಾಡಿದ ಖರ್ಚು ಎಷ್ಟು ಗೊತ್ತೆ?

9 ಲಕ್ಷ 67 ಸಾವಿರ 883 ರೂಪಾಯಿ!

-ಪತ್ರಿಕಾ ವರದಿ

ಉಮ್ರಾವ್ ಜಾನ್ ಸಿನಿಮಾಗೆ ಗೀತೆಗಳನ್ನು ಬರೆದಿದ್ದ ಶರ್ಯರ್ ಅವರು ಆಧುನಿಕ ಗೀತರಚನೆಕಾರರು ತಮ್ಮ ಪೆನ್‌ಗಳಲ್ಲಿ ಇಂಕ್ ಬದಲಾಗಿ ಮೂತ್ರ ತುಂಬಿಕೊಂಡಿರುತ್ತಾರೆ ಎಂದು ವಿಷಾದ ವ್ಯಕ್ತಪಡಿಸಿದ್ದರು. ಅದೀಗ ಸಾಬೀತಾಗುತ್ತಿದೆ.

- ಹಿರಿಯ ಪತ್ರಕರ್ತ ಅನಿಲ್ ಥಾಕ್ರನ್

ಇಚ್ಛಾಮರಣಕ್ಕೆ ಅವಕಾಶ ಇರಬೇಕಲ್ಲವೇ




• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ಅವರಿಗೆ 85 ವರ್ಷ ವಯಸ್ಸಾಗಿತ್ತು. ಆ ವಯಸ್ಸಿಗೆ ಸಹಜವಾದ ಬಿಪಿ, ಸಕ್ಕರೆ ಇತ್ಯಾದಿ ಕಾಯಿಲೆಗಳು ಮುತ್ತಿಕೊಂಡಿದ್ದವು. ದೇಹ ನಿಶ್ಶಕ್ತವಾಗಿತ್ತು. ಕೆಲ ದಿನ ಅನಾರೋಗ್ಯದಿಂದ ನರಳಿದಾಗ ಅವರು ತಮ್ಮ ಜೀವನದಲ್ಲಿ ಪ್ರಥಮ ಬಾರಿಗೆ ಎಲ್ಲದಕ್ಕೂ ಇತರರನ್ನು ಅವಲಂಬಿಸಿದ್ದರು. ಸ್ವಾಭಿಮಾನಿ ಮತ್ತು ಸ್ವಾವಲಂಬಿಯಾಗಿ ಬದುಕಿದ್ದ ಅವರಿಗೆ ಆ ದಿನಗಳು ಘೋರವಾಗಿದ್ದವು. ಆದರೂ ಅದು ಹೇಗೋ ಚೇತರಿಸಿಕೊಂಡು ಮತ್ತೆ ಓಡಾಡುವಷ್ಟು, ಇತರರನ್ನು ಅವಲಂಬಿಸದೆ ಬದುಕುವಷ್ಟು ಶಕ್ತಿಯನ್ನು ಪಡೆದರು.

ಇದಾದನಂತರ ಅವರ ಹೃದಯದಲ್ಲಿ ಕೆಲವು ಸಮಸ್ಯೆಗಳು ಕಂಡುಬಂದಾಗ ವೈದ್ಯರು, ಅವರು ಶಸ್ತ್ರಚಿಕಿತ್ಸೆಯನ್ನು ತಡೆದುಕೊಳ್ಳುವ ಸ್ಥಿತಿಯಲ್ಲಿಲ್ಲ ಎಂದರು. ಆಗ ಅವರು ತಮ್ಮ ಮುಂದಿರುವ ದಿನಗಳ ಬಗ್ಗೆ ಯೋಚಿಸಿದರು. ಒಂದು ದಿನ ಬೇರೆ ಊರಿಗೆ ಹೋಗಿಬರುವುದಾಗಿ ಹೇಳಿ ಹೊರಟುಹೋದರು. ಮೂರು ದಿನಗಳ ನಂತರ ಮನೆಯವರಿಗೆ ಸುದ್ದಿ ಬಂತು. ಅವರು ದೂರದ ಊರಿನಲ್ಲಿ ಏಕಾಂಗಿಯಾಗಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದರು.

ಆದರೆ ಅವರು ಸಾವನ್ನಪ್ಪುವ ಮುನ್ನ ಬರೆದಿಟ್ಟಿದ್ದ ಪತ್ರದಲ್ಲಿ ತಮ್ಮದು ಆತ್ಮಹತ್ಯೆಯಲ್ಲ ಬದಲಾಗಿ ಇಚ್ಛಾಮರಣ ಎಂದು ಸ್ಪಷ್ಟಪಡಿಸಿದ್ದರು. "ವಯಸ್ಸಾದ ನಂತರ ನಾವು ಬದುಕಿದ್ದರೆ ಈ ಭೂಮಿಗೆ ಮಾತ್ರವಲ್ಲ ನಮ್ಮವರಿಗೂ ನಾವು ಭಾರವಾಗುತ್ತೇವೆ. ನಮ್ಮಿಂದ ಈ ಸ್ಥಿತಿಯಲ್ಲಿ ಸಮಾಜಕ್ಕಾಗಲಿ, ಸಮುದಾಯಕ್ಕಾಗಲಿ, ಸಂಸಾರಕ್ಕಾಗಲಿ



ಸೇವೆ-ಕೊಡುಗೆ ಮಾಡಲು ಆಗುವುದಿಲ್ಲ. ಬದಲಾಗಿ ಅವರೆಲ್ಲರಿಗೆ ಹೊರೆಯಾಗುತ್ತೇವೆ. ಉಸಿರಾಡಿಕೊಂಡು ಇರುವುದಕ್ಕೆ ಪ್ರತೀದಿನ ಔಷಧಿಗಳನ್ನು ತೆಗೆದುಕೊಂಡು ಬದುಕುವುದು ಅದೆಂತಹ ಜೀವನ. ಇದಕ್ಕಿಂತ ಜೀವ ತ್ಯಜಿಸುವುದೇ ಲೇಸು. ಆದರೆ ಇಂತಹ ಸಾವನ್ನು ನಮ್ಮ ಸಮಾಜ ಮತ್ತು ಕಾನೂನು ಆತ್ಮಹತ್ಯೆ ಎಂದೂ, ಅಪರಾಧ ಎಂದೂ ಕರೆಯುತ್ತದೆ. ಆದರೆ ಇದು ಆತ್ಮಹತ್ಯೆಯಲ್ಲ, ಬದಲಾಗಿ ಸ್ಪಷ್ಟವಾಗಿ ಯೋಚಿಸಿದ ನಂತರವೇ ತೆಗೆದುಕೊಂಡ ಇಚ್ಛಾಮರಣದ ನಿರ್ಧಾರ. ನಾನು ಸ್ವಾಭಿಮಾನದಿಂದ, ಸ್ವಾವಲಂಬಿಯಾಗಿ ಬದುಕಲಾಗದೇ ಇತರರ ಮೇಲೆ ಭಾರವಾಗಿ ಬದುಕುವ ಸ್ಥಿತಿಗೆ ಬರುವ ಮುನ್ನ ತೆಗೆದುಕೊಳ್ಳುತ್ತಿರುವ ಹೆಜ್ಜೆ, ಇಂತಹ ನಿರ್ಧಾರಕ್ಕೆ ನಮ್ಮ ಕಾನೂನಿನಲ್ಲಿ ಅವಕಾಶ ಮಾಡಿಕೊಡಬೇಕು. ನನ್ನದು ಆತ್ಮಹತ್ಯೆಯಲ್ಲ, ಬದಲಾಗಿ ಇಚ್ಛಾಮರಣ" ಎಂದು ಅವರು ತಮ್ಮ ಕೊನೆ ಪತ್ರದಲ್ಲಿ ಬರೆದಿಟ್ಟಿದ್ದರು.

ಅಷ್ಟೇ ಅಲ್ಲ, ತಾವು ಹೋಟೆಲ್‌ನಲ್ಲಿ ಮರಣಹೊಂದುವ ಮೂಲಕ ಅನಾನುಕೂಲ ಉಂಟುಮಾಡುತ್ತಿರುವ ಬಗ್ಗೆ ಹೋಟೆಲ್ ಮಾಲೀಕನಿಗೆ ಪಶ್ಚಾತ್ತಾಪ ಪತ್ರವನ್ನು ಬರೆದಿಟ್ಟರು. ಜೊತೆಗೆ ಹೋಟೆಲ್ ಮ್ಯಾನೇಜರ್‌ಗೆ ಕೊಡಬೇಕಿದ್ದ ಬಾಕಿ ಹಣವನ್ನು ಒಂದು ಕವರ್‌ನಲ್ಲಿ ಇಟ್ಟರು. ತಮ್ಮ ಮಕ್ಕಳಿಗೆ ಒಂದಿಷ್ಟು ಸೂಚನೆ, ಸಲಹೆಗಳನ್ನು ಮತ್ತೊಂದು ಪತ್ರದಲ್ಲಿ ಬರೆದರು. ಇದನ್ನೆಲ್ಲ ಅಚ್ಚುಕಟ್ಟಾಗಿ ಮಾಡಿ ಮುಗಿಸಿದ ನಂತರ, ತಮ್ಮ ರೂಮಿನ ಚಿಲಕವನ್ನು ಹಾಕದೆ ಬಾಗಿಲಿನ ಮುಂದೆ ಒಂದು ಕುರ್ಚಿಯನ್ನಿಟ್ಟು, ವಿಷ ಸೇವಿಸಿದರು. ವಿಷ ಅವರ ದೇಹವನ್ನು ಹೊಕ್ಕನಂತರ ಅವರು ತುಂಬಾ ನೋವನ್ನು ಅನುಭವಿಸಿದ್ದು ಅವರು ಮಂಚದ ಮೇಲೆ ಮುದುಡಿಕೊಂಡು ಪ್ರಾಣಬಿಟ್ಟಿದ್ದ ಸ್ಥಿತಿಯೇ ಸೂಚಿಸುತ್ತಿತ್ತು...

ಹೀಗೆ ಹನ್ನೆರಡು ವರ್ಷಗಳ ಹಿಂದೆ ಇಚ್ಛಾಮರಣವನ್ನು ಹೊಂದಿದ್ದು ಬೇರೆ ಯಾರೂ ಅಲ್ಲ, ಬದಲಾಗಿ ನನ್ನ ತಾತ ಎಚ್.ಕೆ. ಸೋಮಸುಂದರ್. ಅವರು ನನ್ನ ಅಮ್ಮನ ತಂದೆ.

ಈಗ ಯಾಕೆ ಅವರ ವಿಷಯ ಎಂದರೆ ಕಳೆದ ಜೂನ್ 3ರಂದು ಅಮೆರಿಕದಲ್ಲಿ ಜಾಕ್ ಕೆವೋರ್ಕಿಯನ್ ಎಂಬ ವೈದ್ಯ ತನ್ನ 83ನೇ ವಯಸ್ಸಿನಲ್ಲಿ ಮೃತನಾದ. ಈತನ ಸಾವನ್ನು ಅಲ್ಲಿನ ಬಹಳಷ್ಟು ಜನ ಸ್ವಾಗತಿಸಿದರು. ಅದಕ್ಕೆ ಕಾರಣ ಜಾಕ್ ಇಚ್ಛಾಮರಣದ ಪ್ರತಿಪಾದಕನಾಗಿದ್ದು ಮತ್ತು ನೂರಕ್ಕೂ ಹೆಚ್ಚು ಜನ ಇಚ್ಛಾಮರಣವನ್ನು ಹೊಂದಲು ನೆರವು ನೀಡಿದ್ದು.

ಬದುಕಿನಲ್ಲಿ ಎದುರಾಗುವ ಮಾನಸಿಕ, ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳಿಗೆ ಆತ್ಮಹತ್ಯೆ ಉತ್ತರವಲ್ಲ ಎಂಬ ನಿಲುವು ನನ್ನದು. ಏಕೆಂದರೆ ಅಂತಹ ಸಮಸ್ಯೆಗಳಿಗೆ ಪರಿಹಾರಗಳು ಇದ್ದೇ ಇರುತ್ತವೆ. ಆದರೆ...

ಒಬ್ಬ ಮನುಷ್ಯನಿಗೆ ಮಾರಣಾಂತಿಕ ಕಾಯಿಲೆಯಾಗಿ ಆತ ಸದ್ಯದಲ್ಲೇ ತನ್ನ ದೇಹ ಮತ್ತು ಚಿಂತನಾಶಕ್ತಿಯ ಮೇಲೆ ಹಿಡಿತವನ್ನು ಕಳೆದುಕೊಳ್ಳುವ ಸ್ಥಿತಿ ಎದುರಾಗಿ ಅದು ಆತನಿಗೆ ಬೇಡವಾಗಿದ್ದರೆ... ಅಥವಾ ಯಾವ ಔಷಧವೂ ನಿವಾರಿಸಲಾಗದಂತಹ ದೈಹಿಕ ನೋವು ಆತನನ್ನು ಕಿತ್ತು ತಿನ್ನುತ್ತಿದ್ದರೆ.... ಕೃತಕ ಯಂತ್ರಗಳನ್ನು ಅವಲಂಬಿಸಿ ಉಸಿರಾಡಿಕೊಂಡು ಕರುಣಾಜನಕವಾಗಿ 'ಬದುಕು' ಸಾಗಿಸಿ ಸಾಯುವುದಕ್ಕಿಂದ ತನಗೆ ಆತ್ಮಗೌರವದ ಸಾವು ಬೇಕೆನಿಸಿದರೆ ಆತ ಏನು ಮಾಡಬೇಕು?

ಇದು ದಯಾಮರಣವಲ್ಲ, ದಯಾಮರಣವೆಂದರೆ ತನಗೆ ತಾನು ನಿರ್ಧಾರ ತಗೆದುಕೊಳ್ಳುವ ಸ್ಥಿತಿಯಲ್ಲಿ ಇಲ್ಲದ ವ್ಯಕ್ತಿಯ ಬದುಕು-ಸಾವಿನ ಬಗ್ಗೆ ಇತರರು ತಗೆದುಕೊಳ್ಳುವ ನಿರ್ಧಾರ. ಮುಂಬೈಯಲ್ಲಿ ಕಳೆದ 37 ವರ್ಷಗಳಿಂದ ಜಗತ್ತಿನ ಯಾವ ಪರಿವೆಯೂ ಇಲ್ಲದೆ ಮಲಗಿರುವ ಅರುಣಾ ಶಾನಭಾಗ್ ಅವರಿಗೆ ಇಂತಹ ದಯಾಮರಣವನ್ನು ಕರುಣಿಸಬೇಕೆಂದು ಬರಹಗಾರ್ತಿ ಪಿಂಕಿ ವಿರಾನಿ ನ್ಯಾಯಾಲಯದ ಮುಂದೆ ಹೋರಾಡಿ ಸೋತಿದ್ದು ಈಗ ಎಲ್ಲರಿಗೆ ಗೊತ್ತಿದೆ.

ಇದು ಆತ್ಮಹತ್ಯೆಯೂ ಅಲ್ಲ.

ಬದಲಾಗಿ ಇದು ಇಚ್ಛಾಮರಣ.

ಇದಕ್ಕೆ ಕಾನೂನಿನಲ್ಲಿ ಅವಕಾಶ ಇರಬೇಕೆಂದು ಮೊತ್ತಮೊದಲ ಬಾರಿಗೆ ಬಹಿರಂಗವಾಗಿ ಪ್ರಚಾರ ಕೈಗೊಂಡವನು, ಅಸಹಾಯಕ ಬದುಕನ್ನು ಎದುರಿಸುವುದರಿಂದ ತಪ್ಪಿಸಿಕೊಳ್ಳಲು ಇಚ್ಛಿಸಿದವರಿಗೆ ಇಚ್ಛಾಮರಣವನ್ನು ಹೊಂದಲು ನೆರವು ನೀಡಿದವನು ಜಾಕ್ ಕೆವೋರ್ಕಿಯನ್.

"ಮರಣ ಹೊಂದುವುದು ಅಪರಾಧವಲ್ಲ" ಎಂದೇ ನಂಬಿದ್ದ ಜಾಕ್ ಅಮೆರಿಕದವನು. ವೃತ್ತಿಯಲ್ಲಿ ರೋಗಶಾಸ್ತ್ರಜ್ಞ (ಪೆಥಾಲಜಿಸ್ಟ್). "ಈ ಜಗತ್ತಿಗೆ ಆಗಮಿಸಲು ಇವತ್ತು ವೈದ್ಯನ ನೆರವು ಬೇಕಿದ್ದರೆ, ಇಲ್ಲಿಂದ ನಿರ್ಗಮಿಸಲೂ ವೈದ್ಯನ ನೆರವು ಪಡೆಯುವುದು ಹೇಗೆ ತಪ್ಪು?" ಎಂದು ಪ್ರಶ್ನಿಸುತ್ತಿದ್ದ ಜಾಕ್. ಅದಕ್ಕೆ ಕಾರಣವೂ ಇತ್ತು, ಸ್ವತಃ ಆತನ ತಾಯಿ ಕ್ಯಾನ್ಸರ್‌ಗೆ ಬಲಿಯಾಗಿದ್ದಳು. ಅದರ ಬಗ್ಗೆ ಜಾಕ್‌ನ ಅಕ್ಕ ಒಮ್ಮೆ ಹೀಗೆ ಹೇಳಿದ್ದಳು: "ಕ್ಯಾನ್ಸರ್ ರೋಗ ನಮ್ಮ ತಾಯಿಯನ್ನು ನಾಶಮಾಡಿದ ರೀತಿಯನ್ನು ನಾನು ಕಣ್ಣಾರೆ ಕಂಡೆ. ಆಕೆಯ ಬುದ್ಧಿಶಕ್ತಿ ಗಟ್ಟಿಯಾಗಿದ್ದರೂ ಆಕೆಯ ದೇಹ ತನ್ನ ಎಲ್ಲ ಶಕ್ತಿಯನ್ನು ಕಳೆದುಕೊಂಡಿತ್ತು. ಆಕೆಗೆ ಕೊಡುತ್ತಿದ್ದ ಇಂಜೆಕ್ಷನ್‌ಗಳಿಂದಾಗಿ ಆಕೆಯ ದೇಹ ಕಪ್ಪು ಮತ್ತು ನೀಲಿ ಬಣ್ಣಕ್ಕೆ ತಿರುಗಿತ್ತು. ಕೋಮಾದಲ್ಲಿದ್ದ ಆಕೆಯ ತೂಕ 25 ಕೆಜಿಗೆ ಇಳಿದಿತ್ತು. ಆಗ 'ಇಂತಹ ಸ್ಥಿತಿಯಲ್ಲೂ ಆಕೆಗೆ ಐವಿ ಕೊಡುತ್ತಾ ಜೀವಂತವಾಗಿ ಇಡುವುದು ಸರಿಯಲ್ಲ' ಎಂದು ನಾನು ವೈದ್ಯರಿಗೆ ಹೇಳಿದರೆ ಅವರು ಒಪ್ಪಲಿಲ್ಲ. ಹೀಗೆ ಆಕೆಯ ದೇಹದೊಳಗೆ ಔಷಧಿಗಳನ್ನು ಸುರಿಯುತ್ತಾ ಬದುಕಿಸಿಟ್ಟುಕೊಳ್ಳುವುದಕ್ಕಿಂತ ನನ್ನ ತಮ್ಮ ಪ್ರತಿಪಾದಿಸುವ ಇಚ್ಛಾಮರಣವೇ ಹೆಚ್ಚು ನೈತಿಕತೆ ಮತ್ತು ಮಾನವೀಯತೆಯಿಂದ ಕೂಡಿದೆ."

ಓರ್ವ ರೋಗಿಯ ಇಚ್ಛೆಯ ವಿರುದ್ಧ ಆತ ನಿಧಾನಕ್ಕೆ, ನೋವುಂಡು ಸಾಯುವಂತೆ ಮಾಡುವುದು ಅಮಾನವೀಯತೆ ಎಂದು ನಂಬಿದ್ದ ಜಾಕ್ ಎರಡು ಯಂತ್ರಗಳನ್ನು ತಯಾರಿಸಿದ. ಐವಿ ಮೂಲಕ ರೋಗಿಗೆ ಮರಣ ಹೊಂದುವ ಔಷಧಿಯನ್ನು ಸರಬರಾಜು ಮಾಡುತ್ತಿದ್ದ ಯಂತ್ರಕ್ಕೆ 'ಡೆತ್ ಮೆಷಿನ್' ಎಂದೂ, ಮುಖಕ್ಕೆ ಮಾಸ್ಕ್ ಮೂಲಕ ಕಾರ್ಬನ್ ಮಾನಾಕ್ಸೈಡ್ (ವಿಷಾನಿಲ)ವನ್ನು ಸರಬರಾಜು ಮಾಡುತ್ತಿದ್ದ ಯಂತ್ರಕ್ಕೆ 'ದಯಾ ಮೆಷಿನ್' ಎಂದು ಹೆಸರಿಟ್ಟಿದ್ದ. "ಸಾವೇ ನನ್ನ ವೈಶಿಷ್ಟ್ಯ" ಎನ್ನುತ್ತಿದ್ದ ಜಾಕ್‌ನ ಈ ಯಂತ್ರಗಳ ಉಪಯೋಗವನ್ನು ಪ್ರಥಮವಾಗಿ 1990ರಲ್ಲಿ ಪಡೆದವಳು ಜಾನೆಟ್ ಆಡ್ಕಿನ್ಸ್ ಎಂಬಾಕೆ. ಆಲ್ಝೈಮರ್ಸ್ ರೋಗದಿಂದ ಆಕೆ ಬಳಲುತ್ತಿದ್ದಳು. ಈ ರೋಗದಿಂದಾಗಿ ಆಕೆ ಕ್ರಮೇಣ ತಾನು ಎಲ್ಲಿದ್ದೇನೆ, ತಾನು ಯಾರು ಎಂಬುದನ್ನೂ ಮರೆಯುವ ಹಂತಕ್ಕೆ ಹೋಗುತ್ತಿದ್ದಳು. ಅಂತಹ ಸ್ಥಿತಿಯನ್ನು ತಲುಪುವ ಮುನ್ನ ತಾನು ಇಚ್ಛಾಮರಣ ಹೊಂದಬೇಕೆಂದು ಆಕೆ ನಿರ್ಧರಿಸಿದಳು. ಆಕೆಗೆ ಜಾಕ್ ತನ್ನ ಒಂದು ಯಂತ್ರವನ್ನು ಅಳವಡಿಸಿದ. ಆನಂತರ ಆಕೆ ಅದರಲ್ಲಿನ ಒಂದು ಬಟನ್ ಅನ್ನು ಒತ್ತುವ ಮೂಲಕ ಇಚ್ಛಾಮರಣವನ್ನು ಹೊಂದಿದಳು.

ಆಗ ಜಾಕ್ ವಿರುದ್ಧ ಕೊಲೆ ಆರೋಪವನ್ನು ಆ ರಾಜ್ಯದ ಸರ್ಕಾರ ಮಾಡಿತು. ಆದರೆ ಆಗಿನ ಕಾಲದಲ್ಲಿ ಇಂತಹ 'ನೆರವು ಪಡೆದ ಆತ್ಮಹತ್ಯೆ' ಕುರಿತು ಯಾವುದೇ ಕಾನೂನು ಇರಲಿಲ್ಲವಾದ್ದರಿಂದ ಜಾಕ್ ಬಿಡುಗಡೆ ಹೊಂದಿದ. ಇದಾದನಂತರ ಸುಮಾರು 130 ಜನ ಜಾಕ್‌ನ ನೆರವು ಪಡೆದು ಇಚ್ಛಾಮರಣ ಹೊಂದಿದರು. ಆದರೆ ಅವರಿಗೆ ನೆರವು ನೀಡುವ ಮುನ್ನ ಅವರು ನಿಜವಾಗಲೂ ಮಾರಣಾಂತಿಕ ಕಾಯಿಲೆಯಿಂದ ಬಳಲುತ್ತಿದ್ದಾರೆಯೇ, ಇಂತಹ ನಿರ್ಧಾರ ತೆಗೆದುಕೊಳ್ಳುವ ಮಾನಸಿಕ ಸ್ಥಿತಿಯಲ್ಲಿ ಅವರಿದ್ದಾರೆಯೇ ಎಂದು ಜಾಕ್ ಎಚ್ಚರ ವಹಿಸುತ್ತಿದ್ದ. ಈ ಎಲ್ಲ ಸಾವುಗಳನ್ನು ಕುರಿತಂತೆ ಜಾಕ್ ಹಲವಾರು ಮೊಕದ್ದಮೆಗಳನ್ನು ಸತತವಾಗಿ ಎದುರಿಸಿದ. ಇವುಗಳ ವಿಚಾರಣೆ ಹಲವಾರು ವರ್ಷಗಳ ಕಾಲ ನಡೆದು ಆತ ಎಲ್ಲೂ ನೇರವಾಗಿ ಅವರೆಲ್ಲರ ಸಾವಿಗೆ ಕಾರಣವಾಗಿಲ್ಲ ಎಂಬ ಆಧಾರದ ಮೇಲೆ ಖುಲಾಸೆಗೊಳ್ಳುತ್ತಿದ್ದ. ಈ ಸಮಯದಲ್ಲೇ ಜನ ಆತನನ್ನು 'ಡಾಕ್ಟರ್ ಡೆತ್' ಎಂದು ಕರೆಯಲು ಶುರು ಮಾಡಿದರು.

ಆದರೆ 1998ರಲ್ಲಿ ಜಾಕ್‌ನನ್ನು ಜೈಲಿಗೆ ದೂಡುವಂತಹ ಸಾಕ್ಷಿಯನ್ನು ಆತನೇ ಟಿವಿ ಚಾನೆಲ್ ಒಂದಕ್ಕೆ ಒದಗಿಸಿದ. ಅದು ಥಾಮಸ್ ಯೂಕ್ ಎಂಬಾತ ಇಚ್ಛಾಮರಣವನ್ನು ಹೊಂದಿದ ಪ್ರಕರಣದ ವೀಡಿಯೋ. ಥಾಮಸ್ ಎಂತಹ ರೋಗದಿಂದ ಬಳಲುತ್ತಿದ್ದನೆಂದರೆ ಆತ ದೇಹದಲ್ಲಿನ ಎಲ್ಲ ನರಗಳ ಮೇಲೆ ನಿಯಂತ್ರಣವನ್ನು ಕಳೆದುಕೊಂಡಿದ್ದ. ಆದರೆ ಆತನ ಯೋಚನಾಶಕ್ತಿ ಗಟ್ಟಿಯಾಗಿತ್ತು. ಆತ ಹಾಗೇ ಬದುಕಿದ್ದರೆ ಒಂದು ದಿನ ಅವನ ಅರಿವಿಗೆ ಬರುವಂತೆ ಆತನ ದೇಹ ಆತನನ್ನು ಉಸಿರುಗಟ್ಟಿಸಿ ಸಾಯಿಸುತ್ತಿತ್ತು. ಅದು ಥಾಮಸ್‌ಗೆ ಬೇಕಿರಲಿಲ್ಲ. ಆತ ಜಾಕ್‌ನ ನೆರವು ಕೇಳಿದಾಗಲೂ ಇತರರಂತೆ ಜಾಕ್ ತಯಾರಿಸಿದ್ದ ಯಂತ್ರದ ಬಟನ್ ಅನ್ನೂ ತಾನೇ ಒತ್ತುವ ಶಕ್ತಿ ಥಾಮಸ್‌ಗೆ ಇರಲಿಲ್ಲ. ಆಗ ಪ್ರಥಮ ಬಾರಿಗೆ ಜಾಕ್‌ನೇ ಯಂತ್ರದ ಬಟನ್ ಒತ್ತಿದ್ದ. ಅದರ ವೀಡಿಯೋ ಅನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು. ಆಗ ಜಾಕ್ ಕೊಲೆ ಮಾಡಿರುವ ಅಪರಾಧಿ ಎಂದು ತೀರ್ಪು ನೀಡಿದ ನ್ಯಾಯಾಧೀಶರು ಅವನಿಗೆ 26 ವರ್ಷ ಜೈಲು ಶಿಕ್ಷೆ ನೀಡಿದರು.

1999ರಿಂದ 2007ರ ತನಕ ಎಂಟು ವರ್ಷಗಳನ್ನು ಜಾಕ್ ಜೈಲಿನಲ್ಲಿ ಕಳೆದ. ಜೈಲಿನಲ್ಲಿದ್ದಾಗ ಆತನಿಗೆ ಹೆಪಾಟೈಟಿಸ್ ಕಾಯಿಲೆ ಅಂಟಿಕೊಂಡಿತು. ಆಗ ತನಗೆ ಬಿಡುಗಡೆ ಕೊಟ್ಟರೆ ತಾನು ಯಾರಿಗೂ ಇಚ್ಛಾಮರಣವನ್ನು ಹೊಂದಲು ನೆರವು ನೀಡುವುದಿಲ್ಲ ಎಂದು ನ್ಯಾಯಾಲಯಕ್ಕೆ ಭರವಸೆ ಕೊಟ್ಟ. ಅದರ ಆಧಾರದ ಮೇಲೆ ಜಾಕ್‌ನನ್ನು ಜೈಲಿನಿಂದ ಬಿಡುಗಡೆ ಮಾಡಲಾಯಿತು.

ಇಚ್ಛಾಮರಣದ ಪ್ರತಿಪಾದಕನಾಗಿದ್ದ ಜಾಕ್ ಆ ಕಾರಣಕ್ಕೇ ಅಮೆರಿಕದ ಸಂಪ್ರದಾಯಸ್ಥರ ಕೋಪಕ್ಕೆ ತುತ್ತಾಗಿದ್ದ, ಜೈಲುವಾಸ ಅನುಭವಿಸಿದ್ದ. ಆದರೆ ಆತ ಹಾಕಿಕೊಟ್ಟ ಹೆಜ್ಜೆಯನ್ನು ಆಧರಿಸಿಯೇ ಇವತ್ತು ಅಮೆರಿಕದ ಹಲವು ರಾಜ್ಯಗಳಲ್ಲಿ ಮತ್ತು ಯೂರೋಪಿನ ಹಲವು ದೇಶಗಳಲ್ಲಿ ಇಚ್ಛಾಮರಣವನ್ನು ಬೆಂಬಲಿಸುವ ಕಾನೂನುಗಳು ಅಸ್ತಿತ್ವಕ್ಕೆ ಬಂದಿವೆ.

ಜಾಕ್ ಕೆವೋರ್ಕಿಯನ್ ಬದುಕನ್ನು ಆಧರಿಸಿ ಕಳೆದ ವರ್ಷ 'ಯು ಡೋಂಟ್ ನೋ ಜಾಕ್' ಎಂಬ ಚಲನಚಿತ್ರ ತಯಾರಾಗಿತ್ತು. ಅದರಲ್ಲಿ ಜಾಕ್‌ನ ಪಾತ್ರದಲ್ಲಿ ಪ್ರಖ್ಯಾತ ನಟ ಆಲ್ ಪಚಿನೋ ನಟಿಸಿದ್ದ. ಆ ಚಿತ್ರಕ್ಕೆ ಹಲವಾರು ಪ್ರಶಸ್ತಿಗಳೂ ಲಭಿಸಿದ್ದವು.

ಎಂತಹದ್ದೇ ರೋಗ ಮತ್ತು ನೋವು ಇದ್ದರೂ ಇಚ್ಛಾಮರಣವನ್ನು ಹೊಂದುವುದು ನಿಸರ್ಗಕ್ಕೆ ಮತ್ತು ಧರ್ಮ ಶಾಸ್ತ್ರಗಳಿಗೆ ವಿರುದ್ಧವಾದದ್ದು ಎಂಬುದು ಹಲವು ಜನರ ಅಭಿಪ್ರಾಯ. ಆದರೆ ಅಂತಹವರಿಗೆ ಮಾರಣಾಂತಿಕ ಕಾಯಿಲೆಗಳಿಂದ ತತ್ತರಿಸುತ್ತಿರುವವರ ನೋವು ಅರ್ಥವಾಗುವುದಿಲ್ಲ ಎನ್ನುತ್ತಿದ್ದ ಜಾಕ್. "ನನ್ನ ವಿರೋಧಿಗಳೊಂದಿಗೆ ನಾನು ಸದಾ ಚರ್ಚೆಗೆ ಸಿದ್ಧ. ಆದರೆ ಒಂದು ಶರತ್ತಿನ ಮೇಲೆ. ಅವರು 72 ಗಂಟೆಗಳ ಕಾಲ ವ್ಹೀಲ್‌ಚೇರ್‌ನಲ್ಲಿ ಅಲುಗಾಡದಂತೆ ಬಂಧಿತರಾಗಬೇಕು. ನಳಿಕೆಯನ್ನು ತಮ್ಮ ದೇಹಕ್ಕೆ ತೂರಿಸಿಕೊಂಡು ಟಾಯ್ಲೆಟ್‌ಗೆ ಹೋಗುವುದರಿಂದ, ಸ್ನಾನ, ಊಟ, ಎಲ್ಲದಕ್ಕೂ ಬೇರೆಯವರನ್ನು ಅವಲಂಬಿಸಬೇಕು. ದೈಹಿಕವಾಗಿ ಅಪಾರ ಯಾತನೆಯನ್ನು ಅನುಭವಿಸಬೇಕು. ಇಷ್ಟೆಲ್ಲ ಆದ ನಂತರ ಅವರು ನನ್ನೊಂದಿಗೆ ವಾದಕ್ಕೆ ಬರಬಹುದು."

ಆತ್ಮಹತ್ಯೆ ತಪ್ಪು, ಆದರೆ ಯಾವುದೋ ಒಂದು ಘಟ್ಟದಲ್ಲಿ ನನ್ನ ತಾತನಿಗೆ ಅನ್ನಿಸಿದಂತೆ ನಾವು ಸಾಕಷ್ಟು ಕಾಲ ಬದುಕಿದ್ದೇವೆ ಎಂದೋ ಅಥವಾ ನಾವು ತುಂಬಾ ನೋವಿನಲ್ಲಿ ಬದುಕುತ್ತಿದ್ದೇವೆ ಎಂದೋ ಯಾರಿಗಾದರೂ ಅನ್ನಿಸಿದರೆ ಒಂದು ನಾಗರಿಕ ಸಮಾಜದಲ್ಲಿ ಅಂಥವರು ವಿಷ ಸೇವಿಸುವುದು, ನೇಣಿಗೆ ಶರಣಾಗುವುದು ಅಥವಾ ಬೆಂಕಿ ಹಚ್ಚಿಕೊಂಡು ಸಾಯುವುದಕ್ಕಿಂತ ಯಾವುದೇ ನೋವೂ ಇಲ್ಲದಂತಹ, ಗೌರವದ ಇಚ್ಛಾಮರಣವನ್ನು ಹೊಂದುವ ಅವಕಾಶ ಇರಬೇಕಲ್ಲವೇ...

ಬಾಗಲಕೋಟೆ: ವಂಚಕಿ ಅಕ್ಕಮ್ಮಂಗೆ ಪೊಲೀಸ್ ರಕ್ಷಣೆ!

ಮೈಮೇಲಿರುವ ಖಾಕಿ ಕುರುಹಿನ ಹೊರತಾಗಿ ಜಿಲ್ಲೆಯ ಪೊಲೀಸರ್ಯಾರೂ ಪೊಲೀಸರಂತೆ ವರ್ತಿಸುತ್ತಿಲ್ಲ. ಈ ಮಂದಿ ಅಡಿಗಡಿಗೆ ಮಾಡುತ್ತಿರುವ ಭಾನಗಡಿಗಳನ್ನು ಸಹಿಸಿ ಸಾಕಾಗಿಹೋಗಿರುವ ಜನರಂತೂ ಇಲಾಖೆಯ ಮೇಲೆ ನಂಬಿಕೆಯನ್ನೇ ಕಳೆದುಕೊಂಡಿದ್ದಾರೆ. ಬಹುತೇಕ ಅಧಿಕಾರಿಗಳು ಚಿಲ್ಲಿಪಡೆಯ ಕಾರಕೂನಿಕೆಯಲ್ಲೇ ಬ್ಯುಸಿಯಾಗಿ ಕಳ್ಳಕಾಕರೊಂದಿಗೆ ನೆಂಟಸ್ತನ ಕುದುರಿಸಿಕೊಂಡ ಪರಿಣಾಮವಾಗಿ ದಂಧೆಕೋರರು, ವಂಚಕರು ಹಾದಿಬೀದಿಗಳಲ್ಲಿ ಪಿತುಗುಡಲಾರಂಭಿಸಿದ್ದಾರೆ. ಇಂಥವರು ಮುಗ್ಧ ನಾಗರಿಕರಿಗೆ ಹೀನಾಯವಾಗಿ ಅನ್ಯಾಯ ಮಾಡಿದರೂ ಖಾಕಿ ಖದೀಮರಿಗೆ ಕರ್ತವ್ಯ ಪ್ರಜ್ಞೆ ಜಾಗೃತವಾಗುತ್ತಿಲ್ಲ.

ಮೇಲ್ಕಂಡ ಎಲ್ಲಾ ವಿಚಾರಗಳಿಗೂ ಸಮರ್ಥನೆಯಂತಿರುವ ಘಟನೆಯೊಂದು ಇತ್ತೀಚೆಗೆ ನಡೆದುಹೋಗಿದೆ. ಅಕ್ಕಮ್ಮ ಮಣ್ಣೂರ ಎಂಬ ಪ್ರಳಯಾಂತಕಿಯೊಬ್ಬಳು ಕೂಲಿಕಾರ ಮಹಿಳೆಯರ ಹೆಸರಲ್ಲಿ ಸಾಲ ಎತ್ತಿ ಏಕಾಏಕಿ ಊರು ಬಿಟ್ಟಿದ್ದಾಳೆ. ತಂತಮ್ಮ ತಲೆ ಮೇಲೆ ಲಕ್ಷಾಂತರ ರೂಪಾಯಿ ಸಾಲ ಮಡಗಿ ಕೈಯೆತ್ತಿದ್ದರಿಂದ ಕಂಗಾಲಾದ ಬಡ ಜನತೆ ಠಾಣೆಗೆ ದಾಂಗುಡಿಯಿಟ್ಟು ಬಾಯಿಬಾಯಿ ಬಡಕೊಂಡಿದ್ದರು. ಇವರಿಗೆ ನ್ಯಾಯ ಒದಗಿಸಬೇಕಾದ ಪೊಲೀಸರು ಮಾತ್ರ ಅಸೀಮ ಆಲಸ್ಯ ಹೊದ್ದುಕೊಂಡು ಯಾರದ್ದೋ ಮುಲಾಜಿಗೆ ಬಿದ್ದಂತೆ ವರ್ತಿಸಿದ ಪೊಲೀಸರು ವಂಚಕರಿಗೆ ಪರೋಕ್ಷ ಬೆಂಬಲ ನೀಡಿ ಸಹಕರಿಸಿದರು.

ಇದೀಗ ನೂರಾರು ಬಡ ಮಹಿಳೆಯರ ಬದುಕಿಗೆ ಸಾಲದ ಚಪ್ಪಡಿ ಎಳೆದು ಮಾಯವಾಗಿರುವ ಅಕ್ಕಮ್ಮ ಮಣ್ಣೂರ ಅಂತಿಂಥಾ ಹೆಣ್ಣಲ್ಲ. ಮೂಲತಃ ಬಿಜಾಪುರ ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕಿನ ತೆಲಗಿ ಗ್ರಾಮದವಳಾದ ಈಕೆ ಸೈನಿಕನ ಹೆಂಡತಿ. ಆತ ಸ್ವಯಂ ನಿವೃತ್ತಿ ಹೊಂದಿ ವಾಪಸಾದ ಬಳಿಕ ಬಾಗಲಕೋಟೆ ನವನಗರದ ಕೂಲಿಕಾರರ ಕಾಲೋನಿಯಲ್ಲೊಂದು ಕೆಲಸಕ್ಕೆ ಸೇರಿದ. ಈತನದ್ದು ಬಸವೇಶ್ವರ ಸಂಸ್ಥೆಯಲ್ಲಿ ಸೆಕ್ಯುರಿಟಿ ಕೆಲಸ. ತದನಂತರ ಅಲ್ಲೇ ಒಂದು ಮನೆ ಹಿಡಿದು ಹೆಂಡತಿ ಅಕ್ಕಮ್ಮಳೊಂದಿಗೆ ನೆಲೆ ನಿಂತ.

ಹೇಳಿಕೇಳಿ ಇದು ಬಡ ಕೂಲಿಕಾರರೇ ವಾಸಿಸುವ ಏರಿಯಾ. ಮಾತಿನ ಮೋಡಿ ಬಲ್ಲ ಅಕ್ಕಮ್ಮ ಆಸುಪಾಸಿನ ಹೆಂಗಸರನ್ನೆಲ್ಲ ಬಹುಬೇಗ ಪರಿಚಯ ಮಾಡಿಕೊಂಡಳು. ಕೂಲಿಕಾರ ಮಹಿಳೆಯರ ಮುಂದೆ ತನ್ನ ಕಷ್ಟಗಳನ್ನೆಲ್ಲ ಹರಡಿ 'ಹೊಲಿಗಿ ಕೆಲ್ಸನಾರ ಕಲ್ಸಿ, ನಂಗೂ ಒಂದ್ ಉದ್ಯೋಗ ಅಕ್ಕೇತಿ' ಅಂತ ಅಂಗಲಾಚಿ ಕನಿಕರ ಗಿಟ್ಟಿಸಿಕೊಂಡಳು.



ಹೀಗೆ ಎಲ್ಲರಿಗೂ ಹತ್ತಿರಾದ ಅಕ್ಕಮ್ಮ ಅದೊಂದು ದಿನ ಎಲ್ಲರೂ ಸೇರಿ ಮಹಿಳಾ ಸಂಘ ಮಾಡೋಣವೆಂಬ ಹೊಸಾ ಆಲೋಚನೆಯೊಂದನ್ನು ಹೊರಬಿಟ್ಟು ಅದರ ಭರಪೂರ ಲಾಭಗಳನ್ನು ಬಣ್ಣ ಹಚ್ಚಿ ಒದರಿದಳು. ಕೂಲಿನಾಲಿ ಬಿಟ್ಟು ಬೇರೆ ಅರಿವಿರದ ಅಮಾಯಕ ಮಹಿಳೆಯರಿಗೆ ಈಕೆಯ ವಂಚಕ ಬುದ್ಧಿ ಅದು ಹೇಗೆ ಅರ್ಥವಾದೀತು? ಆದುದರಿಂದಲೇ ಕಷ್ಟಪಟ್ಟು ಕೂಡಿಸಿಟ್ಟ ಹಣವನ್ನೆಲ್ಲ ಅಕ್ಕಮ್ಮನ ಉಡಿ ತುಂಬಿಸಿ ಕನಸು ಕಾಣಹತ್ತಿದರು.

ಹಾಗೆ ಪಾಪದ ಹೆಂಗಸರಿಂದ ಹಣ ಪೀಕಿದ ಅಕ್ಕಮ್ಮ ಸ್ತ್ರೀ ಸಂಘಟನೆಯೊಂದನ್ನು ಸ್ಥಾಪಿಸಿ ನಾನಾ ಹೆಸರಿಂದ ಲಾಭ ಪಡೆಯಲು ಶುರುವಿಟ್ಟಳು. ಬಡಕೂಲಿಕಾರ ಮಹಿಳೆಯರ ಫೋಟೋ, ಆದಾಯ ಪತ್ರ, ಜಾತಿ ಸರ್ಟಿಫಿಕೇಟ್‌ಗಳನ್ನು ಪಡೆದು ಹತ್ತಾರು ಜೆರಾಕ್ಸ್ ಮಾಡಿಸಿ ಒಬ್ಬರ ಹೆಸರಿನ ಮೇಲೆ ಬೇರೆ ಬೇರೆ ಕಡೆಯಿಂದ ಸಾಲ ಎತ್ತಲಾರಂಭಿಸಿದಳು. ಅದರಲ್ಲೇ ಒಂದಷ್ಟನ್ನು ಮಹಿಳೆಯರಿಗೆ ನೀಡುತ್ತಾ ಆಪತ್ಬಾಂಧವಿನ ಪೋಸು ಕೊಡಲು ಶುರುವಿಟ್ಟಳು.

ಆ ಬಡ ಮಹಿಳೆಯರಿಗಾದರೂ ಕಷ್ಟಕಾಲದಲ್ಲಿ ಸಿಗುತ್ತಿದ್ದ ಕೈಕಾಸು ಒಂದಷ್ಟು ನೆಮ್ಮದಿ ನೀಡುತ್ತಿತ್ತು. ಆದರೆ ಈ ಮುಗ್ಧರಿಗೆ ತಮ್ಮದೇ ತಲೆ ಮೇಲೆ ಲಕ್ಷಾಂತರ ರೂಪಾಯಿ ಸಾಲದ ಹುತ್ತ ಕಟ್ಟುತ್ತಿದೆಯೆಂಬ ಅಂಶ ಅರಿವಾಗಲೇ ಇಲ್ಲ. ಈ ರೀತಿ ಬಡವರ ಹೆಸರಲ್ಲಿ ಸಾಲ ಎತ್ತಿ ಕೊಬ್ಬಿದ ಅಕ್ಕಮ್ಮ ತನ್ನ ತಮ್ಮ ಹಾಗೂ ಸಹೋದರಿಯನ್ನೂ ಬಾಗಲಕೋಟೆಗೆ ಕರೆತಂದು ಮನೆ ಮಾಡಿಕೊಟ್ಟಳು. ನೋಡನೋಡುತ್ತಲೇ ಈಕೆ ಯಾವ ಪರಿ ಬೆಳೆದಳೆಂದರೆ ಹೊಚ್ಚ ಹೊಸ ಕಾರ್ ಖರೀದಿಸಿ ಸವಾರಿ ಆರಂಭಿಸಿ ಅದೇ ಕಾರ್‌ನ ಮೇಲೆ ಎರಡ್ಮೂರು ಬ್ಯಾಂಕ್‌ಗಳಲ್ಲಿ ಸಾಲ ಎತ್ತಿದಳು. ಈ ರೀತಿ ಹಡಬೆ ಹಣ ಕೈಸೇರುತ್ತಲೇ ಕೂಲಿಕಾರ ಮಹಿಳೆಯಿಂದ ದೂರಾಗಿ ಶ್ರೀಮಂತರ ಸಹವಾಸಕ್ಕೆ ಬಿದ್ದ ಅಕ್ಕಮ್ಮ ಥರಥರದ ಖಯಾಲಿ ಅಂಟಿಸಿಕೊಳ್ಳುವುದಕ್ಕೇನೂ ತಡವಾಗಲಿಲ್ಲ.

ಈಕೆ ಅಷ್ಟೂ ವ್ಯವಹಾರ ನಡೆಸಿದ್ದು ಬೋಗಸ್ ಬ್ಯಾಂಕ್‌ನ ಮೂಲಕ. ಅದು ಆಂಧ್ರ ಮೂಲದ ಸ್ಪಂದನಾ ಎಂಬ ದಗಲ್ಬಾಜಿ ಬ್ಯಾಂಕ್. ಈ ಬ್ಯಾಂಕ್‌ನ ಮಂದಿ ಹಳ್ಳಿ ಹಳ್ಳಿಗಳಿಗೆ ತೆರಳಿ ಹೆಂಗಸರಿಗೆ ಸಾಲ ನೀಡಿ ಪ್ರತೀವಾರ ವಸೂಲಿ ದಂಧೆ ನಡೆಸುತ್ತದೆ. ಈ ಬ್ಯಾಂಕ್ ಎಂಥಾ ಬೋಗಸ್ ಎಂದರೇ ಅಧಿಕೃತ ಪಾಸ್‌ಬುಕ್ ವ್ಯವಸ್ಥೆ ಸಹ ಇಲ್ಲ. ಇಂಥಾ ಬ್ಯಾಂಕ್‌ನ ವಂಚಕ ಮ್ಯಾನೇಜರ್‌ಗಳನ್ನು ಕೆಡವಿಕೊಂಡ ಅಕ್ಕಮ್ಮ ಕೂಲಿ ಮಹಿಳೆಯರನ್ನು ಸರಿಯಾಗಿ ಯಾಮಾರಿಸಿದ್ದಳು. ಇದಲ್ಲದೆ ಈಕೆ ತನ್ನ ಸಂಬಂಧಿಯೊಬ್ಬರು ಪೊಲೀಸ್ ಇಲಾಖೆಲಿದ್ದು ನಿವೃತ್ತಿ ಹೊಂದಿದ್ದಾರೆಂದು ಮೊದಲೇ ಹೆದರಿಸಿದ್ದರಿಂದ ಚಿಕ್ಕಪುಟ್ಟ ಗುಮಾನಿಗಳು ಬಂದರೂ ಮಹಿಳೆಯರು ಪ್ರಶ್ನಿಸದೆ ಸುಮ್ಮನಿದ್ದರು.

ಇಂಥಾ ದಗಲ್ಬಾಜಿ ನಡೆಸುತ್ತಾ ಬಂದ ಅಕ್ಕಮ್ಮ ಕಳೆದ ತಿಂಗಳು ಹೊಸಾ ಆಟ ಶುರುವಿಟ್ಟಳು. ತನ್ನ ಸಂಬಂಧಿಕರ ಮದುವೆ ಇರುವುದರಿಂದ ಹಣ ಬೇಕಿದೆಯೆಂದು ಹೇಳಿ ೫೦-೬೦ ಜನರ ಹೆಸರಲ್ಲಿ ಬಾಪೂಜಿ ಬ್ಯಾಂಕ್‌ನಲ್ಲಿ ಸಾಲ ಎತ್ತಿದಳು. ಕೆಲವರ ಒಡವೆ ಗಿರವಿ ಇಟ್ಟಿದ್ದಲ್ಲದೆ, ಮತ್ತೆ ಕೆಲ ಸಹಿಗಳನ್ನು ತಾನೇ ಫೋರ್ಜರಿ ಮಾಡಿದಳು. ಹಾಗೆ ಕೈತುಂಬಾ ಕಾಸು ಹಿಡಿದು ಕಾರು ಹತ್ತಿ ಕಣ್ಮರೆಯಾದ ಅಕ್ಕಮ್ಮ ವಾರ ಕಳೆದರೂ ಅತ್ತ ತಲೆ ಹಾಕಲಿಲ್ಲ. ಫೋನ್ ಕೂಡಾ ಸ್ವಿಚ್ಡ್ ಆಫ್. ತೀರಾ ಬ್ಯಾಂಕ್‌ನಲ್ಲಿ ವಿಚಾರಿಸಿದರೆ ಲಕ್ಷಾಂತರ ರೂಪಾಯಿ ಹಣ ಎತ್ತಿರುವ ವಿಚಾರ ತಿಳಿದಿದೆ. ಅದೆಲ್ಲವೂ ಬಡಮಹಿಳೆಯರ ಹೆಸರಲ್ಲೇ ಇರುವುದು ಕಂಡು ಎಲ್ಲರೂ ಕಂಗಾಲಾಗಿದ್ದಾರೆ. ಇದಾದದ್ದೇ ವಂಚನೆಯ ಅರಿವಾಗಿ ಎಲ್ಲರೂ ಅಕ್ಕಮ್ಮನ ಮನೆ ಮುಂದೆ ಜಮಾಯಿಸಿ ದಾಂಧಲೆಯೆಬ್ಬಿಸಿದ್ದಾರೆ. ಇದೆಲ್ಲದರಿಂದಾಗಿ ಅಂತೂ ಪೊಲೀಸರ ಎಂಟ್ರಿಯಾಯಿತು. ಅಕ್ಕಮ್ಮನ ವಿರುದ್ಧ ದೂರು ದಾಖಲಾಗಿ ಟಿವಿ ಚಾನೆಲ್ಲುಗಳಲ್ಲು ಸುದ್ದಿಯಾಯಿತು. ಆದರೆ ಬಡಜನತೆಗೆ ಸಹಾಯವಾಗುವಂಥ ಯಾವುದೇ ಬೆಳವಣಿಗೆಗಳಾಗಲಿಲ್ಲ.

ಪೊಲೀಸರಂತೂ ನಾಮ ತೀಡಿ ನಾಪತ್ತೆಯಾದ ಅಕ್ಕಮ್ಮನನ್ನು ಹುಡುಕುವುದಿರಲಿ, ಅಲ್ಲೇ ಇದ್ದ ಆಕೆಯ ಸಹೋದರ ಸಹೋದರಿಯರನ್ನು ವಿಚಾರಿಸಲೂ ಮುಂದಾಗಲಿಲ್ಲ. ಎಸ್ಪಿ ಅಭಿಶೇಕ್ ಗೋಯಲ್ ಕೂಡ ಈ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ಇದೆಲ್ಲದರ ನಡುವೆ ಬಡ ಮಹಿಳೆಯರಿಗೆ ಸಾಲ ಕೊಟ್ಟ ಬ್ಯಾಂಕುಗಳ ಕಾಟ ಶುರುವಾಯಿತು. ಈ ಬಗ್ಗೆ ಪೊಲೀಸರಿಗೆ ತಿಳಿಸಿದರೆ ಮಳ್ಳರಂತೆ ಕೈಚೆಲ್ಲಿ ಕೂತರು. ಇದರಿಂದ ಬೇಸತ್ತ ಕೆಲ ಮಹಿಳೆಯರು ಆತ್ಮಹತ್ಯೆಗೆ ಪ್ರಯತ್ನಿಸಿದ್ದೂ ನಡೆಯಿತು. ಪರಿಸ್ಥಿತಿ ಹೀಗಿರುತ್ತಲೇ ಕೆಲದಿನದ ಹಿಂದೆ ತಮ್ಮನ ಕಾರಿನಲ್ಲಿ ಅಕ್ಕಮ್ಮನ ಆಕೃತಿ ಕಂಡಿತು. ಈ ವಿಚಾರ ತಿಳಿಸಿದರೂ ಸಹ ಪೊಲೀಸರದ್ದು ಅದೇ ಉಡಾಫೆ.

ಈ ರೀತಿ ಪೊಲೀಸರ ನೆರವಿನಿಂದಲೇ ಬಚಾವಾಗುತ್ತಾ ಬಂದ ಅಕ್ಕಮ್ಮ ಬೇಲ್ ಪಡೆದು ಖುದ್ದಾಗಿ ಬಂದು ಅವರ ವಿವರವನ್ನು ಪೊಲೀಸರಿಗೆ ಕೊಟ್ಟಿದ್ದಾಳೆ. ಈ ವಿಚಾರ ತಿಳಿದು ಜನ ಠಾಣೆ ಮುಂದೆ ಜಮಾಯಿಸಿದಾಗಲೂ ಪೊಲೀಸರೇ ಆಕೆಯನ್ನು ಪಾರು ಮಾಡಿದರು. ಪೊಲೀಸ್ ಇಲಾಖೆಯ ಈ ನಿರ್ಲಜ್ಜ ನಡವಳಿಕೆಗೆ ಕಾರಣ ಸರ್ಕಲ್ ಇನ್ಸ್‌ಪೆಕ್ಟರ್ ಆರ್.ಎಸ್. ಬೆಂತೂರ. ಈತನ ಆಟದ ಮುಂದೆ ಹಾಲಿ ಸಬ್‌ಇನ್ಸ್‌ಪೆಕ್ಟರ್ ಗುರುನಾಥ ಚೌವ್ಹಾಣ್‌ರ ಒಳ್ಳೆತನಗಳು ವರ್ಕೌಟ್ ಆಗುತ್ತಿಲ್ಲ. ಇದರ ನಡುವೆಯೂ ಜನ ಅಟಕಾಯಿಸಿಕೊಂಡಾಗ ಆಕೆ 'ನನ್ನ ಬಗ್ಗೆ ನೀವು ಮಾಧ್ಯಮಗಳಲ್ಲಿ ಬರುವ ಹಾಗೆ ಮಾಡಿದ್ದೀರಿ. ನಾನು ಬಿಡಿಗಾಸೂ ಕೊಡೋದಿಲ್ಲ' ಅಂತ ಬಿಡುಬೀಸಾಗಿ ಹೇಳಿದ್ದಾಳೆ. ಏನ್ ಕಿಸಿತೀರೋ. ಕಿಸೀರಿ ಅಂತಲೂ ಆವಾಜು ಹಾಕಿದ್ದಾಳೆ.

ಇದೆಲ್ಲ ಕಣ್ಣೆದುರೇ ನಡೆದರೂ ಪೊಲೀಸರದ್ದು ಯಥಾಸ್ಥಿತಿ. ಇಂಥಾ ಅಡ್ನಾಡಿಗಳ ಕಣ್ಗಾವಲಿನಲ್ಲಿರುವ ಯಾವ ದೇಶವೇ ಆದರೂ ಅದು ಖಂಡಿತವಾಗಿಯೂ ಬಾಗಲಕೋಟೆಯ ಅವಸ್ಥೆಗೀಡಾಗುತ್ತದೆ. ಇಂಥಾ ಸ್ಥಿತಿಯ ನಡುವೆ ಅಕ್ಕಮ್ಮನಿಂದ ವಂಚಿತರಾದ ಅಮಾಯಕ ಹೆಂಗಸರಿಗೆ ನ್ಯಾಯ ಒದಗಿಸುವವರ್ಯಾರು?

• ಮೇಘರಾಜ್


ಆರೆಸ್ಸೆಸ್ ಆತ್ಮದ ಹೊಸಾ ಅವತಾರ!

ಭ್ರಷ್ಟಾಚಾರವೆಂಬುದು ಇಡೀ ದೇಶವನ್ನೇ ಬಡಿದು ಮಲಗಿಸಿರುವುದು ಹಾಗೂ ಅವರ ವಿರುದ್ಧ ಹೋರಾಡಲೇಬೇಕಾದ ಅನಿವಾರ್ಯತೆ ಸೃಷ್ಟಿಯಾಗಿರುವುದು ನಿರ್ವಿವಾದ. ಆದರೀಗ ಭ್ರಷ್ಟಾಚಾರ ವಿರೋಧಿ ಹೋರಾಟವೇ ಖಯಾಲಿಯಾಗಿ, ಮುಖವಾಡಗಳಾಗಿ ಅವತಾರವೆತ್ತುತ್ತಿದೆ. ಸಂವಿಧಾನದ ಮೇಲೆಯೇ ನಂಬಿಕೆ ಇಲ್ಲದವರು, ಜಗತ್ತಿಗೆ ತಿಳಿಯದಂತೆ ಭರಪೂರ ಲೂಟಿ ಹೊಡೆಯುವವರೇ ಇಂಥ ಹೋರಾಟದ ಮುಂಚೂಣಿಯಲ್ಲಿ ಠಳಾಯಿಸುತ್ತಿರುವುದು ವಿಪರ್ಯಾಸಕರ ವಿಚಾರ.

ಸದ್ಯ ಕೋಮುವಾದ ಹೊದ್ದುಕೊಂಡಿರುವ ದೇಶದ್ರೋಹಿ ಆರೆಸ್ಸೆಸ್ ಕೂಡಾ ಭ್ರಷ್ಟಾಚಾರ ವಿರೋಧಿ ಹೋರಾಟದ ಸೋಗುಹಾಕಿದೆ. ಆರೆಸ್ಸೆಸ್ ಕೂಸಾದ ಎಬಿವಿಪಿ ಕೂಡ ಇದರಲ್ಲಿ ನಿರ್ಣಾಯಕ ಪಾತ್ರ ವಹಿಸಿದೆ. ಆದರೆ ಇವೆರಡೂ ಕೂಡ ತೆರೆಮರೆಯಲ್ಲಿ ನಿಂತು 'ಯೂತ್ ಅಗೆನೆಸ್ಟ್ ಕರಪ್ಷನ್' ಅಂತೊಂದು ಸಂಘಟನೆಯನ್ನು ಹುಟ್ಟಿಸಿ ಬೀದಿಗೆ ಬಿಟ್ಟಿವೆ. ಕ್ಯಾನ್ಸರ್‌ಗಿಂತಲೂ ಮಾರಕವಾದ ಕೋಮುವಾದಕ್ಕೆ ಜನಿಸಿದ ಹಾಲಿ ಸಂಘಟನೆಯೀಗ ಭ್ರಷ್ಟಾಚಾರ ವಿರೋಧಿ ಪೋಸಿನೊಂದಿಗೆ 'ಕೆಲಸ' ಶುರುಹಚ್ಚಿಕೊಂಡಿದೆ.

ಯೂತ್ ಅಗೆನೆಸ್ಟ್ ಕರಪ್ಷನ್ ಸಂಘಟನೆಗೆ ರಾಷ್ಟ್ರಮಟ್ಟದ ಸಂಚಾಲಕನಾಗಿರುವಾತ ಕರಣ್‌ಕುಮಾರ್. ಸುವೃತ್ ಕುಮಾರ್ ಸಹ ಸಂಚಾಲಕ. ಮೇಲ್ನೋಟಕ್ಕೆ ಸ್ವತಂತ್ರ ಸಂಘಟನೆಯಂತೆ ಕಾಣುವ ಯೂತ್ ಅಗೆನೆಸ್ಟ್ ಕರಪ್ಷನ್‌ನ ಅಸಲಿಯತ್ತು ಬೇರೆಯದಿದೆ. ಆರೆಸ್ಸೆಸ್-ಎಬಿವಿಪಿ ಎಷ್ಟೇ ನಾಜೂಕುತನದಿಂದ ವರ್ತಿಸಿದರೂ ಕೂಡಾ ಸದರಿ ಸಂಸ್ಥೆಯೊಂದಿಗಿನ ಅವರ ಸಂಬಂಧ ಬಟಾಬಯಲಾಗಿದೆ.

ಯೂತ್ ಅಗೆನೆಸ್ಟ್ ಕರಪ್ಷನ್‌ನ ರಾಷ್ಟ್ರ ಸಂಚಾಲಕ ಕರಣ್ ಕುಮಾರ್ ಎಬಿವಿಪಿ ಅಡ್ಡೆಯವನು. ಮೊನ್ನೆ ಬೆಂಗಳೂರಿನಲ್ಲಿ ಎಬಿವಿಪಿಯ 36ನೇ ವಾರ್ಷಿಕ ಸಮಾವೇಶ ನಡೆಯಿತಲ್ಲಾ? ಆಗ ಸ್ವಾಗತ ಸಮಿತಿಯ ಹೊಣೆ ಹೊತ್ತಿದ್ದವನು ಇದೇ ಕರಣ್. ಈ ಆಸಾಮಿಯ ಪೂರ್ವಾಪರ ಕೆದಕುತ್ತಾ ಹೋದರಂತೂ ಆಘಾತಕಾರಿ ಅಂಶಗಳೇ ಹೊರಬರುತ್ತವೆ. ಈತ ಬೆಂಗಳೂರಿನಲ್ಲಿ CBAY-ಸಲ್ಯೂಷನ್ಸ್ ಅಂತೊಂದು ಕಂಪನಿ ನಡೆಸುತ್ತಿದ್ದಾನೆ. ಇದು ರಿಜಿಸ್ಟರ್ ಆಗಿರುವುದು ಪಿಇಎಸ್ ಕಾಲೇಜಿನಲ್ಲಿ! ಇನ್ನೊಂದು



ಕಪ್ಪುಹಣದ ವಿಚಾರಸಂಕಿರಣದಲ್ಲಿ ಕೃಷ್ಣಭಟ್ಟ...

ಪ್ರಮುಖ ಅಂಶವೆಂದರೆ ಈ ಕರಣ್ ಕುಮಾರ್ ಕರ್ನಾಟಕದ ಭ್ರಷ್ಟಾತಿಭ್ರಷ್ಟ ಬಿಜೆಪಿ ಸರ್ಕಾರದ ಮಾಧ್ಯಮ ಸಲಹೆಗಾರ!

ಭ್ರಷ್ಟಾಚಾರದ ಪಿಡುಗು ತೊಲಗಿಸುವ ಸಂಬಂಧ ಎಲ್ಲರೂ ಹೋರಾಟ ನಡೆಸಬೇಕಿದೆ. ಆರೆಸ್ಸೆಸ್ ಸೇರಿದಂತೆ ಸಂಘಸಂಸ್ಥೆಗಳಿಗೆಲ್ಲ ಹಾಗೊಂದು ಹೋರಾಟ ನಡೆಸುವ ಹಕ್ಕಿದೆ. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಆರೆಸ್ಸೆಸ್‌ಗಾಗಲಿ, ಅದರ ಎಬಿವಿಪಿಯಂಥ ಅಂಗಸಂಸ್ಥೆಗಳಿಗಾಗಲಿ ಭ್ರಷ್ಟಾಚಾರದ ವಿರುದ್ಧ ಮಾತಾಡುವ ನೈತಿಕತೆ ಉಳಿದಿಲ್ಲ. ಈ ಜನ ಇವತ್ತಿಗೂ ತನ್ನದೇ ಅಂಗಪಕ್ಷವಾದ ಬಿಜೆಪಿಯ ಬ್ರಹ್ಮಾಂಡ ಭ್ರಷ್ಟಾಚಾರದ ಬಗ್ಗೆ ಸೊಲ್ಲೆತ್ತುತ್ತಿಲ್ಲ. ಯಡಿಯೂರಪ್ಪನಂಥ ಭ್ರಷ್ಟ ಮುಖ್ಯಮಂತ್ರಿಯ ವಿರುದ್ಧ ಯಾವ ಶಿಸ್ತಿನ ಕ್ರಮವನ್ನೂ ಕೈಗೊಂಡಿಲ್ಲ. ಇಂಥವರಿಗೆ ಭ್ರಷ್ಟಾಚಾರದ ವಿರುದ್ಧ ಮಾತಾಡುವ ಕನಿಷ್ಠ ಯೋಗ್ಯತೆಯಾದರೂ ಇದೆಯೇ?

ಭ್ರಷ್ಟಾಚಾರ के विरूद्ध... युवा
YOUTH...AGAINST CORRUPTION


ತೀರಾ ಬಿಜೆಪಿ ಸರ್ಕಾರದ ಮಾಧ್ಯಮ ಸಲಹೆಗಾರ ಕರಣ್‌ನನ್ನ ಯೂತ್-ಸಂಘಟನೆಯ ರಾಷ್ಟ್ರ ಸಂಚಾಲಕನನ್ನಾಗಿಸಿದ್ದೇ ಆರೆಸ್ಸೆಸ್‌ನ ಅಸಲಿಯತ್ತನ್ನು ಬಯಲಾಗಿಸಿದೆ. ಇನ್ನು ಈ ಸಂಘಟನೆಯಡಿಯಲ್ಲಿ ಒದರಾಡುತ್ತಿರುವವರೂ ಭ್ರಷ್ಟ ಪಕ್ಷಪಾತಿಗಳೇ. ಈ ಸಂಘದ ಪೆಂಡಾಲಿನಲ್ಲಿ ನಿಂತು ಭ್ರಷ್ಟಾಚಾರವನ್ನು ಕ್ಯಾನ್ಸರಿಗೆ ಹೋಲಿಸಿ ಎಗರಾಡಿದ ಪಿ.ವಿ.ಕೃಷ್ಣಭಟ್ ಅಂತೂ ಪಕ್ಕಾ ಪ್ರಳಯಾಂತಕ. ತಾನು ಭಯಂಕರ ಶುದ್ಧ ಹಸ್ತನೆಂಬಂತೆ ಬಾಯಿ ಬಡಕ್ಕೊಳ್ಳೊ ಕೃಷ್ಣಭಟ್ಟ ಸ್ವತಃ ಯಡಿಯೂರಪ್ಪ ಕೊಟ್ಟ ಜಿ.ಕ್ಯಾಟಗರಿ ಸೈಟಿನ ಫಲಾನುಭವಿ.

ಯೂತ್ ಅಗೆನೆಸ್ಟ್ ಕರಪ್ಷನ್ ಸಂಘಟನೆಯ ಪ್ರೆಸ್‌ನೋಟ್‌ಗಳಲ್ಲಿ ತನ್ನ ಸದಸ್ಯರನ್ನೆಲ್ಲ ಹುಟ್ಟು ಹೋರಾಟಗಾರರಂತೆಯೂ, ಭ್ರಷ್ಟಾಚಾರದ ವಿರುದ್ಧ ಎಡೆಬಿಡದೆ ಹೋರಾಡಿದ ಧೀರರಂತೆಯೂ ಬಣ್ಣಿಸಲಾಗಿದೆ. ಇದೆಲ್ಲ ಶುದ್ಧ ಬೋಗಸ್ ಎಂಬುದಕ್ಕೆ ಸಂಸ್ಥೆಯ ಪ್ರಮುಖ ಸಲಹೆಗಾರ ಬಾಲಸುಬ್ರಮಣ್ಯಂ ಎಂಬಾತನ ಜಾತಕವೇ ಉದಾಹರಣೆ. ಈತ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಘಟನೆಯ ಮೈಸೂರು ಶಾಖೆಯ ಮುಖ್ಯಸ್ಥ. ಇವನು ಆದಿವಾಸಿಗಳಿಗೆ ವೈದ್ಯಕೀಯ ಸೌಲಭ್ಯ ನೀಡುತ್ತಿರುವಾತ, ಭ್ರಷ್ಟಾಚಾರದ ವಿರುದ್ಧ ಭಾರೀ ಹೋರಾಟ ನಡೆಸಿ, ಆರ್‌ಟಿಐ ಅಡಿ ಹೋರಾಟ ನಡೆಸಿರುವಾತ ಹಾಗೂ ಕರ್ನಾಟಕದ ಲೋಕಾಯುಕ್ತ ಸಮಿತಿಯ ಸಕ್ರಿಯ ಸದಸ್ಯ ಅಂತಲೂ ಬಿಂಬಿಸಲಾಗಿದೆ. ಈ ಬಗ್ಗೆ ಲೋಕಾಯುಕ್ತದ ಮುಖ್ಯಸ್ಥರನ್ನೇ ಸಂಪರ್ಕಿಸಿದರೆ ಅಂತಹುದೊಂದು ಸಮಿತಿಯೇ ಅಸ್ತಿತ್ವದಲ್ಲಿಲ್ಲವೆಂಬ ವಿಚಾರ ಹೊರಬರುತ್ತದೆ!

ಯೂತ್ ಅಗೆನೆಸ್ಟ್ ಕರಪ್ಷನ್‌ನ ವಿಚಾರಕ್ಕೆ ಬಂದರೆ ಈ ಸಂಘಟನೆ ಅತ್ಯಂತ ವೇಗವಾಗಿ ಜೀವಪಡೆದಿದೆ. ಆರೆಸ್ಸೆಸ್ ಹಾಗೂ ಎಬಿವಿಪಿ ಮಂದಿ ಇದೇ ವರ್ಷ ಏಪ್ರಿಲ್ 12ರಂದು ಈ ಬಗ್ಗೆ ಡೆಲ್ಲಿಯಲ್ಲಿ ಸಭೆ ಸೇರಿ ಸಂಘಟನೆ ಕಟ್ಟಲು ನಿರ್ಧರಿಸಿದರು. ಮೇ 12ರಂದು ಅದು ಅಸ್ತಿತ್ವಕ್ಕೆ ಬಂತು. ಅಂದಹಾಗೆ ಇದನ್ನು ಉದ್ಘಾಟಿಸಿದ್ದು ಸುನೀಲ್ ಅಂಬೇಡ್ಕರ್. ಈತ ಎಬಿವಿಪಿಯ ರಾಷ್ಟ್ರೀಯ ಮುಖ್ಯಸ್ಥ.

ಈ ರೀತಿಯಾಗಿ ಹುಟ್ಟಿಕೊಂಡ ಯೂತ್ ಅಗೆನೆಸ್ಟ್ ಕರಪ್ಷನ್ ಸಂಘಟನೆ ಇದೀಗ ಭ್ರಷ್ಟಾಚಾರ ವಿರೋಧಿ ಹೋರಾಟದ ಮುಂಚೂಣಿಗೆ ಬರಲು ಹವಣಿಸುತ್ತಿದೆ. ಈ ಮೂಲಕ ಯುವಕರನ್ನು ಕಲೆಹಾಕಿ ಅವರೆಲ್ಲರ ತಲೆಗೆ ಹಿಂದುತ್ವದ ವಿಷತುಂಬಿ ಗಬ್ಬೆಬ್ಬಿಸುವುದು ಆರೆಸ್ಸೆಸ್‌ನ ಅಸಲೀ ಹುನ್ನಾರ.

ಇದು ಭ್ರಷ್ಟಾಚಾರ ವಿರೋಧಿ ಮುಖವಾಡದ ಹಿಂದಿರುವ ಕರಾಳವಾಸ್ತವ.



ಅಗತ್ಯಗಳನ್ನು ತಮ್ಮ ಆಜ್ಞೆಯಿಂದ ಪೂರೈಸುತ್ತಿದ್ದ ಹಳೆಮನೆ ನಮಗ್ಯಾವ ಕೊರತೆಯೂ ಇಲ್ಲದಂತೆ ನೋಡಿಕೊಂಡರು. ಅದಕ್ಕೂ ಮೊದಲು ವನರಂಗದವರು ನಮಗೆ ತೋರಿದ ಅಸಹಕಾರದಿಂದ ಸಿಟ್ಟಿಗೆದ್ದ ನಮ್ಮ ಹುಡುಗರು "ರಾಜ್ಯದ ಯಾವುದೇ ಮೂಲೆಯವರು ಶಿವಮೊಗ್ಗಕ್ಕೆ ಬಂದರೆ ನಾವೆಷ್ಟು ಸಹಕಾರ ಕೊಡುತ್ತೇವೆ. ಆದರೆ ನಾವು ಕೇಳಿದ ಒಂದು ಪದಾರ್ಥವೂ ಇಲ್ಲಿ ಸಿಗುತ್ತಿಲ್ಲ, ಬನ್ನಿ ನೀವು ಶಿವಮೊಗ್ಗದ ಕಡೆಗೆ" ಎಂದು ಸಿಟ್ಟಾಗಿದ್ದೆವು. ಅಷ್ಟರಲ್ಲಿ ಲಿಂಗದೇವರು ಬರಲಾಗಿ ಎಲ್ಲ ಸಾಮಗ್ರಿಗಳೂ ಕ್ಷಣಾರ್ಧದಲ್ಲಿ ಸಿಕ್ಕವು. ಅಷ್ಟೇ ಅಲ್ಲ, ಕಾರ್ಯಕ್ರಮ ಮುಗಿದ ನಂತರ ನಾಟಕ ಶುರುವಾಗಬೇಕಿತ್ತು. ಆದರೆ ಮಳೆ ಬರುವ ಸೂಚನೆ ಕಂಡಿದ್ದರಿಂದ ಹಳೆಮನೆಯವರು ನಮ್ಮ ನಾಟಕವನ್ನು ಕಲಾಮಂದಿರದ ಒಳಗಿರುವ ಚಿಕ್ಕ ರಂಗಮಂದಿರಕ್ಕೆ ಶಿಫ್ಟ್ ಮಾಡಿಸಿದರು. ನಮಗೆ ನಾಟಕದ ಪರಿಣಾಮ ಪೂರ್ತಿಯಾಗಬೇಕಾದರೆ ಉತ್ತಮಮಟ್ಟದ ಪಾನಗೋಷ್ಠಿ ಏರ್ಪಾಡಾಗಬೇಕು. ಅದನ್ನೂ ಸ್ವಾಮಿ ಆನಂದ್ ಮತ್ತು ಕಾಳೇಗೌಡ ನಾಗವಾರರು ಒಳ್ಳೆಯ ಕ್ಲಬ್‌ನಲ್ಲಿ ಏರ್ಪಾಡು ಮಾಡಿದ್ದರು. ಅಲ್ಲೂ ಕೂಡ ಹಳೆಮನೆಯೇ ಲೀಡರು. ಯಾಕೆಂದರೆ

ಮತ್ತೆ ಬರುವೆನೆಂದಿದ್ದ ಲಿಂಗದೇವರು

ಸೋಮವಾರವಷ್ಟೇ ಶಿವಮೊಗ್ಗದಲ್ಲಿ ರಂಗಾಯಣ ಪ್ರಾರಂಭವಾಯ್ತು. ಅದಕ್ಕಾಗಿ ಬಂದಿದ್ದ ಲಿಂಗದೇವರು ಹಳೆಮನೆ ಉದ್ಘಾಟನೆ ಮಾಡಿದ ಸಾಣೆಹಳ್ಳಿ ಸ್ವಾಮೀಜಿ ಜೊತೆ ನಿಂತಿದ್ದರು. ಡಾ.ಅಶೋಕ ಪೈ, ಹರಿಕುಮಾರ್, ಹೊ.ನ ಸತ್ಯ ಇವರ ಸಾಲಲ್ಲಿ ನಿಂತು ನಾಟಕೋತ್ಸವ ಉದ್ಘಾಟನೆಗೊಂಡ ಕೂಡಲೇ ತುಂಬಾ ಖುಷಿಯಿಂದ ಚಪ್ಪಾಳೆ ಹೊಡೆಯುತ್ತಿದ್ದ ಲಿಂಗದೇವರು ನಾಳೆಯಿಲ್ಲ, ನಾಡಿದ್ದು ಈ ರಂಗಭೂಮಿಯನ್ನೇ ಬಿಟ್ಟು ಹೊರಟುಹೋಗುತ್ತಾರೆಂದು ಹೇಗೆ ಊಹಿಸುವುದು? ಆದರೆ ಎಲ್ಲ ರಂಗಾಸಕ್ತರಿಗೂ ಒಂದು ಶಾಕ್ ನೀಡಿ ಲಿಂಗದೇವರು ಹೊರಟುಹೋಗಿದ್ದಾರೆ.

ಹಳೆಮನೆ ಪರಿಚಯ ನನಗೆ ಇತ್ತೀಚಿನದು. ಒಮ್ಮೆ ತಿಪಟೂರಿನಲ್ಲಿ ಸೇರಿಕೊಂಡು ಅರ್ಧರಾತ್ರಿವರೆಗೆ ಹಾಡೇಳುತ್ತ ಪಾನಗೋಷ್ಠಿ ಮಾಡಿದ್ದೆವು. ಅದು ಬಿಟ್ಟರೆ ಕಳೆದ ವರ್ಷ ಮುದ್ರಾಡಿಯಲ್ಲಿ ನಾಟಕೋತ್ಸವಕ್ಕೆ ಸೇರಿದ್ದೆವು. ಅಲಂಕೃತ ಟ್ರಾಕ್ಟರ್‌ಮೇಲೆ ನಮ್ಮ ಮೆರವಣಿಗೆ. ಹಳೆಮನೆಯೇನೋ ಜಗದ್ಗುರುವಿನ ಭವ್ಯತೆಯಲ್ಲಿ ಸುತ್ತಲೂ ತುಂಬು ನೋಟ ಬೀರುತ್ತಾ ಕನಿಷ್ಠ ಐದು ಕಿ.ಮೀ. ದೂರದ ಮೆರವಣಿಗೆಯನ್ನು ಸವಿದಿದ್ದರು. ಆದರೆ ನಾನು ನಿದ್ರೆ ಮಾತ್ರೆ ತಿಂದಿದ್ದರಿಂದ ಅವರ ಪಕ್ಕ ಎರಡನೇ ಲಗ್ನಕ್ಕೆ ಒಲ್ಲದ ವಧುವಿನಂತೆ ತೂಕಡಿಸುತ್ತಾ ಸಾಗಿದ್ದೆ. ಇಂಥ ಸಮಯದಲ್ಲಿ ಹುಲ್ಲುಕೋರೆ ರಾಮಸ್ವಾಮಿ ಬಂದು ಮಾತನಾಡಿಸಿ ಅಂದರೆ ಎಚ್ಚರಿಸಿ ಹೋದದ್ದು ನೆನಪಿದೆ.

ಕಳೆದ ಮಾರ್ಚ್ 27ರಂದು ರಂಗಾಯಣದ ವನರಂಗದಲ್ಲಿ ಕಟ್ಟೆಪುರಾಣದ ಒಂದು ದಿನದ ಸೆಮಿನಾರಿತ್ತು. ಸ್ವಾಮಿ ಆನಂದ್ ಏರ್ಪಡಿಸಿದ್ದ. ಇದರ ರೂವಾರಿಯಾದ ಹಿ.ಶಿ.ರಾಮಚಂದ್ರೇಗೌಡರು ಬರಲಿಲ್ಲ, ನನಗೆ ಬಹಳ ನೋವಾಯ್ತು. ಆದರೆ ರಂಗಾಯಣದ ಆವರಣದಲ್ಲಿ ಜವಾಬ್ದಾರಿಹೊತ್ತ ಯಜಮಾನನಂತೆ ತಿರುಗುತ್ತ ನಮ್ಮ ಅಂದು ಅವರಷ್ಟು ಯಾರೂ ಕುಡಿದಿರಲಿಲ್ಲ, ಅವರ ಶ್ರೀಮತಿಯವರು ಎಷ್ಟೇ ಎಚ್ಚರಿಸಿದರೂ "ಇದೇ ಕೊನೆ ಸಿಪ್" ಎಂದು ಕ್ಷಮೆ ಯಾಚಿಸಿ ಆರ್ಡರ್ ಮಾಡುತ್ತಿದ್ದರು. ಅವತ್ತು ಅವರೆಷ್ಟು ಖುಷಿಯಾಗಿದ್ದರೆಂದರೆ ನಮ್ಮನ್ನೆಲ್ಲಾ ಹಿಡಿದುಕೊಂಡು ಕೆನ್ನೆಗೆ ಮುತ್ತುಕೊಡುತ್ತಿದ್ದರು. ಅವರ ಕೂಳೆಗಡ್ಡದ ಸ್ಪರ್ಶದಿಂದ ಮೈ 'ಜುಂ' ಎಂದರೂ ಬಿಡುತ್ತಿರಲಿಲ್ಲ, ಕಡೆಗೆ ಅವರ ಶ್ರೀಮತಿಯವರ ಒತ್ತಾಯಕ್ಕೆ ಎಲ್ಲಾ ಬರಖಾಸ್ತಾದೆವು.

ಅಂದಿನಿಂದ ಲಿಂಗದೇವರು ಬರುತ್ತಾರೆಂದರೆ ನಮಗೆ ಸಂಭ್ರಮದ ಹಬ್ಬ. ರಂಗಾಯಣ ಬಹಳ ದಿನಗಳಿಂದ ಇಂತವರಿಗೊಬ್ಬರಿಗೆ ಕಾಯುತ್ತಿತ್ತೇನೋ ಎನ್ನುವಂತೆ ವಿಶೇಷ ಲವಲವಿಕೆಯಿಂದ ಕೂಡಿತ್ತು. ಅದರ ಫಲವೇ ಶಿವಮೊಗ್ಗಕ್ಕೂ ರಂಗಾಯಣದ ಚಟುವಟಿಕೆ ಚಾಚಿಕೊಂಡು ಕೇವಲ ಮೂರು ದಿನವಾಗಿತ್ತು. "ಶಿವಮೊಗ್ಗ ಸಂಗೀತ, ಸಾಹಿತ್ಯ ರಾಜಕಾರಣ ಮತ್ತು ಚಳವಳಿಗಳ ತವರೂರು. ಇಲ್ಲಿ ರಂಗಾಯಣದ ಚಟುವಟಿಕೆ ಪ್ರಾರಂಭವಾಗಿದ್ದು ನನಗೆ ಬಹಳ ಸಂತೋಷ ವುಂಟುಮಾಡಿದೆ. ನಾನು ಆಗಾಗ್ಗೆ ಬರುತ್ತೇನೆ" ಎಂದಿದ್ದರು. ಅಲ್ಲದೆ "ಶಿವಮೊಗ್ಗದಲ್ಲಿ ಯಾರೋ ಅಡ್ಡಕಸುಬಿಗಳು ಕಟ್ಟಿರುವ ಸುವರ್ಣ ಸಂಸ್ಕೃತಿಭವನದಲ್ಲೇ ನಮ್ಮ ರಂಗಾಯಣದ ಚಟುವಟಿಕೆ ನಡೆಯಲಿದೆ. ಆದರದು ಅದಕ್ಕೆ ಯೋಗ್ಯವಲ್ಲ, ಅಂತಹ ಜಾಗವೆಲ್ಲೂ ಇಲ್ಲ" ಎಂದಿದ್ದರು. ಏಕೆಂದರೆ ನಮ್ಮ ಹಲವಾರು ಕಟ್ಟಡಗಳು ಜನರ ಅಗತ್ಯಕ್ಕಿಂತ ಕಂಟ್ರಾಕ್ಟರುಗಳಿಗೆ ಮತ್ತು ರಾಜಕಾರಣಿಗಳಿಗೆ ಬೇಕಿರುತ್ತವೆ. ಆ ತರದಲ್ಲಿ ಶಿವಮೊಗ್ಗದ ಸುವರ್ಣ ಸಂಸ್ಕೃತಿಭವನ ಮೊದಲನೆಯದು. "ಇರಲಿ ನಾನು ಆಗಾಗ್ಗೆ ಬರುತ್ತೇನೆ" ಎಂದಿದ್ದರು. ಆದರೆ ಹಳೆಮನೆ ಇನ್ನೆಂದೂ ಬರುವುದಿಲ್ಲ, ಹಾಗಾಗಿ ಶಿವಮೊಗ್ಗದಲ್ಲಿ ರಂಗಾಯಣ ತಳವೂರುವುದು ಅಷ್ಟು ಸುಲಭವಲ್ಲ.

ಸುಷ್ಮಾ ರಾಜ್‌ಘಾಟ್ ನರ್ತಕಿಯಾದಳಂತಲ್ಲಾ....

ರಾಮಲೀಲಾ ಮೈದಾನದಿಂದ ಲೀಲಾಮಾತ್ರನಾಗಿ ಮಾಯವಾದ ರಾಮದೇವ ಬಿಕ್ಕಿದಿಸಿಕೊಂಡು ಅಳುತ್ತ "ಸೋನಿಯಾ ಸರಕಾರ ನನ್ನನ್ನು ಬೆಂಕಿಹಚ್ಚಿ ಕೊಲ್ಲಲು ಸಂಚು ನಡೆಸಿತ್ತು, ಬೆಂಕಿಗೆ ಸಿಗದಿದ್ದರೆ ಹೊಗೆ ಹಾಕಿ ಉಸಿರುಗಟ್ಟಿಸಿ ಸಾಯಿಸಲು ಷಡ್ಯಂತ್ರ ರೂಪಿಸಿತ್ತು, ಹಾಗೂ ಸಾಯದಿದ್ದರೆ ಎನ್‌ಕೌಂಟರ್ ಮಾಡಿ ಎಲ್ಲಾದರೂ ಬಿಸಾಡುವ ಯೋಜನೆ ರೂಪಿಸಿತ್ತು. ಇದರ ಸುಳಿವರಿತ ನಾನು ಕ್ಷಣಾರ್ಧದಲ್ಲಿ ವೇಷ ಬದಲಿಸಿ ಮಾಯವಾಗದಿದ್ದರೆ ಇಷ್ಟರಲ್ಲಿ ದೇಶದಾದ್ಯಂತ ನನ್ನ ಶ್ರದ್ಧಾಂಜಲಿ ಫ್ಲೆಕ್ಸ್‌ಗಳು ರಾರಾಜಿಸುತ್ತಿದ್ದವು" ಎಂದು ಕಣ್ಣೀರಿಟ್ಟನಂತಲ್ಲ, ಇದನ್ನು ಎಂದೂ ಅಳದ ಪೇಜಾವರಶ್ರೀ ನೋಡಿ "ಭಯಪಡಬೇಡಿ. ನಿಮ್ಮ ಮತ್ತು ಕೇಂದ್ರ ಸರ್ಕಾರದ ನಡುವೆ ನಾನೇ ಸಂಧಾನಕಾರನಾಗಿ ಶ್ರೀಕೃಷ್ಣ ದುರ್ಯೋಧನನ ಆಸ್ಥಾನಕ್ಕೆ ಹೋದಂತೆ ಹೋಗಿಬರುತ್ತೇನೆ. ಒಂದು ವೇಳೆ ನನ್ನ ಆಕಾರಕ್ಕೆ ಕೇಂದ್ರದವರು ಕೇರ್ ಮಾಡದಿದ್ದರೆ ಮತ್ತೊಬ್ಬ ಮೈಸೂರು ಕಡೆಯ ಸೈಂಧವನಂತಹ ಸ್ವಾಮಿ ಹಾಗೂ ಬೆಂಗಳೂರು ಕಡೆಯ ಬೃಹನ್ನಳೆಯಂತಹ ಸ್ವಾಮಿಯನ್ನು ಕರೆದುಕೊಂಡು ಹೋಗುತ್ತೇನೆ. ಅಳಬೇಡಿ. ಸಾಧು ಸಂತರು ಅಳಬಾರದು. ಅತ್ತರೂ ಕಣ್ಣೀರು ಬರದಂತೆ ಅಳಬೇಕು" ಎಂದು ಸಂತೈಸಿದರಂತಲ್ಲಾ, ಥೂತ್ತೇರಿ!

****

ಥೂತ್ತೇರಿ ▸ಯಾಹೂ

ಕರ್ನಾಟಕ ಸರ್ಕಾರ ಬ್ರಹ್ಮಾಂಡ ಭ್ರಷ್ಟತೆಯಲ್ಲಿ ಮುಳುಗಿಹೋಗಿದೆ. ಕೆಲವು ಲಕ್ಷಗಳನ್ನು ಲೂಟಿ ಮಾಡಿರುವ ಮಂತ್ರಿ ಒಬ್ಬನೂ ಇರಲಾರ. ಎಲ್ಲರೂ ಕೋಟಿಕೋಟಿ ನುಂಗಿದವರೆ. ನಾಯಕನಾದವನು ನೆದರಿಲ್ಲದೆ ತಿನ್ನುವಾಗ ಹಿಂಬಾಲಕರು ಬಿಟ್ಟಾರೆಯೇ. ಇಲ್ಲಿ ನಾಯಕನಷ್ಟೇ ತಿನ್ನುತ್ತಿಲ್ಲ, ಆತನ ಮಕ್ಕಳು, ಮರಿಗಳು, ಕಳ್ಳು, ಬಳ್ಳಿ, ಕಡೆಗೆ ಕುಲಸ್ಥರೂ ಕೂಡ ಕಂಠಪೂರ್ತಿ ತಿಂದು ಆಗಲೇ ಮೆಲುಕಾಡಿಸುತ್ತಿರುವ ಸದ್ದು ಇಡೀ ನಾಡಿಗೇ ಕೇಳಿಸುತ್ತಿದೆ. ಇಂತಹ ಭಕ್ಷ್ಯಭೋಜನ ಶಾಲೆಯನ್ನು ಕಣ್ಣಾರೆ ನೋಡಿಯೂ ಸುಮ್ಮನಿದ್ದ ಪೇಜಾವರ, ರಾಮಲೀಲಾ ಮೈದಾನದಲ್ಲಿ ರಾಮದೇವನೊಂದಿಗೆ ಕಾಣಿಸಿಕೊಂಡು ಭ್ರಷ್ಟಾಚಾರದ ವಿರೋಧವಾಗಿ ಗೊಗ್ಗರು ದನಿಯಲ್ಲಿ ಭಾಷಣ ಬಿಗಿದದ್ದನ್ನು ನೋಡಿದ ಕರ್ನಾಟಕದ ಜನತೆ ಬಿದ್ದು ಬಿದ್ದು ನಕ್ಕಿದರಂತಲ್ಲಾ. ಅನುಮಾನಗೊಂಡ ಉಡುಪಿಯ ಕೆಲವು ಲೋಹಿಯಾವಾದಿ ವಿಪ್ರರು ಪೇಜಾವರರನ್ನು ಈ ಬಗ್ಗೆ ಕೇಳಲಾಗಿ "ಭ್ರಷ್ಟಾಚಾರ ಇಡೀ ದೇಶಕ್ಕೆ ಸಂಬಂಧಿಸಿದಂತಹ ಸಮಸ್ಯೆ. ಅದರ ವಿರುದ್ಧ ದನಿ ಎತ್ತಲು ರಾಮಲೀಲಾದಂತ ಮೈದಾನವೇ ಸರಿ ಎಂದು ಅಲ್ಲಿ ಹೋಗಿ ಹೇಳಿದೆ. ನನ್ನ ದನಿಗೆ ಕರ್ನಾಟಕವೂ ಸೇರಿದೆ ಗೊತ್ತುಂಟ?" ಎಂದರಂತಲ್ಲಾ, ಥೂತ್ತೇರಿ!

****

ಅದೊಂದು ಕೆಚ್ಚಲು ತುಂಬಿದ ಆಕಳು. ಯಾವ ಸಮಯದಲ್ಲಿ ಕೆಚ್ಚಲಿಗೆ ಕೈಹಾಕಿದರೂ ಸೇರಾಲಿಗೆ ಸಮಸ್ಯೆಯಿರಲಿಲ್ಲ, ಹಾಗಾಗಿ ಎಲ್ಲರಿಗೂ ಆಕಳಿನ ಮೇಲೆ ಅತೀವ ಪ್ರೀತಿ. ಹೋಗಿಬಂದವರೆಲ್ಲಾ ಹಿಂಡಿ ಹುಲ್ಲಾಕುತ್ತಿದ್ದರು. ಕೆಲವರು ಬಾಳೆಹಣ್ಣು ತಿನ್ನಿಸುತ್ತಿದ್ದರು. ಕ್ರಮೇಣ ಆಕಳಿಗೆ ಧಿಮಾಕು ಅಡರಿಕೊಂಡಿತು. ಸಿಕ್ಕಸಿಕ್ಕವರನ್ನು ತಿವಿಯತೊಡಗಿತು. ಕಡೆಗೆ ಮನೆಯ ಮಾಲೀಕನನ್ನೇ ತಿವಿಯಿತು. ಈ ಆಕಳನ್ನು ಮನೆಮುಂದೆ ಕಟ್ಟಿಕೊಂಡಿದ್ದರೆ ನಮಗೆ ಮರ್ಯಾದೆ ಬರುವುದಿಲ್ಲವೆಂದು ಅರಿತ ಗೋರಕ್ಷಕ ಜನ ಅದನ್ನು ಬಿಟ್ಟು ಓಡಿಸಿದರು. ಒಂದು ರೀತಿ ಅದೇ ಹೋಯಿತು. ಒಂದಲ್ಲ ಎರಡಲ್ಲ ಆರು ವರ್ಷ ಅಲೆಮಾರಿಯಂತೆ ಅಲೆಯಿತು. ಗಂದೊಗಲು ಇಳಿಬಿದ್ದು ಕೆಚ್ಚಲು ಬತ್ತಿತು. ದೇಹದ ಕಸುವು ಕಡಿಮೆಯಾಗಿತ್ತು, ಕಾಲು ಸೋಲುತ್ತಿದ್ದವು. ಆಕಳಿಗೆ ತನ್ನ ದೊಡ್ಡಿ ನೆನಪಾಯಿತು. ಮರಳಿದೊಡ್ಡಿಗೆ ಬಂತು. ಅಲ್ಲಿ ಒಂದು ಬದಲಾವಣೆ ಆಗಿತ್ತು, ಅದೇನೆಂದರೆ ಅಲ್ಲಿ ಹಳಬರಾರೂ ಅಲ್ಲಿರಲಿಲ್ಲ, ಬದಲಿಗೆ ಗಡ್ಕರಿ ಎಂಬ ಥೇಟ್ ಮಾರ್ವಾಡಿ ದೇಹದ ಗೋರಕ್ಷಕನಿದ್ದ. ಅವನ ಬಳಿ ಹೋಗಿ ನಿಂತ ಆಕಳು ಹಲ್ಲುಬಿಟ್ಟಿತು. ಗಡ್ಕರಿ ಮೈಸವರಿ ಸಂತೈಸಿ "ಉಮಾ" ಎಂದಾಗ ಆಕಳಿಗೆ ಆನಂದವಾಯ್ತಂತಲ್ಲಾ, ಥೂತ್ತೇರಿ!

****

ಬಳ್ಳಾರಿ ಕಡೆಯ ಅಕ್ರಮ ಸಂತಾನಗಳಿಗೆಲ್ಲಾ ಅಮ್ಮನಂತಿರುವ ಸುಷ್ಮಾ ಸ್ವರಾಜ್ ಶಾನೆ ಸುದ್ದಿಯಲ್ಲಿದ್ದಾಳಲ್ಲಾ. ರೆಡ್ಡಿಗಳ ಸಹವಾಸ ಭವಿಷ್ಯದಲ್ಲಿ ಅಪಾಯವೆಂದರಿತು "ಅವು ನನ್ನ ಮಕ್ಕಳಲ್ಲ, ನಾನು ಬಳ್ಳಾರಿಗೆ ಹೋಗಿದ್ದಾಗ ಅವು 'ಅಮ್ಮಾ' ಎಂದವು. ತಾಯಿಗರುಳಿನ ನಾನು ಓಗೊಂಡೆ. ಅಷ್ಟು ಬಿಟ್ಟರೆ, ಅವರ ನನ್ನ ಸಂಬಂಧ ವರಮಹಾಲಕ್ಷ್ಮಿ ಹಬ್ಬದ ರಾತ್ರಿಯಂದು ಮಾತ್ರ" ಎಂದು ಬಿಟ್ಟಿದ್ದಾಳಲ್ಲಾ, ಇದರಿಂದ ನೊಂದಿರುವ ರೆಡ್ಡಿ ರಾಮುಲುಗಳು "ಅವರು ಏನೇ ಅನ್ನಲಿ. ಅವರು ನಮ್ಮ ಅಮ್ಮ. ಅಮ್ಮ ಅಂದಿದ್ದೆಲ್ಲಾ ನಮಗೆ ಆಶೀರ್ವಾದ" ಎಂದವಂತಲ್ಲಾ, ಅತ್ತ ಹೊಸ ವರ್ಚಸ್ಸಿಗಾಗಿ ಹೆಣಗುತ್ತಿರುವ ಸುಷ್ಮಾ ರಾಜ್‌ಘಾಟ್‌ದಲ್ಲಿ ನರ್ತಿಸತೊಡಗಿದಂತೆ ದಿಗ್ಭ್ರಮೆಗೊಂಡ ಚೆಡ್ಡಿಗಳು ಮುಜುಗರ ಅನುಭವಿಸಿದರಂತಲ್ಲಾ, ಇದಾವುದಕ್ಕೂ ಕೇರ್ ಮಾಡದ ಸುಷ್ಮಾ ಹಲವಾರು ಭಂಗಿಯಲ್ಲಿ ಹೆಜ್ಜೆ ಹಾಕುತ್ತಾ ಕಣ್ಣು ತಿರುಗಿಸಿದ್ದನ್ನು ನೋಡಿದ ಗಾಂಧಿ ಭಕ್ತರಿಗೆ, ಸುಷ್ಮಾ ಏಕಕಾಲಕ್ಕೆ ಹಿಂದಿ ಚಿತ್ರರಂಗದ ಟುಂಟುಂ, ತಮಿಳಿನ ಸಿಲ್ಕ್, ಕನ್ನಡದ ರಮಾದೇವಿಯಂತೆ ಕಾಣಿಸಿದಾಗ ಜನ ಕೇಕೆ ಹಾಕಿ ನಕ್ಕರಂತಲ್ಲಾ, ಬಿಜೆಪಿಯ ಈ ಕ್ಯಾಬರೆ ನರ್ತಕಿಯ ನಡವಳಿಕೆಯನ್ನು ಕಾಂಗೈಗಳು ಪ್ರಶ್ನಿಸಲಾಗಿ ಸಿಟ್ಟಾದ ಸುಷ್ಮಾ "ಇಂದಿರಾಗಾಂಧಿಯಿಂದ ಹಿಡಿದು ಸೋನಿಯಾಗಾಂಧಿವರೆಗೆ ಎಲ್ಲಾ ಹೆಂಗಸರೂ ಡ್ಯಾನ್ಸ್ ಮಾಡಿದ್ದಾರೆ ಹೋಗ್ರಿ" ಎಂದಳಂತಲ್ಲಾ.




"ಅವರು ಡ್ಯಾನ್ಸ್ ಮಾಡಿದ್ದಾರೆ ಸರಿ. ಆದರೆ ರಾಜ್‌ಘಾಟ್‌ನಲ್ಲಿ ಕುಣಿದಿಲ್ಲ, ನಿನಗೆ ಈ ವಯಸ್ಸಿನಲ್ಲಿ ಕುಣಿಯುವ ಉಮೇದು ಬಂದಿದ್ದರೆ ಮಲಗಿರುವ ನಿಮ್ಮ ವಾಜಪೇಯಿ ಎದುರು ನರ್ತಿಸು. ಇಲ್ಲಾ ಸದಾ ಮುನಿಸಿಕೊಂಡಂತಿರುವ ಅಡ್ವಾನಿ ಎದುರು ಕುಣಿಯಮ್ಮ. ಅದು ಬಿಟ್ಟು ಗಾಂಧಿ ಸಮಾಧಿ ಎದುರು ಕುಣಿಯುತ್ತೀಯಲ್ಲಾ, ನೀನೇನು ನಾಥೂರಾಮನ ತಂಗಿಯೇ?" ಎಂದು ಕಾಂಗೈಗಳು ಗುಡುಗಿದವಂತಲ್ಲಾ, ಥೂತ್ತೇರಿ!!!

ಹೊನ್ನಾವರ: ನೋಟರಿ ನಾ(ಲಾ)ಯ್ಕನ ನಖರಾಗಳು!

ಪಬ್ಲಿಕ್ ನೋಟರಿ ಅಂದರೆ, ಅದೊಂದು ನ್ಯಾಯಾಧೀಶ ನಷ್ಟೇ ಪಾವಿತ್ಯ-ಪ್ರಾಮಾಣಿಕತೆ-ಹೊಣೆಗಾರಿಕೆಯ ಹುದ್ದೆ! ನೋಟರಿ ಆದವನಿಗೆ ನೈಸರ್ಗಿಕ ನ್ಯಾಯ ತತ್ವ-ಕಾನೂನಿನ ಸಮುಚಿತ್ತ ಇರಬೇಕು. ಕಾನೂನು ಇಲಾಖೆಯ ನೋಟರಿ ಯಾಗಿ ನೇಮಿಸುವಾಗ ಸತ್ಯನಿಷ್ಠೆ-ನ್ಯಾಯನಿಷ್ಠೆ-ಕಾನೂನು ನಿಷ್ಠೆಯ ಪ್ರತಿಜ್ಞೆ ಬೋಧಿಸಿಯೋ ಕಳಿಸುತ್ತದೆ. ಹಾಗಾಗಿ ನೋಟರಿಯೊಬ್ಬನ ಯಾವುದಾದರೂ ದಸ್ತಾವೇಜು-ಪ್ರಮಾಣ ಪತ್ರಗಳನ್ನು ತಯಾರಿಸಿ ಅಥವಾ ದೃಢೀಕರಿಸಿ ಕೊಟ್ಟನೆಂದರೆ ಅದಕ್ಕೆ ವಿಶೇಷವಾದ ಮಹತ್ವ-ಮನ್ನಣೆಯಿರುತ್ತದೆ.

ಹೀಗಾಗಿ ನೋಟರಿ ಸದಾ ಕಾಯಾ-ವಾಚಾ-ಮನಸಾ ಪರಿಶುದ್ಧನಾಗಿರಬೇಕಾಗುತ್ತದೆ. ಪ್ರಾಮಾಣಿಕತೆ-ಬದ್ಧತೆ-ಘನತೆ ಯಿಂದ ಕರ್ತವ್ಯ ನಿರ್ವಹಿಸಬೇಕಾದ ನೋಟರಿಯೊಬ್ಬ ಹಣದ ಹಪಾಹಪಿಯಿಂದ ತನ್ನ ಅಧಿಕೃತ ಸೀಲನ್ನೇ ಹರಾಜಿಗಿಟ್ಟರೆ ಏನಾದೀತು? ಅಕ್ರಮ-ಅನ್ಯಾಯ-ಅಸತ್ಯಗಳೇ ಹಾವಳಿಯಿಟ್ಟು ಅಮಾಯಕ ಜನ ಬಲಿ ಬೀಳುತ್ತಾರಲ್ಲವಾ? ಅಂಥದೊಂದು ಅನಾಹುತ ಹಲವು ವರ್ಷದಿಂದ ಉತ್ತರ ಕನ್ನಡದ ಹೊನ್ನಾವರ ತಾಲ್ಲೂಕಿನಲ್ಲಿ ಎಸ್.ಎನ್.ನಾಯ್ಕ್ ಎಂಬ 'ನೌಂಟಕಿ ನೋಟರಿ' ನಿರಂತರವಾಗಿ ನಡೆಸುತ್ತಲೇ ಬಂದಿದ್ದಾನೆ. ಕಳೆದೊಂದು ದಶಕದಿಂದ ಈ ನಾಯ್ಕ ನ್ಯಾಯ ವ್ಯವಸ್ಥೆಯನ್ನೇ ಬಡಿದು ಬಾಯಿಗಿಟ್ಟುಕೊಂಡು ಅಕ್ರಮ ಐಶ್ವರ್ಯ ವಂತನಾಗಿರುವುದು ಭಯಾನಕವಾಗಿದೆ!


ಸುರೇಶ್ ಕುಮಾರ್


ಈ ಪೈಸಾ ಪಿಶಾಚಿಯ ನೋಟರಿ ದರ್ಬಾರಿನಲ್ಲಿ ನಡೆದ ಖೋಟಾ ದಸ್ತಾವೇಜು -ಅಫಿಡವಿಟ್-ದೃಢೀಕರಣ ದಂಧೆಗಳು ಒಂದೆರಡಲ್ಲ; ಮೋಸ ವಂಚನೆಯಿಂದ ಜರ್ಝರಿತರಾದ ನಿಷ್ಪಾಪಿಗಳು ಒಬ್ಬಿಬ್ಬರಲ್ಲ. ದೋಖಾಬಾಜಿ ಎಸ್.ಎನ್. ನಾಯ್ಕ 1994ರಲ್ಲಿ ಹೊನ್ನಾವರದ ನೋಟರಿ ಪಬ್ಲಿಕ್ ಆಗಿ ಅವತರಿಸಿದ್ದೇ ಗೋಲ್‌ಮಾಲ್ ಪವಾಡ ದಿಂದೆಂದು ಇವತ್ತಿಗೂ ಆತನ ಸಹೋದ್ಯೋಗಿ ವಕೀಲರು ಪಿಸುಗುಡುತ್ತಾರೆ. ಅಂದು ಹೊನ್ನಾವರ ಕೋರ್ಟಿಗೆ ಬಂದಿದ್ದ ನೋಟರಿ ನೇಮಕಾತಿ ನೋಟಿಫಿಕೇಷನ್ ಯಾರಿಗೂ ಅನುಮಾನ ಬಾರದ ರೀತಿಯಲ್ಲಿ ಹರಿದುಹಾಕಿದ್ದ ನಾಯ್ಕ ಮಾಮ ಇತರ ವಕೀಲರು ಪ್ರತಿಸ್ಪರ್ಧಿಗಳಾಗದಂತೆ ನೋಡಿಕೊಂಡಿದ್ದ. ತಾನೊಬ್ಬನೇ ನೋಟರಿ ಹುದ್ದೆಗೆ ಅರ್ಜಿ ಸಲ್ಲಿಸಿದ್ದ ಈ ಶೇರುಗಾರ ಜಾತಿಯ ನಾಯ್ಕ ಶಿವಮೊಗ್ಗದ ಪರಿಶಿಷ್ಟ ಜಾತಿಯ ಕೋಟೆಗಾರ ಪಂಗಡದವನೆಂದು ಸುಳ್ಳು ಜಾತಿ ಪ್ರಮಾಣಪತ್ರ ಸಲ್ಲಿಸಿದ್ದನೆಂಬ ಗುಲ್ಲೂ ಇದೆ.

ಹೊನ್ನಾವರದ ಬಡಜನರ-ವಿದ್ಯಾರ್ಥಿಗಳ ಪಾಲಿಗೆ ಪೀಡೆಯಂತಾಗಿರುವ ಎಸ್.ಎನ್.ನಾಯ್ಕ ತನಗೆ ಸರ್ಕಾರ ಕೊಟ್ಟಿರುವ ನೋಟರಿ ಸೀಲು (ಠಸ್ಸೆ) ಸುಲಿಗೆ ಲೈಸೆನ್ಸ್ ಎಂದು ತಿಳಿದುಕೊಂಡುಬಿಟ್ಟಿದ್ದಾನೆ. ಅಫಿಡವಿಟ್, ಮೊಕ್ತಾರಿ ನಾಮೆ (ಜಿಪಿಎ), ದಸ್ತಾವೇಜು ಮುಂತಾದ ದೃಢೀಕರಣ ಪ್ರಮಾಣ ಪತ್ರಕ್ಕೆ ಸರ್ಕಾರ ನಿಗದಿಪಡಿಸಿದ ಶುಲ್ಕಕ್ಕಿಂತ 10-20 ಪಟ್ಟು ಹೆಚ್ಚು ಹಣ ನಾಯ್ಕ ಮಾಮಾ ಜನರಿಂದ ಸುಲಿಯುತ್ತಿದ್ದಾನೆ! ಪ್ರಮಾಣ ಪತ್ರಕ್ಕೆ ಬರೋಬ್ಬರಿ 300 ರೂ., ಜಿಪಿಎ ದೃಢೀಕರಿಸಲು ಅನಾಮತ್ತು 1000 ರೂ. ಈತ ಕಿತ್ತುಕೊಂಡ ಉದಾಹರಣೆಯೂ ಇದೆ!! ಹೀಗಾಗಿ ಈತನ ಕಳ್ಳ ಆಸ್ತಿ-ಆದಾಯ ಗ್ರಾಫು ಒಂದೇ ಸಮನೆ ಏರುತ್ತಾ ಸಾಗಿದೆ.

ಹಣ ಅಂತೊಂದು ಸಿಗುತ್ತದೆಂದರೆ ಅದೆಂಥ ಕಾನೂನುಬಾಹಿರ ದಾಖಲೆ ಸೃಷ್ಟಿಗೂ ಎಸ್.ಎನ್. ನಾಯ್ಕ 'ಎಸ್' ಅಂತೆನ್ನುತ್ತಾನೆ! ಸುಳ್ಳು ಜಾತಿ-ಧರ್ಮದ ಪ್ರಮಾಣಪತ್ರ ಬೇಕಿದ್ದರೂ ಈತ ತಯಾರಿಸಿ ಕೊಡಬಲ್ಲ, ಸತ್ತುಹೋದವರೂ ಈತನ ನೋಟರಿಯ ಅಫಿಡವಿಟ್‌ನಲ್ಲಿ ಜೀವ ತಳೆಯುತ್ತಾರೆ. 'ವ್ಯಕ್ತಿ ಸಂಬಂಧವಿಲ್ಲದ' ದಸ್ತಾವೇಜು (Impersonation) ತಯಾರಿಕೆಯಲ್ಲಿ ಎಸ್.ಎಸ್. ನಾಯ್ಕ ನಿಪುಣನೆಂದೇ ಕುಖ್ಯಾತನಾಗಿದ್ದಾನೆ. ಬದಲಿ ವ್ಯಕ್ತಿಯನ್ನು ತಯಾರಿಸಿ ಯಾರ ಜಾಗ ಯಾರಿಗೆ ಬೇಕಾದರೂ ಈತ ಪಾಲು ಮಾಡಿಕೊಡುವ ಧಾರಾಳಿ!!

ದೋಖಾ-ದಗಾ-ದಗಲ್ಬಾಜಿ ನೋಟರಿಕೆಯಿಂದ ಹೆಸರು ವಾಸಿಯಾಗಿರುವ ಎಸ್.ಎನ್. ನಾಯ್ಕ ಸತ್ತವರ ಹೆಸರಿನಲ್ಲಿ ಅಫಿಡವಿಟ್ ತಯಾರಿಸಿಕೊಟ್ಟು ಸಿಕ್ಕಿಬಿದ್ದಿರುವ ಕತೆ ಕುತೂಹಲಕಾರಿಯಾಗಿದೆ! ಮಂಕಿ ಗ್ರಾಮದ ಉಮೇಶ್ ನಾಯ್ಕ ಎಂಬಾತ ಕೊಂಕಣ ರೈಲ್ವೇ ನಿಗಮಕ್ಕೆ ನೌಕರಿಗಾಗಿ ಅರ್ಜಿ ಸಲ್ಲಿಸಿದ್ದ. ರೈಲು ಯೋಜನೆ ಸಂತ್ರಸ್ತರಿಗೆ ಉದ್ಯೋಗ ಕೊಡುವ ಕೋಟಾದಲ್ಲಿ ಆತ ಅರ್ಜಿ ಸಲ್ಲಿಸಿದ್ದ. ಈತನ ತಂದೆ ಮತ್ತು ಇತರ ನಾಲ್ಕೈದು ದಾಯಾದಿಗಳಿಗೆ ಸೇರಿದ ಜಮೀನಿನಲ್ಲಿ ಸುಮಾರು 1 ಎಕರೆ 13 ಗುಂಟೆ ಜಾಗವನ್ನು ಕೊಂಕಣ ರೈಲ್ವೇ ನಿಗಮ ವಶಪಡಿಸಿಕೊಂಡಿತ್ತು, ಉಮೇಶ ನಾಯ್ಕನಿಗೆ ಕೊಂಕಣ ರೈಲ್ವೇ ನಿಗಮದವರು ಆತನಿಗೆ ಉದ್ಯೋಗ ಕೊಡಲು ತಮ್ಮ ಆಕ್ಷೇಪವಿಲ್ಲ ಎಂದು ಇತರ ದಾಯಾದಿಗಳಿಂದ ಎನ್‌ಓಸಿ ತರಲು ಹೇಳಿದ್ದರು.

ಉಮೇಶನಿಗೆ ನಿರಾಕ್ಷೇಪಣಾ ಪತ್ರ ಕೊಡಲು ದಾಯಾದಿಗಳು ಸಿದ್ಧರಿರಲಿಲ್ಲ. ಆಗ ಆತನ ತಲೆಯಲ್ಲಿ ಕ್ರಿಮಿನಲ್ ಐಡಿಯಾ ಬಂದಿದೆ. ಹಣಕೊಟ್ಟರೆ ನೋಟರಿ ಎಸ್.ಎನ್.ನಾಯ್ಕ ಎಂಥ ಖೋಟಾ ಅಫಿಡವಿಟ್ ಕೂಡ ಮಾಡಿಕೊಡುತ್ತಾರೆಂಬ 'ಮಹಿಮೆ' ಕೇಳಿದ್ದ. ಅಂತೆಯೇ ಸೀದಾ ನಾಯ್ಕ ಮಾಮನ ಬಳಿಹೋಗಿದ್ದಾನೆ. ತನ್ನ ಕುಟುಂಬದ ಸತ್ತವರ ಮತ್ತು ಜೀವಂತ ಇದ್ದವರು ರೈಲ್ವೆಯಲ್ಲಿ ನೌಕರಿ ಪಡೆಯಲು ಒಟ್ಟಾಗಿ ಸೂಚಿಸಿದ್ದಾರೆಂಬ ಸುಳ್ಳು ಅಫಿಡವಿಟ್ ತಯಾರಿಸಿ ಕೊಡಲು ಹೇಳಿದ್ದಾನೆ. ಸತ್ತವರು, ಇದ್ದವರ ಬದಲಿಗೆ ನಕಲಿ ವ್ಯಕ್ತಿಗಳನ್ನು ತಯಾರಿಸಿ ನೋಟರಿ ನಾಯ್ಕರ ಮುಂದೆ ನಿಲ್ಲಿಸಿದ್ದಾನೆ. 'ಒಳಗುಟ್ಟು' ಗೊತ್ತಿದ್ದ ನೋಟರಿ ಸಾಹೇಬರು ಅಫಿಡವಿಟ್‌ಗೆ ಸಹಿ ಹಾಕಿ ಬಂದ. ಐದಾರು ಮಂದಿಯಲ್ಲಿ ಒಬ್ಬನಿಗೂ ಹೆಸರು, ವಯಸ್ಸು, ವಿಳಾಸ, ಉದ್ಯೋಗ ಕೇಳಲಿಲ್ಲ, ಈ ವ್ಯಕ್ತಿಗಳ ಗುರುತು ಗೊತ್ತಿದೆ ಎಂದು ಸಾಕ್ಷಿ ಸಹಿ ಹಾಕಲು ಬಂದವರಿಗೂ ಏನೂ ಕೇಳಲಿಲ್ಲ, ಸಾವಿರದ ಲೆಕ್ಕದಲ್ಲಿ ಫೀಸಷ್ಟೇ ನಾಯ್ಕ ಮಾಮ ಕೇಳಿದ್ದಾನೆ. ದೊಡ್ಡ ಮೊತ್ತ ಸಿಕ್ಕದ್ದೇ ಕಂಡ-ಕಂಡಲ್ಲಿ ನೋಟರಿ ಸೀಲ್ ಒತ್ತಿ ಸಹಿ ಗುಜರಾಯಿಸಿ ಅಫಿಡವಿಟ್ ಕೊಟ್ಟು ಕಳಿಸಿದ್ದಾನೆ.


ಎಸ್.ಎನ್.ನಾಯ್ಕ


ಈ ಖೋಟಾ ಅಫಿಡವಿಟ್ ಆಧಾರದಲ್ಲಿ ಉಮೇಶ್ ನಾಯ್ಕ ನೌಕರಿ ಗಿಟ್ಟಿಸಿಕೊಂಡಿದ್ದಾನೆಂದು ಸೀತೆ ಬಾಲಚಂದ್ರ ನಾಯ್ಕ ಎಂಬಾಕೆ ಮಂಕಿ ಪೊಲೀಸ್ ಠಾಣೆಗೆ ಕಂಪ್ಲೇಂಟ್ ಕೊಡುತ್ತಾಳೆ. ನೋಟರಿ ಎಸ್.ಎನ್.ನಾಯ್ಕರ ಮುಂದೆ ತಮ್ಮ ಕುಟುಂಬದ ಸತ್ತವರ-ಜೀವಂತ ಇದ್ದವರ ಸಹಿ ಫೋರ್ಜರಿ ಮಾಡಿ ಸುಳ್ಳು ಎನ್‌ಓಸಿ ಸರ್ಟಿಫಿಕೇಟ್ ಉಮೇಶ್ ನಾಯ್ಕ ತಯಾರಿಸಿದ್ದಾನೆಂಬುದು ಸೀತೆಯ ಅಳಲು. ಇದೀಗ ದೊಡ್ಡ ಪ್ರಕರಣವಾಗಿದೆ. ಹೊನ್ನಾವರ ಜೆಎಂಎಫ್‌ಸಿ ಕೋರ್ಟ್‌ನಲ್ಲಿ ಮಂಕಿ ಪಿಎಸ್ ಕ್ರೈಂ ನಂಬರ್ 51/2005ರಂತೆ ಕೇಸ್ ನಡೆಯುತ್ತಿದೆ. ಇದರಲ್ಲಿ ನೋಟರಿ ಎಸ್.ಎನ್. ನಾಯ್ಕನನ್ನೂ ಆರೋಪಿಯನ್ನಾಗಿ ಮಾಡಲಾಗಿದೆ.

ಈ ನೋಟರಿ ನಾ(ಲಾ)ಯ್ಕ ಎಂಥ ಧೂರ್ತನೆಂದರೆ ಸಾಕ್ಷಿದಾರರು ಅಫಿಡವಿಟ್‌ದಾರರ (ಪ್ರತಿಜ್ಞಾಧಾರಕ) ಗುರುತಿಸಿದ ಆಧಾರದಲ್ಲಿ ತಾನು ಅಫಿಡವಿಟ್ ತಯಾರಿಸಿ ಕೊಟ್ಟಿದ್ದೇನೆ ಎನ್ನುತ್ತಿದ್ದಾನೆ. ನೋಟರಿ ಪ್ರತಿಜ್ಞಾಧಾರಕ ಮತ್ತು ಸಾಕ್ಷಿ ದಾರರನ್ನು ಆಮೂಲಾಗ್ರ ಪರಿಶೀಲಿಸಿದ ನಂತರವೇ ಅಫಿಡವಿಟ್‌ಗೆ ಸಹಿ ಮಾಡಬೇಕೆಂಬುದು ಆತನ ಹುದ್ದೆಯ ಕನಿಷ್ಠ ಜ್ಞಾನ ಮತ್ತು ಕನಿಷ್ಠ ಕರ್ತವ್ಯ. ಇದೆಲ್ಲ ಗೊತ್ತಿದ್ದೂ ನೋಟರಿ ನಾಯ್ಕ ಮಾಮ ಸತ್ತವರ ಮತ್ತು ಜೀವಂತ ಇದ್ದವರ ಹೆಸರಲ್ಲಿ ಫೋರ್ಜರಿ ಪ್ರಮಾಣಪತ್ರ ರೆಡಿಮಾಡಿ ಕೊಟ್ಟು ಭರ್ಜರಿ ಕಾಸು ಕಮಾಯಿಸಿದ್ದಾನೆ. ಅಲ್ಲಿಗೆ ತಾನು ನೋಟರಿ ಆಗಲು ನಾಲಾಯಕ್ ಎಂದು ಸ್ವಯಂ ಸಾಬೀತು ಪಡಿಸಿಕೊಂಡಿದ್ದಾನೆ!

ದಸ್ತೂರ್ ನಾಟಯಿಂದಲೂ ನೋಟರಿ ನಾಯ್ಕ ತರಹೇವಾರಿ ನಖರಾ ಮಾಡಿದ್ದು ಇಡೀ ಜಿಲ್ಲೆಯಲ್ಲೇ ಪ್ರಚಾರವಾಗಿದೆ. ಹೊನ್ನಾವರದ ಹಳದಿಪುರ ಗ್ರಾಮದ ಕೃಷ್ಣಗೌಡನ ಸ್ವಯಾರ್ಜಿತ ಆಸ್ತಿಯನ್ನು ಆತನ ತಮ್ಮ ಗೋಪಾಲಗೌಡನಿಗೆ ಎಸ್.ಎನ್.ನಾಯ್ಕ ವಕೀಲರು ಪಾಲು ಮಾಡಿಕೊಟ್ಟಿದ್ದು ದೊಡ್ಡ ಸುದ್ದಿಯಾಗಿತ್ತು. ಕೃಷ್ಣಗೌಡನಿಗೆ ಗೊತ್ತೇ ಇಲ್ಲದಂತೆ ಆತನ 30 ಗುಂಟೆ ಜಮೀನು ಪಾಲಾಗಿ ಹೋಗಿತ್ತು. ಹಳದಿಪುರ ಸರ್ವೆ ನಂಬರ್ 676ರ 30 ಗುಂಟೆಯಲ್ಲಿ ಆತನಿಗೆ ಬರೀ ಎರಡು ಗುಂಟೆ ಇಟ್ಟು ಉಳಿದ 28 ಗುಂಟೆ ತಮ್ಮ ಗೋಪಾಲನ ಹೆಸರಿಗೆ ಬರೆಯಲಾಗಿತ್ತು.

ಈ ಕರಾಮತ್ತು ಸಬ್-ರಿಜಿಸ್ಟ್ರಾರ್ ಎದುರೇ ನೋಟರಿ ನಾಯ್ಕ ಮಾಡಿ ಮುಗಿಸಿದ್ದಾನೆ. ಕೃಷ್ಣಗೌಡನೆಂದು ಗಿರಿಯಾ ಗೌಡ ಎಂಬಾತನನ್ನು ಉಪನೋಂದಣಾಧಿಕಾರಿಗೆ ಪರಿಚಯಿಸ

ಧಾರವಾಡ ಹೋರಾಟಗಾರ ರಾಬರ್ಟ್‌ನ ವಸೂಲಿ ಆರ್ಭಟ




ಕೆಪಿಸಿಸಿ ಸದಸ್ಯ ರಾಬರ್ಟ್ ದದ್ದಾಪುರಿಯ ಅಸಲಿಯತ್ತು ದೊಡ್ಡಮಟ್ಟದಲ್ಲಿ ಬಯಲಾಗಿದೆ. ಥರಥರದ ಇಶ್ಯುಗಳನ್ನಿಟ್ಟುಕೊಂಡು ನಿಯಮಿತವಾಗಿ ಹೋರಾಟ ನಡೆಸುತ್ತಲೇ ಜನನಾಯಕನ ಪೋಸು ಕೊಡುತ್ತಿದ್ದವನು ಘಟಿಂಗ ದದ್ದಾಪುರಿ. ಇದನ್ನು ಧಾರವಾಡ-ಹುಬ್ಬಳ್ಳಿ ಸೀಮೆಯ ಒಂದಷ್ಟು ಮಂದಿ ನಿಜವೆಂದು ನಂಬಿದ್ದರೂ ಆಶ್ಚರ್ಯವಿಲ್ಲ, ಇಂಥವನೀಗ ಹೋರಾಟದ ಹೆಸರಲ್ಲೇ ಡೀಲು ನಡೆಸಲು ಹೋಗಿ ಕಂಬಿ ಎಣಿಸುತ್ತಿದ್ದಾನೆ. ಇದರೊಂದಿಗೆ ಕ್ರಿಮಿನಲ್‌ಗಳಿಗೆ ತಮ್ಮ ಪಕ್ಷದಸದಸ್ಯತ್ವ ಮಾರಾಟ ಮಾಡೋ ಚಾಳಿಯಿರುವ ಕಾಂಗ್ರೆಸ್ ನಾಯಕರು ಕೂಡಾ ಹೀನಾಯವಾಗಿ ಚಿತ್ತಲಾದಂತಾಗಿದೆ.

ಧಾರವಾಡ ಸೀಮೆಯಲ್ಲಿ ದದ್ದಾಪುರಿಯದ್ದೊಂದು ಕುಖ್ಯಾತ ಇತಿಹಾಸವಿದೆ. ಮೊದಲು ಪುಂಡು ಪೋಕರಿಯಾಗಿ ಅಂಡಲೆಯುತ್ತಿದ್ದವನು ದರೋಡೆಕೋರನಾಗಿ ಬದಲಾದದ್ದು, ಆ ಕಾರಣದಿಂದಲೇ ಸಾಕಷ್ಟು ಬಾರಿ ಪೊಲೀಸ್ ಆತಿಥ್ಯ ಅನುಭವಿಸಿದ್ದು ಮತ್ತು ಪಾತಕಿಗಳೊಂದಿಗೆ ಸಂಪರ್ಕಕ್ಕೆ ಬಂದಿದ್ದೆಲ್ಲವೂ ಈ ಭಾಗದ ಜನರ ಕಣ್ಣೆದುರಿಗೇ ನಡೆದ ವಿದ್ಯಮಾನಗಳು. ಇಂಥಾ ದದ್ದಾಪುರಿಗೆ ಇತ್ತೀಚೆಗೆ ಕೆಪಿಸಿಸಿ ಸದಸ್ಯತ್ವವನ್ನು ಧಾರೆಯೆರೆಯಲಾಗಿತ್ತು, ಈ ನಡುವೆಯೇ ಹಗಲು ಹೋರಾಟ ಹಾಗೂ ರಾತ್ರಿ ಡೀಲು ನಡೆಸುವ ಹೈಟೆಕ್ ದಂಧೆಯೊಂದನ್ನು ಶುರು ಹಚ್ಚಿಕೊಂಡಿದ್ದ ಈತನಿಗೆ ಜೊತೆಯಾದದ್ದು ಹೇಮಂತ ಗುರ್ಲಹೊಸೂರು, ಮನೋಜ ಕರ್ಜಗಿ, ಆನಂದ ಜಾಧವ, ವಸಂಸ ಆರ್ಕಾಚಾರಿಗಳೆಂಬ ಅನಾಹುತಕಾರಿ ಎಲಿಮೆಂಟುಗಳು. ಇವರುಗಳೆಲ್ಲ ಮೊನ್ನೆ ಧಾರವಾಡದ ಜಿಲ್ಲಾಧಿಕಾರಿ ಕಚೇರಿ ಎದುರು ನಡೆಸಿದ ಹೋರಾಟ ಪ್ರಹಸನವೊಂದರಲ್ಲಿ ಒಗ್ಗಟ್ಟಾಗಿ ಜೈಲಿಗೆ ಗದುಮಿಸಿಕೊಂಡಿದ್ದಾರೆ!

ದದ್ದಾಪುರಿ ಮೊನ್ನೆ ದಿನ ಏಕಾಏಕಿ ತನ್ನ ಪಟಾಲಂನೊಂದಿಗೆ ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದವನೇ ದರಣೆ ಕೂತಿದ್ದ. ಈತನ ಟಾರ್ಗೆಟ್ ಆಗಿದ್ದದ್ದು ಧಾರವಾಡದ ತುಂಬೆಲ್ಲಾ ಹರಡಿಕೊಂಡಿರುವ ಪರವಾನಗಿ ರಹಿತ ವೈನ್‌ಶಾಪ್‌ಗಳು. ಸದ್ಯ ಇಂಥಾ ವೈನ್‌ಶಾಪ್‌ಗಳು ನಗರದ ತುಂಬಾ ರಾಡಿಯೆಬ್ಬಿಸುತ್ತಿರುವ ವಿಚಾರ ಜನಸಾಮಾನ್ಯರಿಗೂ ರೇಜಿಗೆ ಹುಟ್ಟಿಸಿದ್ದು ನಿಜ. ಇಂಥಾ ಬಹುತೇಕ ವೈನ್‌ಶಾಪ್‌ಗಳು ಅಬಕಾರಿ ನಿಯಮಗಳನ್ನು ಗಾಳಿಗೆ ತೂರಿ ಕಾರ್ಯನಿರ್ವಹಿಸುತ್ತಿವೆ. ಅಬಕಾರಿ ಹಾಗೂ ಪೊಲೀಸ್ ಇಲಾಖೆಯ ಅಡ್ನಾಡಿಗಳನೇಕರು ಇಂಥ ಶಾಪ್ ಮಾಲೀಕರುಗಳಿಂದ ಕಪ್ಪಪಡೆದು ತೆಪ್ಪಗಿದ್ದಾರೆ.

ಪ್ರತೀ ವೈನ್‌ಶಾಪ್‌ಗಳೂ ಸಿಎಲ್-2 ಪರವಾನಗಿ ಪಡೆಯಲೇಬೇಕು. ಇಂಥಾ ಶಾಪ್‌ಗಳು ಪಾರ್ಸೆಲ್ ನೀಡಬಹುದೇ ಹೊರತು ಅಲ್ಲೇ ಪಾನಗೋಷ್ಠಿಗೆ ಅವಕಾಶ ಕಲ್ಪಿಸುವಂತಿಲ್ಲ, ಒಂದು ವೇಳೆ ಎರಡೂ ಒಂದೇ ಕಡೆ ಲಭ್ಯವಾಗುವಂತೆ ಮಾಡೋ ಉದ್ದೇಶವಿದ್ದರೆ ಬಾರ್ ಅಂಡ್ ರೆಸ್ಟೋರೆಂಟ್ ಅನ್ನೇ ತೆರೆಯಬೇಕು. ಅದರಿದಕ್ಕೆ ದುಬಾರಿ ಪರವಾನಗಿ ಶುಲ್ಕ ಕೊಡಬೇಕಾಗುವುದು ಅನಿವಾರ್ಯ. ಇದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಬಹುತೇಕ ವೈನ್‌ಶಾಪ್ ಮಾಲೀಕರು ಅಧಿಕಾರಿಗಳೊಂದಿಗೆ ಒಳಒಪ್ಪಂದ ನಡೆಸಿ ಬರೀ ಸಿಎಲ್-2 ಪರವಾನಗಿ ಪಡೆದು ಅಲ್ಲಲ್ಲೇ ಕುಳಿತು ಕುಡಿಯಲು ಅನುವು ಮಾಡಿಕೊಡುತ್ತಿದ್ದಾರೆ.

ಅವ್ಯಾಹತವಾಗಿ ನಡೆಯುತ್ತಿರುವ ಈ ಕಾನೂನುಬಾಹಿರ ದಂಧೆಯನ್ನು ಹಣ ಹೊಡೆಯುವ ಹಾದಿಯನ್ನಾಗಿ ಮಾರ್ಪಡಿಸಿ ಕೊಂಡವನು ಕೆಪಿಸಿಸಿ ಸದಸ್ಯ ರಾಬರ್ಟ್ ದದ್ದಾಪುರಿ. ಈತ ಧಾರವಾಡ ರಾಣಿಚೆನ್ನಮ್ಮ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹೇಮಂತ್ ಗುರ್ಲಹೊಸೂರನೊಂದಿಗೆ ಸೇರಿ ಪಕ್ಕಾ ಸ್ಕೆಚ್ಚೊಂದನ್ನು ಸಿದ್ಧಪಡಿಸಿದ. ಅದರ ಫಲವಾಗಿಯೇ ಧಾರವಾಡದ ಜಿಲ್ಲಾಧಿಕಾರಿ ಕಚೇರಿ ಮುಂದೆ ದರಣಿ ಶುರುವಾಗಿತ್ತು. ಈ ಬಗ್ಗೆ ಜನಸಾಮಾನ್ಯರೂ ಸಹ ಪರವಾಗಿ ಮಾತಾಡಿಕೊಂಡದ್ದು, ಬೆಂಬಲಿಸಿದ್ದು ಸುಳ್ಳಲ್ಲ.


ಹೇಮಂತ

ಆದರೆ ಈ ದರಣಿಯ ಹಿಂದಿದ್ದದ್ದು ಪಕ್ಕಾ ದಗಲ್ಬಾಜಿ. ದದ್ದಾಪುರಿ ನೇತೃತ್ವದಲ್ಲಿ ಈ ರೀತಿಯದ್ದೊಂದು ಕೆಲಸ ನಡೆಯುತ್ತಲೇ ಕಳ್ಳತನದ ವ್ಯವಹಾರ ನಡೆಸುತ್ತಿದ್ದ ವೈನ್‌ಶಾಪ್ ಮಾಲೀಕರು ಬೆದರಿಹೋಗಿದ್ದರು. ಧಾರವಾಡದ ವೈನ್‌ಶಾಪ್ ಮಾಲೀಕರ ಸಂಘವಂತೂ ಹೇಗಾದರೂ ಮಾಡಿ ಬಚಾವಾಗೋ ಧಾವಂತಕ್ಕೆ ಬಿದ್ದಿತ್ತು. ತದನಂತರ ಸಂಘದ ಅಧ್ಯಕ್ಷ ರಘುನಾಥ ಶೆಟ್ಟಿ ಎಂಬಾತನ ನೇತೃತ್ವದಲ್ಲಿ ಪಕ್ಕಾ ಕಾರ್ಯಾಚರಣೆ ಶುರುವಾಗಿತ್ತು. ದದ್ದಾಪುರಿಯೊಂದಿಗೆ ಗೆಳೆತನ ಹೊಂದಿದ್ದ ವೈನ್‌ಶಾಪೊಂದರ ಮಾಲೀಕ ಮಹೇಶ ಈ ಡೀಲಿಂಗ್‌ನ ಮಧ್ಯಸ್ಥಿಕೆ ವಹಿಸಿದ.

ವೈನ್‌ಶಾಪ್ ಮಾಲೀಕರ ಸಂಘ ಈ ರೀತಿ ಸಂಧಾನಕ್ಕೆ ಬಂದದ್ದೇ ದದ್ದಾಪುರಿ ಅಂಡ್ ಗ್ಯಾಂಗಿಗೆ ತುಪ್ಪ ಜಾರಿ ರೊಟ್ಟಿಗೆ ಬಿದ್ದಂತಾಗಿತ್ತು. ದದ್ದಾಪುರಿ ಧರಣಿ ನಿಲ್ಲಿಸಲು ಅಖಂಡ 10 ಲಕ್ಷಕ್ಕೆ ಬೇಡಿಕೆ ಮುಂದಿಟ್ಟ. ಈ ಬಗ್ಗೆ ಚೌಕಾಶಿ ನಡೆದು 5 ಲಕ್ಷಕ್ಕೆ ಇಳಿದ. ಅಂತೂ 3.50 ಲಕ್ಷಕ್ಕೆ ಅಂತಿಮ ವಾಗಿ ಡೀಲು ಮುಗಿದಿತ್ತು. ಆದರೆ ದದ್ದಾಪುರಿಯ ಗ್ಯಾಂಗ್ ಒಂದು ಸಾರಿ ಕೊಟ್ಟ ಹಣಕ್ಕೆ ನಿಯತ್ತಿಂದಿರುವುದಿಲ್ಲ ಎಂಬ ಅಂಶ ಖತರ್‌ನಾಕ್ ವ್ಯಾಪಾರಸ್ಥರಿಗೆ ಮೊದಲೇ ಗೊತ್ತಿತ್ತು. ಆದುದರಿಂದಲೇ ಈ ಡೀಲಿಂಗ್‌ನ ಸಂಪೂರ್ಣ ದೃಶ್ಯಾವಳಿಗಳನ್ನು ಖಾಸಗಿ ಚಾನೆಲ್‌ವೊಂದರಿಂದ ಚಿತ್ರೀಕರಿಸಿಕೊಂಡಿದ್ದರು.

ಈ ಬಗ್ಗೆ ಯಾವುದೇ ಸುಳಿವಿರದ ದದ್ದಾಪುರಿ ದಿನ ಕಳೆಯುವಷ್ಟರಲ್ಲೇ ಅಸಲಿ ಬುದ್ಧಿ ಪ್ರದರ್ಶಿಸಿದ. ಮತ್ತಷ್ಟು ಹಣ ನೀಡುವಂತೆ ವೈನ್‌ಶಾಪ್ ಮಾಲೀಕರ ಸಂಘದ ಮಂದಿಗೆ ಗಂಟುಬಿದ್ದ. ಇದರಿಂದ ರೊಚ್ಚಿಗೆದ್ದ ಸಂಘದವರು ಸೀದಾ ಪೊಲೀಸ್ ಠಾಣೆಗೆ ತೆರಳಿ ರಾಬರ್ಟ್ ದದ್ದಾಪುರಿ ಹಾಗೂ ಹೇಮಂತ್ ಗುರ್ಲ ಹೊಸೂರನ ಮೇಲೆ ಕಂಪ್ಲೇಂಟು ಕೊಟ್ಟರು. ಸಾಕ್ಷಿಗೆ ಸಿಡಿಯನ್ನು ಪೂರೈಸಿದ್ದೇ ಇಬ್ಬರ ಮೇಲೂ ಕ್ರಿಮಿನಲ್

ಕಳ್ಳರನ್ನು ಕಂಡರೆ ಯಾಕಿಂಥಾ ಪ್ರೀತಿ?

ಕಾಂಗ್ರೆಸ್ ಎಂಬ ಪುರಾತನ ಪಕ್ಷ ಹೆಚ್ಚೆ ಎತ್ತಿಕ್ಕಲೂ ಆಗದಂಥ ನಿತ್ರಾಣ ಸ್ಥಿತಿ ತಲುಪಿರುವುದಕ್ಕೆ ನಾಯಕರ ನಡುವಿನ ಆಂತರಿಕ ಗುದ್ದಾಟವೇ ಪ್ರಮುಖ ಕಾರಣ. ಈ ಖಾಯಿಲೆ ಯಾವ ರೀತಿ ಉಲ್ಬಣಿಸಿದೆಯೆಂದರೆ, ಒಬ್ಬರನ್ನೊಬ್ಬರು ಹಣಿಯಲು ಎಂಥಾ ಕ್ರಿಮಿನಲ್‌ಗಳಿಗಾದರೂ ಪಟ್ಟ ಕಟ್ಟಿಬಿಡಬಲ್ಲ ಭಂಡ ವಾತಾವರಣ ಪಕ್ಷದೊಳಗಿದೆ. ಅಷ್ಟಕ್ಕೂ ಕಾಂಗ್ರೆಸ್‌ನೊಳಗೆ ಅಂತಹುದೊಂದು ಕಾಲೆಳೆದಾಟ ಇಲ್ಲದೆ ಹೋಗಿದ್ದರೆ ರಾಬರ್ಟ್ ದದ್ದಾಪುರಿಯೆಂಬ ಘಟಿಂಗ ಕೆಪಿಸಿಸಿ ಸದಸ್ಯನಾಗಲು ಸಾಧ್ಯವೇ ಇರುತ್ತಿರಲಿಲ್ಲ, ಡಿ.ಕೆ. ಶಿವಕುಮಾರ್‌ಗೆ ಹತ್ತಿರದವನಾದ ದದ್ದಾಪುರಿ ಆ ಬಲದಿಂದಲೇ ಮೆರೆದಾಡಲಾರಂಭಿಸಿದ್ದ. ಡಿಕೆಶಿ ಎಚ್ಕೆ ಪಾಟೀಲರನ್ನು ಹಣಿಯುವ ಏಕಮಾತ್ರ ಉದ್ದೇಶದಿಂದ ದಗಲ್ಬಾಜಿ ದದ್ದಾಪುರಿಯನ್ನು ಕೆಪಿಸಿಸಿ ಸದಸ್ಯನನ್ನಾಗಿಸಿದ್ದೀಗ ಇತಿಹಾಸ.

ಇನ್ನು ದದ್ದಾಪುರಿಯೊಂದಿಗೆ ಕಂಬಿ ಎಣಿಸುತ್ತಿರುವ ಇನ್ನೋರ್ವ ವಂಚಕ ಹೇಮಂತ ಗುರ್ಲಹೊಸೂರ ಕುರುಬ ಸಮುದಾಯದವನು. ಜಾತಿಯ ಕಾರಣದಿಂದಲೇ ಸಿದ್ಧರಾಮಯ್ಯನ ಹಿಂದೆಮುಂದೆ ಠಳಾಯಿಸಲಾರಂಭಿಸಿದ ಈತ ಆ ಬಲದಿಂದಲೇ ಮಾಡದ ದಂಧೆಗಳಿಲ್ಲ, ಹುಟ್ಟಾ ಲಫಂಗನಾದ ಹೇಮಂತನನ್ನು ಸಿದ್ಧರಾಮಯ್ಯನ ಪ್ರಭಾವದಿಂದಲೇ ಧಾರವಾಡ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷನನ್ನಾಗಿ ಮಾಡಲಾಗಿತ್ತು,

ಈ ರೀತಿ ಕಳ್ಳಕಾಕರನ್ನೆಲ್ಲಾ ನಾಯಕರನ್ನಾಗಿಸುವ ಚಾಳಿಯಿಂದಲೇ ಕಾಂಗ್ರೆಸ್ ಪಕ್ಷ ಶವಾಸನ ಹಾಕಿರುವುದು ವಾಸ್ತವ. ಇಂಥಾ ಪಕ್ಷದ ಬಗ್ಗೆ ಜನರಲ್ಲಿ ಅದೆಂಥಾ ಗೌರವ ಉಳಿದೀತು?

ಒಂದಂತೂ ಸತ್ಯ ಕಾಂಗ್ರೆಸ್ ನಾಯಕರಿಗೆ ಕಳ್ಳರೆಡೆಗಿನ ಪ್ರೀತಿ ಕರಗದ ಹೊರತು ತಿಪ್ಪರಲಾಗ ಹಾಕಿದರೂ ಪಕ್ಷ ಉದ್ಧಾರವಾಗುವುದು ಸಾಧ್ಯವಿಲ್ಲ,

ಲಾಗಿತ್ತು. ಈ ವಂಚನೆ ಗೊತ್ತಾಗುತ್ತಲೇ ಕೃಷ್ಣಗೌಡ ನ್ಯಾಯಾಲಯಕ್ಕೆ ಹೋಗಿದ್ದ. ಅಲ್ಲಿ ದಸ್ತೂರ್ ಎಸ್.ಎನ್.ನಾಯ್ಕ ಮಾಡಿದ ಹಿಸ್ಸೆ ದಸ್ತಾವೇಜು ವ್ಯಕ್ತಿ ಸಂಬಂಧವಿಲ್ಲದ (Impersonation) ಎಂದು ಸಿವಿಲ್ ನ್ಯಾಯಾಲಯ ಹೇಳಿತ್ತು. ಕೇಸು ಅಣ್ಣ-ತಮ್ಮಂದಿರಲ್ಲಿ ರಾಜಿಯಿಂದ ಮುಕ್ತಾಯವಾದ್ದರಿಂದ ನೋಟರಿ ನಾಯ್ಕ ಬಚಾವಾಗಿದ್ದ. ಇಲ್ಲದಿದ್ದರೆ ಈ ಕ್ರಿಮಿನಲ್ ಪಾತಕಕ್ಕೆ ಆತ ಕಂಬಿ ಎಣಿಸಬೇಕಾಗುತ್ತಿತ್ತು!!

ಈ ನೋಟರಿ ನಾಯ್ಕನ ಸಾಮಾಜಿಕ ಸ್ಟೇಟಸ್ಸೂ ವಕ್ರ-ವಕ್ರವೇ! ಆತ ನೋಟರಿಯಲ್ಲಷ್ಟೇ ಅಲ್ಲ, ದೈನಂದಿನ ಬದುಕಲ್ಲೂ, ಕಾನೂನು-ಕಟ್ಟಳೆ, ರೀತಿ-ನೀತಿಗೆ ಕವಡೆ ಕಿಮ್ಮತ್ತು ಕೊಡುವ ಪೈಕಿಯಲ್ಲ. ಇದು ಆತ ಪಟ್ಟಣ ಪಂಚಾಯತ್‌ನ ನಿಯಮಗಳನ್ನು ಬುದ್ಧಿಪೂರ್ವಕವಾಗೇ ಉಲ್ಲಂಘಿಸಿ ಹೊನ್ನಾವರ ಪೇಟೆಯ ಮಸೀದಿ ರಸ್ತೆಯ ಗಟಾರವನ್ನೇ ಅತಿಕ್ರಮಿಸಿ ತನ್ನ ಆಫೀಸು ಕಟ್ಟಡ ಕಟ್ಟಿಕೊಂಡಾಗ ಜನರಿಗೆ ಖಾತ್ರಿಯಾಗಿ ಹೋಗಿತ್ತು! ಈತ ಅಕ್ರಮವಾಗಿ ಕಟ್ಟಡ ಕಟ್ಟಿಕೊಂಡರೂ ಪಟ್ಟಣ ಪಂಚಾಯತ್‌ನವರು ಮೊದಮೊದಲು ತೆಪ್ಪಗೇ ಇದ್ದರು. ಇದಕ್ಕೆ ಕಾರಣ ಈ ಎಸ್.ಎನ್. ನಾಯ್ಕನ ಅಣ್ಣನ ಮಗ ಆರ್.ಪಿ.ನಾಯ್ಕ ಎಂಬ ಜೇಇ ಗ್ರೇಡಿನವನು ಕಾರವಾರದ ನಗರಾಭಿವೃದ್ಧಿ ಕೋಶದಲ್ಲಿ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಗಿ ಕುಳಿತಿರುವುದಾಗಿತ್ತು. ಈ ಭ್ರಷ್ಟ ಇಂಜಿನಿಯರ್‌ನ ಒತ್ತಡಕ್ಕೆ ಪಟ್ಟಣ ಪಂಚಾಯತ್ ಅಧಿಕಾರಿಗಳು ಪಕ್ಕಾಗಿ ಹೋಗಿದ್ದರು. ಈ ಚೋರ ಇಂಜಿನಿಯರ್‌ನ ಅವ್ಯವಹಾರವೇ ಪ್ರತ್ಯೇಕ ಪುರಾಣ ಆಗುವುದಿದೆ!

ಆದರೆ ಯಾವಾಗ ಜಿಲ್ಲಾಧಿಕಾರಿಯಾಗಿದ್ದ ಖಡಕ್ ಮನೀಶ್ ಮೌದ್ಗಿಲರೇ ಅಕ್ರಮ ಕಟ್ಟಡದ ವಿರುದ್ಧ ಕಟ್ಟುನಿಟ್ಟಿನ ಕಾರ್ಯಾಚರಣೆಗೆ ಇಳಿದರೋ ಆಗ ಎಸ್.ಎನ್. ನಾಯ್ಕನ ಅಕ್ರಮ ಕಟ್ಟಡದ ಅತಿಕ್ರಮಣದ ಭಾಗವೂ ನೆಲಕ್ಕುರುಳಿತ್ತು. ಖ್ಯಾತ ಸಾಹಿತಿಯಾಗಿದ್ದ ಕೃಷ್ಣಾನಂದ ಕಾಮತ್‌ರ ಹೆಸರಲ್ಲಿ ಹೊನ್ನಾವರದ ಲಕ್ಷ್ಮೀನಾರಾಯಣ ನಗರದಲ್ಲಿ ಲೈಬ್ರರಿ ಒಂದು ತಲೆ ಎತ್ತುತ್ತಿದ್ದಾಗ ಕಿರಿಕ್ ಮಾಡಿದ್ದ ಎಸ್.ಎನ್.ನಾಯ್ಕ ತಾನೇ ರಸ್ತೆ-ಗಟಾರ ಅತಿಕ್ರಮಣ ಮಾಡಿ ನಗೆಪಾಟಲಿಗೀಡಾಗಿದ್ದು ದೊಡ್ಡ ಜೋಕಾಗಿತ್ತು. ಇದು ಇವತ್ತಿಗೂ ಹೊನ್ನಾವರದಲ್ಲಿ ಟಾಕ್ ಆಫ್ ದಿ ಟೌನ್! ಹಾಗೆಯೇ ಸರ್ವೆ ನಂಬರ್ 503ರಲ್ಲಿ ಅರಣ್ಯ ಇಲಾಖೆ ಜಾಗ ಅತಿಕ್ರಮಿಸಿ ನೆರೆಹೊರೆಯವರಿಗೆ ಧಮಕಿ ಹಾಕಿ ಬೇಲಿ ಹಾಕಿಕೊಂಡಿರುವುದು ನೋಟರಿ ನಾಯ್ಕನ ಅಸಲಿ ಅವತಾರವನ್ನು ಅನಾವರಣ ಮಾಡಿಬಿಟ್ಟದೆ!

ಈಗ ಹೇಳಿ ನ್ಯಾಯವಾದಿ ಆಗಿದ್ದೂ ಅನ್ಯಾಯ ಮಾಡುವ, ನೋಟರಿಯಾಗಿದ್ದೂ ಕ್ರಿಮಿನಲ್ ಕಿತಾಪತಿ ಮಾಡುವ, ಕಾಸಿಗಾಗಿ ಎಂಥ ಪಾತಕಕ್ಕೂ ಹೇಸದ ಎಸ್.ಎನ್. ನಾಯ್ಕ ನೋಟರಿ ಆಗಲು ಅರ್ಹನಾ? ಈ ಚಾರಿತ್ಯ ಹೀನನಿಗೆ ಆ ಯೋಗ್ಯತೆ ಇದೆಯೇ? ನಾಯ್ಕನ ಲೀಲಾವಿನೋದಗಳೆಲ್ಲ ಜಿಲ್ಲಾ ನ್ಯಾಯಾಧೀಶರು-ಲಾ ಡಿಪಾರ್ಟ್‌ಮೆಂಟ್ ಮತ್ತು ಜಿಲ್ಲಾಧಿಕಾರಿಗಳ ಗಮನಕ್ಕೂ ಹೋಗಿದೆ. ಹೀಗಾಗಿ ಆತನ ನೋಟರಿ ಲೈಸೆನ್ಸ್ ಅನ್ನು ಕಾನೂನು ಇಲಾಖೆ ನವೀಕರಿಸಿರಲಿಲ್ಲ, ಆತನ ವಿರುದ್ಧ ವಿಚಾರಣೆ ನಡೆಯುತ್ತಿದೆ. ಆದರೆ ಎಸ್.ಎನ್. ನಾಯ್ಕ ನ್ಯಾಯಾಲಯದಿಂದ ತಡೆಯಾಜ್ಞೆ ತಂದುಕೊಂಡು 'ನೋಟರಿ ದಂಧೆ' ಸಲೀಸಾಗಿ ಮುಂದುವರೆಸಿದ್ದಾನೆ!

ನೋಟರಿ ಕುಲಕ್ಕೆ ಕಳಂಕದಂತಿರುವ ನಾಯ್ಕನಿಂದ ಇನ್ನಷ್ಟು ಅಮಾಯಕರಿಗೆ ಆಘಾತವಾಗುವ ಮೊದಲೇ ಕಾನೂನು ಇಲಾಖೆ ಎಚ್ಚೆತ್ತುಕೊಂಡೀತಾ? ಕಾನೂನು ಮಂತ್ರಿ ಎಸ್.ಸುರೇಶ್‌ಕುಮಾರ್ ಗಮನಹರಿಸುವರಾ? ನೋಟರಿ ಹುದ್ದೆಯ ಪಾವಿತ್ರ್ಯ-ಘನತೆ ಕಾಪಾಡೀತಾ? ಹಾಗಂತ ಜನ ಅಲವತ್ತುಕೊಳ್ಳುತ್ತಿದ್ದಾರೆ.

• ನಹುಶ

ದದ್ದಾಪುರಿಯ ದಗಲ್ಬಾಜಿ ವೃತ್ತಾಂತ

ರಾಬರ್ಟ್ ದದ್ದಾಪುರಿಯ ಹಗಲು ದರೋಡೆಗಳ ಪುರಾಣ ಹೇಳಿ ಮುಗಿಯುವಂಥಾದ್ದಲ್ಲ. ಈತ ಮಾಡಿದ ದಂಧೆ-ದಗಲ್ಬಾಜಿಗಳಿಗಂತೂ ಲೆಕ್ಕವೇ ಇಲ್ಲ. ಇದೆಲ್ಲವನ್ನು ದಕ್ಕಿಸಿಕೊಳ್ಳುವ ಸಲುವಾಗಿಯೇ ಈತ ಕಂಡುಕೊಂಡಿದ್ದು ರಾಜಕೀಯದ ಶಖ್ಯ. ಈ ಭಾಗದ ರಾಜಕೀಯ ನೇತಾರರನೇಕರು ದದ್ದಾಪುರಿಯಂಥ ಘಟಿಂಗರ ಬೆಂಬಲಕ್ಕೆ ಕಾದು ಕೂತಿದ್ದ ಪರಿಣಾಮವೆಂಬಂತೆ ಇಡೀ ವ್ಯವಸ್ಥೆ ರಾಡಿಯೇಳುವಂತಾಯಿತು. ದದ್ದಾಪುರಿ ಮೊದಲು ರಾಜಕೀಯಕ್ಕೆ ಅಟಕಾಯಿಸಿಕೊಂಡಿದ್ದು ಎಸ್.ಆರ್. ಮೋರೆಯ ಮೂಲಕ. ಈತನ ಅನಾಹುತಕಾರಿ ಕೆಲಸಗಳು ತನಗೇ ಸುತ್ತಿಕೊಳ್ಳೋ ಭಯದಿಂದ ಮೋರೆ ಕೆಲವೇ ದಿನಗಳಲ್ಲಿ ಈತನ್ನನ್ನು ಹೊರಗಟ್ಟಿದ್ದರು.

ಹಾಗೆ ಎಗರಿಬಿದ್ದವನು ಅಪ್ಪಿಕೊಂಡಿದ್ದು ಮಾಜಿ ಶಾಸಕ ವಿನಯ ಕುಲಕರ್ಣಿಯನ್ನು. ಈತನಿಂದಲೂ ಗೂಸಾ ತಿಂದ ದದ್ದಾಪುರಿ ಅಂತಿಮವಾಗಿ ಡಿಕೆ ಶಿವಕುಮಾರನ ತೆಕ್ಕೆಗೆ ಬಿದ್ದ. ಅಲ್ಲಿಂದೀಚೆಗೆ ಈತನ ಹಾರಾಟಕ್ಕೆ ಯಾವುದೇ ವಿಘ್ನವಿರಲಿಲ್ಲ.

ದದ್ದಾಪುರಿ ಎಂಥಾ ವಂಚಕ, ದರೋಡೆಕೋರನೆಂಬುದಕ್ಕೆ ಪಕ್ಕಾ ಸ್ಯಾಂಪಲ್ ಒಂದು ಇಲ್ಲಿದೆ. ಈ ಹಿಂದೆ ಕಾಂಗ್ರೆಸ್ ಸರ್ಕಾರವಿದ್ದಾಗ ಡಾ. ಶೂರ್ಪಾಲಿ ಎಂಬಾತನನ್ನು ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಅಧ್ಯಕ್ಷನನ್ನಾಗಿ ನೇಮಿಸಲಾಗಿತ್ತು. ರಾಬರ್ಟ್ ಮತ್ತವನ ಗ್ಯಾಂಗು ಸಿಬಿಐ ಅಧಿಕಾರಿಗಳ ಸೋಗಿನಲ್ಲಿ ಶೂರ್ಪಾಲಿ ಮನೆಗೆ ದಾಂಗುಡಿಯಿಟ್ಟಿತ್ತು. ಇನ್ನೇನು ದರೋಡೆಯೇ ನಡೆದು ಹೋಗುತ್ತಿತ್ತೇನೋ, ಆದರೆ ಶೂರ್ಪಾಲಿ ಸಕಾಲಕ್ಕೆ ದೂರು ನೀಡಿದ್ದರಿಂದಾಗಿ ಪೊಲೀಸರು ಬಂದು ರಾಬರ್ಟ್‌ನನ್ನು ಜೈಲಿಗೆ ಗದುಮಿದ್ದರು. ಇನ್ನುಳಿದಂತೆ ಈ ಸೀಮೆಯ ಸಕಲ ದಂಧೆಕೋರರಿಗೂ ಈತನೇ ಗುರು. ಗದಗದ ಕುಖ್ಯಾತ ದಂಧೆಕೋರ ಚೀಟರ್ ಮೋನ್ಯಾ ಕೂಡಾ ಇವನ ಶಿಷ್ಯಕೋಟಿ ಯಲ್ಲೊಬ್ಬ. ಇಂಥವನಿಗೆ ಕೆಪಿಸಿಸಿ ಸದಸ್ಯ ಸ್ಥಾನ ಧಾರೆಯೆರೆದ ಕಾಂಗ್ರೆಸ್ ನಾಯಕರಿಗೆ ಏನನ್ನಬೇಕು?

ಕೇಸು ಜಡಿಯಯಿತು. ಈ ವಿಚಾರ ತಿಳಿಯುತ್ತಲೇ ಕಳ್ಳರ ಪಡೆ ಏಕಾಏಕಿ ಎಸ್ಕೇಪಾಯಿತಾದರೂ ಪತ್ರಕರ್ತರಿಗೂ ವಿಚಾರ ತಿಳಿದ್ದರಿಂದ ದದ್ದಾಪುರಿ ಹಾಗೂ ಹೇಮಂತ ಶರಣಾದರು. ಜೊತೆಗೆ ಪಡೆದ ಎರಡೂವರೆ ಲಕ್ಷ ರೂಪಾಯಿಗಳನ್ನೂ ಪೊಲೀಸರಿಗೊಪ್ಪಿಸಿದರು. ಮಾಲುಸಮೇತ ಸಿಕ್ಕಿಬಿದ್ದಿರುವುದರಿಂದ ಹೋರಾಟದ ಮುಖವಾಡ ಹೊತ್ತ ಹೈಟೆ ಸಂಚಕರಿಗೆ ಜೈಲು ಖಾಯಮ್ಮಾದಂತಿದೆ.

ಈ ರೀತಿ ಬೆತ್ತಲಾಗಿರುವ ದದ್ದಾಪುರಿ ಹಾಗೂ ಹೇಮಂತ್ ಲಾಗಾಯ್ತಿನಿಂದಲೂ ಕಾಂಗ್ರೆಸ್ ಹೆಸರಲ್ಲೇ ದಂಧೆ ನಡೆಸುತ್ತಾ ಬಂದಿದ್ದಾರೆ. ಇವರಿಬ್ಬರೂ ರಾಜ್ಯಮಟ್ಟದ ನಾಯಕರೊಂದಿಗೆ ನಿಕಟಸಂಪರ್ಕ ಹೊಂದಿರುವುದರಿಂದ ಇವರ ವಿರುದ್ಧ ಸೊಲ್ಲೆತ್ತಲು ಎಲ್ಲರೂ ಹಿಂಜರಿಯುತ್ತಿದ್ದರು. ಇಂಥವರನ್ನು ಪಕ್ಷದಲ್ಲಿಟ್ಟುಕೊಂಡ ನಾಯಕರ ಬಗ್ಗೆ ಖುದ್ದು ಕಾರ್ಯಕರ್ತರಲ್ಲೇ ಆಕ್ರೋಶಗಳಿದ್ದವು. ಆದರೂ ಕೂಡಾ ಈ ಹೈಟೆಕ್ ವಂಚಕರನ್ನು ಬಗಲಲ್ಲಿಟ್ಟುಕೊಂಡ ಪರಿಣಾಮ ಕಾಂಗ್ರೆಸ್‌ನ ಮಾನ ಧಾರವಾಡ ನಗರದ ಗಟಾರದ ಲೆವೆಲ್ಲಿಗಿಳಿದಿದೆ.

ಕಾಂಗ್ರೆಸ್‌ನ ಅವಿವೇಕಿಗಳಿಗೆ ಬುದ್ಧಿ ಬರುವುದು ಯಾವಾಗ?


• ಹುಬ್ಬಳ್ಳಿಯಾಂವ



ಶಿವಮೊಗ್ಗ ಅಭಯಾರಣ್ಯದ ಎದೆ ಮೇಲೆ ಯಡಿಯೂರಪ್ಪನ ಕಾಲೇಜು!

ಸರ್ಕಾರ ಮೂರು ವರ್ಷ ಸವೆಸಿದ ಸಂಭ್ರಮದ ಅಲೆಯಲ್ಲಿ ಇದುವರೆಗೆ ಮಾಡಿದ ವ್ಯಭಿಚಾರಗಳನ್ನೆಲ್ಲ ತೇಲಿ ಬಿಡಲು ಸನ್ಮಾನ್ಯ ಯಡಿಯೂರಪ್ಪ ಹರಸಾಹಸ ಪಡುತ್ತಿದ್ದಾರೆ. ಬಿಜೆಪಿ ಕ್ಯಾಬಿನೆಟ್ಟು ತಮ್ಮ ಸಾಧನೆಯನ್ನು ತಾವೇ ಮುದ್ದಾಡುತ್ತಾ, ತಂತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುತ್ತಿದೆ. ಇತ್ತ ಬಿಜೆಪಿಯ ಬಿಲದಿಂದ ಹಗರಣದ ಹೆಗ್ಗಣಗಳು ಸರಣಿಯೋಪಾದಿಯಲ್ಲಿ ಹೊರಬರುತ್ತಿವೆ. ಇಂಥಾ ಬಹುತೇಕ ಭಾನಗಡಿಗಳಲ್ಲಿ ಯಡ್ಡಿಯೇ ನಾಯಕ ಕಂ ಖಳನಾಯಕನೆಂಬುದು ವಿಶೇಷ ವಾಸ್ತವ.

ಸದ್ಯ ಪತ್ರಿಕೆಗೆ ಸಿಕ್ಕಿರುವ ದಂಡಿದಂಡಿ ಮಾಹಿತಿ ಯಡ್ಡಿಯ ಭೂದಾಹವನ್ನು ಮತ್ತೊಮ್ಮೆ ಜಾಹೀರುಪಡಿಸುವಂತಿದೆ. ತನ್ನ ವಿರುದ್ಧ ಭೂಹಗರಣ ಬುಸುಗುಟ್ಟಿದಾಗೆಲ್ಲಾ ಮಹಾ ಅಮಾಯಕನಂತೆ ಪೋಸು ಕೊಡುವ ಯಡ್ಡಿ ವಿರುದ್ಧ ಸರಿಯಾದ್ದೊಂದು ತನಿಖೆ ನಡೆದರೆ ಆತ ಪರಪ್ಪನ ಅಗ್ರಹಾರ ಸೇರಲೇಬೇಕಾದಂಥ ಸ್ಪಷ್ಟ ಸೂಚನೆಗಳಿರುವ ಹಗರಣವಿದು. ಸಿಕ್ಕಸಿಕ್ಕ ಭೂಮಿಯನ್ನು ಡಿನೋಟಿಫಿಕೇಷನ್ ಮೂಲಕ ಮಕ್ಕಳು ಮರಿಗೆ ಹಂಚಿದ್ದ ಯಡ್ಡಿ ತನ್ನ ಕುಟುಂಬ ಪ್ರೇಮಕ್ಕೆ ಅಭಯಾರಣ್ಯವನ್ನೇ ನುಂಗಿ ವನ್ಯಜೀವಿಗಳ ನೆಲೆಯನ್ನೂ ನುಂಗಿದ ಮೃಗೀಯ ಹಗರಣವಿದು.


ವಿಜಯೇಂದ್ರ

ಶಿವಮೊಗ್ಗದಿಂದ ಆರೇಳು ಕಿಲೋಮೀಟರ್ ದೂರದಲ್ಲಿ ಬಿಎಚ್ ರಸ್ತೆಯ ಬಾಜಿನಲ್ಲೇ ತಲೆ ಎತ್ತಿರುವ ಪಿಇಎಸ್ ಶಿಕ್ಷಣ ಸಂಸ್ಥೆ ಯಡ್ಡಿ ಫ್ಯಾಮಿಲಿಯದ್ದೆಂಬ ವಿಚಾರ ಎಲ್ಲರಿಗೂ ಗೊತ್ತಿರುವಂಥಾದ್ದು. ಆದರಿದು ಶೆಟ್ಟಿಹಳ್ಳಿ ಅಭಯಾರಣ್ಯದ ಎದೆಮೇಲೇ ನಿರ್ಮಾಣವಾಗಿದೆಯೆಂಬ ಸತ್ಯವನ್ನು ವಕೀಲ ಶೇಷಾದ್ರಿ ದಾಖಲೆ ಸಮೇತ ಜನರ ಮುಂದಿಟ್ಟಿದ್ದಾರೆ.

ಈ ಒಟ್ಟಾರೆ ಹಗರಣದ ಮೂಲವಿರುವುದು ಪ್ರೇರಣಾ ಎಜುಕೇಷನ್ ಟ್ರಸ್ಟ್‌ನಡಿಯಲ್ಲಿ. 2006 ರಲ್ಲಿ ಯಡಿಯೂರಪ್ಪ ಉಪಮುಖ್ಯ ಮಂತ್ರಿಯಾದರಲ್ಲಾ? ಆ ಸಂದರ್ಭದಲ್ಲಿ ಆತ ಆಡಳಿತ ಆರಂಭಿಸಿದ್ದೇ ಪ್ರೇರಣಾ ಟ್ರಸ್ಟ್‌ನ ಹೆಸರು ನೋಂದಾಯಿಸುವ ಮೂಲಕ. ತದನಂತರ ಇದಕ್ಕೆ ದೊರೆಸ್ವಾಮಿ, ಜವಾಹರೇ, ಜೈಶಂಕರ್ ಹಾಗೂ ಬಿ.ವೈ. ವಿಜಯೇಂದ್ರನನ್ನು ಟ್ರಸ್ಟಿಗಳನ್ನಾಗಿ ಪ್ರತಿಷ್ಠಾಪಿಸಿದರು. ಶಿಕ್ಷಣ ಕ್ಷೇತ್ರದಲ್ಲಿ ಭಯಂಕರ ಸೇವೆ ಸಲ್ಲಿಸುವ ಉಮೇದು ಪ್ರಕಟಿಸಿದ ಯಡ್ಡಿ ಈ ಟ್ರಸ್ಟ್ ಹೆಸರಲ್ಲಿ ಭೂಮಿ ನುಂಗುವ ಕೆಲಸಕ್ಕೆ ವಿದ್ಯುಕ್ತ ಚಾಲನೆ ನೀಡಿದರು.


ದೊರೆಸ್ವಾಮಿ

ಇದರ ಬೆನ್ನಲ್ಲೇ ಭೂಮಿ ಖರೀದಿ, ಪರಿವರ್ತನೆ ಹಾಗೂ ಕಟ್ಟಡ ನಿರ್ಮಾಣ ಕಾರ್ಯ ಸಮರೋಪಾದಿಯಲ್ಲಿ ನಡೆಯಿತು. ಮೊದಲ ಹಂತವಾಗಿ ಶಿವಮೊಗ್ಗದ ಗುಡ್ಡದ ಅರೇಕೆರೆ ಹಾಗೂ ಶ್ರೀರಾಂಪುರ ಗ್ರಾಮಗಳಲ್ಲಿ 10-26 ಗುಂಟೆ ಜಮೀನು ಖರೀದಿಸುವ ಶಾಸ್ತ್ರ ನಡೆಯಿತು. ಈ ಸಂದರ್ಭದಲ್ಲಿ ಶಿವಮೊಗ್ಗ ಜಿಲ್ಲಾಧಿಕಾರಿಯಾಗಿದ್ದ ಟಿ.ಕೆ. ಅನಿಲ್‌ಕುಮಾರ್ ಸಕಲ ನಿಯತ್ತುಗಳನ್ನೂ ಯಡ್ಡಿ ಫ್ಯಾಮಿಲಿಗೆ ಅಡ್ಡಇಟ್ಟಿದ್ದ ಆಸಾಮಿ. ಈತನನ್ನು ಬಳಸಿಕೊಂಡು ಕಾನೂನುಬಾಹಿರವಾಗಿ ಭೂಕಂದಾಯ ಕಾಯ್ದೆಯ ಮಿತಿಮೀರಿ, ಸರ್ಕಾರದ ಅನುಮತಿ ಇಲ್ಲದೆ ಭೂಪರಿವರ್ತನಾ ಆದೇಶ ಪಡೆದುಕೊಂಡರು. ಅಸಲಿಗೆ ಆಗ ಪಿಇಎಸ್ ಶಿಕ್ಷಣ ಸಂಸ್ಥೆ ಸರ್ಕಾರದ ವತಿಯಿಂದ ಯಾವುದೇ ಅಂಗೀಕಾರ ಪಡೆದಿರಲಿಲ್ಲ. ಆದರೂ 'ಅಂಗೀಕೃತ ವಿದ್ಯಾಸಂಸ್ಥೆ' ಅಂತ ಬಿಂಬಿಸಲಾಯಿತು. ಇದರ ಬಲದಿಂದಲೇ ಭೂಖರೀದಿ ಅನುಮತಿ ಮತ್ತು ಅಲಿನೇಷನ್ ಪರ್ಮಿಷನ್‌ಗಳನ್ನೂ ಪಡೆಯಲಾಯ್ತು. ಪವಾಡವೆಂದರೆ 2006 ರ ಆಗಸ್ಟ್‌ನಲ್ಲಿ ಅಸ್ತಿತ್ವಕ್ಕೆ ಬಂದ ಪಿಇಎಸ್ ಪ್ಲಾನ್‌ಗೆ ಆರೇ ಆರು ತಿಂಗಳಲ್ಲಿ ಜಮೀನು ಖರೀದಿ ಮುಗಿಸಿ, ಸಕಲ ಪರವಾನಗಿಗಳನ್ನೂ ಪಡೆದು ನಾಲ್ಕೇ ನಾಲ್ಕು ತಿಂಗಳಲ್ಲಿ ಕಾಲೇಜು ಪ್ರಾರಂಭವಾಗಿತ್ತು!

ಇದರ ಜೊತೆಜೊತೆಗೇ ಇನ್ನೊಂದು ಸುತ್ತಿನ ಭೂಕಬಳಿಕೆಗೆ ಚಾಲನೆ ಕೊಟ್ಟ ಯಡ್ಡಿ ಗುಡ್ಡದ ಅರೇಕೆರೆ ಹಾಗೂ ಶ್ರೀರಾಂಪುರ ಗ್ರಾಮದಲ್ಲೇ 27 ಎಕರೆ 26 ಗುಂಟೆ ಖರೀದಿಸಿ, 38 ಎಕರೆ 12 ಗುಂಟೆ ಪ್ಲಾಟನ್ನೂ ವಶಪಡಿಸಿಕೊಂಡು ಅಲಿನೇಷನ್‌ಗೆ ಅರ್ಜಿ ಗುಜರಾಯಿಸಿದರು. ಕರ್ನಾಟಕ ಭೂ ಸುಧಾರಣಾ ಕಾಯ್ದೆ 1090 ರನ್ವಯ ಯಾವುದೇ ವಿದ್ಯಾಸಂಸ್ಥೆ 20 ಯೂನಿಟ್ ಜಮೀನು ಹೊಂದಬಹುದು. ಅದರಲ್ಲಿ 4 ಯೂನಿಟ್ ಜಮೀನನ್ನು ವ್ಯವಸಾಯೇತರ ಉದ್ದೇಶಕ್ಕೆ ಪರಿವರ್ತಿಸಿಕೊಳ್ಳಬಹುದು. ಆದರೆ ಯಡ್ಡಿ ಇಂಥಾ ಯಾವ ಕಾನೂನುಗಳಿಗೂ ಕ್ಯಾರೇ ಅನ್ನಲಿಲ್ಲ. ಆದರಿಂದಾಗಿಯೇ ಅಖಂಡ 38 ಎಕರೆ 12 ಗುಂಟೆ ಜಮೀನಿನ 'ಭೂಪರಿವರ್ತನಾ ಯಾಗ ಸಾಂಗವಾಗಿ ನೆರವೇರಿತು. ಶಿವಮೊಗ್ಗ ನಗರ ಸಭೆಯಿಂದಲೂ ಪ್ರೇರಣಾ ಟ್ರಸ್ಟ್‌ಗೆ ಸೌಲಭ್ಯಗಳ ಮಹಾಪೂರವೇ ಧುಮ್ಮಿಕ್ಕಿ ಹರಿಯಿತು.


ಕಾನೂನು ಕಟ್ಟಳೆಗಳ ಪ್ರಕಾರ ನೋಡಹೋದರೆ ಪಿಇಎಸ್ ಅಕ್ರಮಗಳಿಗೇ ಹುಟ್ಟಿದ ಸಂಸ್ಥೆಯೆಂಬುದು ಸಾಬೀತಾಗುತ್ತದೆ. ಇದಕ್ಕೆ ಇನ್‌ಕಂ ಟ್ಯಾಕ್ಸ್ ಸೆಕ್ಷನ್ 80 ರಡಿಯಲ್ಲಿ ತಮ್ಮದು ದತ್ತಿ ಸಂಸ್ಥೆಯೆಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಲಾಗಿದೆ. ಈ ಮೂಲಕ ಭರಪೂರ ರಿಯಾಯಿತಿ ಪಡೆದು ಖಾಸಗಿ ಗಣಿ ಕಂಪೆನಿಯಿಂದ ಅಖಂಡ 20 ಕೋಟಿ ದೇಣಿಗೆ ಪಡೆದ ಹಗರಣ ಈಗಲೇ ನ್ಯಾಯಾಲಯದಲ್ಲಿದೆ. ಇನ್ನುಳಿದಂತೆ ಭೂಸುಧಾರಣಾ ಕಾಯ್ದೆಯನ್ವಯ ಎರಡು ಲಕ್ಷಕ್ಕಿಂತ ಹೆಚ್ಚಿನ ಆದಾಯ ಹೊಂದಿರುವವರು ವ್ಯವಸಾಯ ಭೂಮಿ ಖರೀದಿಸುವಂತಿಲ್ಲ, ಆದರೆ ಸದರಿ ಟ್ರಸ್ಟಿನ ಎಲ್ಲಾ ಟ್ರಸ್ಟಿಗಳಿಗೂ 2 ಲಕ್ಷಕ್ಕಿಂತ ಅಧಿಕ ಆದಾಯವಿದೆ. ಈ ವಿಚಾರ ತಿಳಿದ ಮೇಲೂ ಖರೀದಿ ವ್ಯವಹಾರ ನಡೆದಿದೆಯೆಂದರೆ ಯಡ್ಡಿಯ ಭೂದಾಹದ ಕರಾಮತ್ತು ಎಂಥಾದ್ದಿರಬಹುದೋ ಯೋಚಿಸಿ. ಒಟ್ಟಾರೆಯಾಗಿ ಇದು ಒಂದಿಡೀ ಅಧಿಕಾರಿ ವರ್ಗವೇ ಯಡ್ಡಿ ಮುಲಾಜಿಗೆ ಬಿದ್ದ ಪರಿಣಾಮವೆಂಬುದು ವಾಸ್ತವ.


ಇಂಥಾ ಸರಣಿ ಅಕ್ರಮಗಳ ನಡುವೆಯೇ ತಲೆ ಎತ್ತಿರುವ ಪಿಇಎಸ್ ಕಾಲೇಜಿನ ಸಕಲ ಆಸ್ತಿಯೂ ಶೆಟ್ಟಿಹಳ್ಳಿ ಅಭಯಾರಣ್ಯ ವ್ಯಾಪ್ತಿಯಲ್ಲಿದೆ! ವನ್ಯಜೀವಿ ಕಾಯ್ದೆ 1972 ರ ಪ್ರಕಾರ ಹೊರಡಿಸಿರುವ ಸರ್ಕಾರದ ಸುತ್ತೋಲೆಯನ್ವಯ ತಲಾಶು ನಡೆಸಿದರೆ ಈ ವಿಚಾರ ಸ್ಪಷ್ಟವಾಗುತ್ತದೆ. ಈ ವಿಚಾರವನ್ನು ಸ್ವತಃ ವನ್ಯಜೀವಿ ಸಂರಕ್ಷಣಾಧಿಕಾರಿಗಳೇ ಲಿಖಿತವಾಗಿ ದೃಢಪಡಿಸಿದ್ದಾರೆ. ವಿಪರ್ಯಾಸವೆಂದರೆ ಶಿವಮೊಗ್ಗ ಅರಣ್ಯ ವಲಯದ ಕನ್ಸರ್ವೇಟರ್ ಬ್ರಿಜೇಶ್ ಕುಮಾರ್ ಹಾಗೂ ವನ್ಯಜೀವಿ ಉಪವಿಭಾಗದ ಉಪ ಸಂರಕ್ಷಣಾಧಿಕಾರಿ ರವಿ ಕುಮಾರ್‌ಗಳು ಮಾತ್ರ ತಮಗೇನೂ ಗೊತ್ತಿಲ್ಲವೆಂಬಂಥ ಮಳ್ಳ ನಗೆ ಸೂಸಹತ್ತಿದ್ದಾರೆ.

ವನ್ಯಜೀವಿ ಅರಣ್ಯ ಪ್ರದೇಶದಲ್ಲಿ ಯಾರೂ ಯಾವ ಕಾರಣಕ್ಕೂ ಅತಿಕ್ರಮಣ ನಡೆಸುವಂತಿಲ್ಲ. ಈ ಆಸ್ತಿಯನ್ನು ಯಾರೂ ಖರೀದಿಸುವಂತಿಲ್ಲ ಹಾಗೂ ಕಾನೂನು ಉಲ್ಲಂಘನೆ ನಡೆದರೆ ನಿರ್ದಾಕ್ಷಿಣ್ಯ ಕ್ರಮ ಜರುಗಿಸುವ, ಅತಿಕ್ರಮಿತ ಆಸ್ತಿ ವಾಪಾಸು ಪಡೆಯುವ ಜವಾಬ್ದಾರಿ ಅರಣ್ಯ ಇಲಾಖೆಯದ್ದು. ಆದರೆ ಪಿಇಎಸ್ ಕಾಲೇಜು ಅಭಯಾರಣ್ಯದ ಎದೆಯಲ್ಲೇ ತಲೆಎತ್ತಿರುವುದು ಕಣ್ಣೆದುರೇ ಇದ್ದರೂ ಕೂಡಾ ಯಾವ ಕ್ರಮವನ್ನೂ ಜರುಗಿಸದಿರುವುದು ಅಧಿಕಾರಿಗಳ ಬಕೀಟು ಬುದ್ಧಿಯ ದ್ಯೋತಕದಂತಿದೆ.

ಇಂಥಾ ಅಕ್ರಮಕ್ಕೆ ಸಹಕರಿಸಿದ ಡಿಸಿ ಅನಿಲ್ ಕುಮಾರ್ ಹಾಗೂ ಪಂಕಜ್ ಕುಮಾರ್ ಪಾಂಡೆ ಇದೀಗಲೇ ಕಾಲುಕಿತ್ತಿದ್ದಾರೆ. ಆದರೆ ಹಾಲಿ ಜಿಲ್ಲಾಧಿಕಾರಿ ಪೊನ್ನುರಾಜ್ ಕೂಡಾ ಅದೇ ಹಾದಿಯಲ್ಲಿ ಮುಂದುವರೆಯುತ್ತಿರುವುದು ನಾಚಿಕೆಗೇಡಿನ ಸಂಗತಿ. ಇವರಿಗೆ ಕನಿಷ್ಠ ಕರ್ತವ್ಯಪ್ರಜ್ಞೆ ಇದ್ದಿದ್ದರೂ ಪಿಇಎಸ್ ಟ್ರಸ್ಟ್‌ಗೆ ನೋಟಿಸು ಜಾರಿ ಮಾಡಬಹುದಿತ್ತು. ಅಲಿನೇಷನ್ ರದ್ದುಪಡಿಸಿ ಭೂ ಸುಧಾರಣಾ ಮತ್ತು ಕಂದಾಯ ಕಾಯ್ದೆಯಡಿ ಕ್ರಮ ಜರುಗಿಸಬಹುದಿತ್ತು. ಆದರೆ ಈ ಮಹಾಶಯರು ಯಡ್ಡಿ ಫ್ಯಾಮಿಲಿ ಶಿವಮೊಗ್ಗದಾದ್ಯಂತ ಮಾಡಿರುವ ಬೇನಾಮಿ ಆಸ್ತಿಗೆ ಅಲಿನೇಷನ್ ಕೊಡುವುದರಲ್ಲಿ ಬ್ಯುಸಿಯಾಗಿ ಹೋಗಿದ್ದಾರೆ!


ಪೊನ್ನುರಾಜ್


ಪಂಕಜ್



ಅನಿಲ್

ಎತ್ತಲಿಂದ ನೋಡಿದರೂ ಯಡ್ಡಿ ಟ್ರಸ್ಟಿನ ಪಿಇಎಸ್ ಕಾಲೇಜು ಶೆಟ್ಟಿಹಳ್ಳಿ ಅಭಯಾರಣ್ಯ ವ್ಯಾಪ್ತಿಯಲ್ಲಿರುವುದು ಸ್ಪಷ್ಟ ವಿಚಾರ. ಆದರೂ ಕೂಡ ಈ ಬಗ್ಗೆ ಯಾವುದೇ ರೀತಿಯ ವಿರೋಧ ವ್ಯಕ್ತವಾಗದಿರುವುದು ಯಡಿಯೂರಪ್ಪನ ಸರ್ವಾಧಿಕಾರದ ಪರಿಣಾಮವಲ್ಲದೆ ಬೇರೇನೂ ಅಲ್ಲ.

ಈ ಪರಿ ಸಿಕ್ಕಸಿಕ್ಕ ಜಮೀನುಗಳನ್ನು ಅಪ್ಪನ ಆಸ್ತಿಯೆಂಬಂತೆ ಅನುಭವಿಸುತ್ತಿರುವ ಯಡಿಯೂರಪ್ಪ ಮತ್ತವರ ಕುಟುಂಬಕ್ಕರಿಗೆ ಎಂಥಾ ಶಿಕ್ಷೆಯಾದರೂ ಕಡಿಮೆಯೇ.

ಇಸ್ಕಾನ್ ವಂಚಕ ಮಧುಪಂಡಿತ

2000 ಕೋಟಿಯ ದೈವ ದರೋಡೆ!



ಮೊನ್ನೆ ಅಂದರೆ ಜೂನ್ 3 ರಂದು ಕೋರ್ಟ್ ಆದೇಶದ ಮೇರೆಗೆ ತಪಾಸಣೆಗೆಂದು ಬಂದ ಮುಂಬಯಿ ಇಸ್ಕಾನ್‌ನ ಪದಾಧಿಕಾರಿಗಳನ್ನು ದೇಗುಲದ ಹೆಬ್ಬಾಗಿಲಲ್ಲೇ ರೌಡಿಗಳನ್ನು ಬಿಟ್ಟು ಹೊಡೆಸಿದ ಮಧುಪಂಡಿತನ ಕೃಷ್ಣಭಕ್ತಿಗೆ ಇದು ನಿದರ್ಶನವಷ್ಟೆ. ನಿರ್ಮಿಸಿದ್ದು ದೇವಾಲಯ ತಾನೆ? ಪೂಜೆಗೆ ಯಾರು ಬಂದರೇನು? ದೈವಭಕ್ತಿಯೇ ಪ್ರಾಮಾಣಿಕವಾಗಿದ್ದರೆ ತಾನೇ ದೇವಸ್ಥಾನವನ್ನು ಆಳಬೇಕೆಂಬ ದುರಾಶೆಯೇಕೆ? ಹೆಸರಿನ ಕೊನೆಯಲ್ಲಿ 'ದಾಸ' ಎಂದಿಟ್ಟುಕೊಂಡಿದ್ದರೂ ಸಂಪತ್ತಿನ ಮೋಹವೇಕೆ? ರಾಜಾಜಿನಗರದ ಇಸ್ಕಾನ್ ದೇವಾಲಯದ ಒಡೆತನ ತನಗೇ ಸೇರಬೇಕೆಂಬ ಲೋಭಕ್ಕೆ ಬಿದ್ದು ಏಕೆ ಕೃಷ್ಣಭಕ್ತರ ಮೇಲೆ ರೌಡಿಗಳನ್ನು ಛೂಬಿಡುತ್ತಾನೆ? ಸದ್ಯ ಇಸ್ಕಾನ್ ದೇಗುಲದ ಒಡೆತನದ ಪ್ರಶ್ನೆ, ಹೈಕೋರ್ಟ್ ತೀರ್ಪು, ಈ ಸಂಬಂಧ ಕೃಷ್ಣಭಕ್ತರ ಮೇಲೆ ನಡೆದ ರೌಡಿದಾಳಿಗಳ ಹಿಂದಿರುವುದು ಕೂಡ ಇದೇ ಪ್ರಶ್ನೆ.

• ರಾ. ಸೋಮನಾಥ್

ಮೊನ್ನೆ ಅಂದರೆ ಜೂನ್ 3 ರಂದು ಕೋರ್ಟ್ ಆದೇಶದ ಮೇರೆಗೆ ತಪಾಸಣೆಗೆಂದು ಬಂದ ಮುಂಬಯಿ ಇಸ್ಕಾನ್‌ನ ಪದಾಧಿಕಾರಿಗಳನ್ನು ದೇಗುಲದ ಹೆಬ್ಬಾಗಿಲಲ್ಲೇ ರೌಡಿಗಳನ್ನು ಬಿಟ್ಟು ಹೊಡೆಸಿದ ಮಧುಪಂಡಿತನ ಕೃಷ್ಣಭಕ್ತಿಗೆ ಇದು ನಿದರ್ಶನವಷ್ಟೆ. ನಿರ್ಮಿಸಿದ್ದು ದೇವಾಲಯ ತಾನೆ? ಪೂಜೆಗೆ ಯಾರು ಬಂದರೇನು? ದೈವಭಕ್ತಿಯೇ ಪ್ರಾಮಾಣಿಕವಾಗಿದ್ದರೆ ತಾನೇ ದೇವಸ್ಥಾನವನ್ನು ಆಳಬೇಕೆಂಬ ದುರಾಶೆಯೇಕೆ? ಹೆಸರಿನ ಕೊನೆಯಲ್ಲಿ 'ದಾಸ' ಎಂದಿಟ್ಟುಕೊಂಡಿದ್ದರೂ ಸಂಪತ್ತಿನ ಮೋಹವೇಕೆ? ರಾಜಾಜಿನಗರದ ಇಸ್ಕಾನ್ ದೇವಾಲಯದ ಒಡೆತನ ತನಗೇ ಸೇರಬೇಕೆಂಬ ಲೋಭಕ್ಕೆ ಬಿದ್ದು ಏಕೆ ಕೃಷ್ಣಭಕ್ತರ ಮೇಲೆ ರೌಡಿಗಳನ್ನು ಛೂಬಿಡುತ್ತಾನೆ? ಕೃಷ್ಣಭಕ್ತಿಗೂ ಐಷಾರಾಮಿ ಅಪಾರ್ಟ್‌ಮೆಂಟಿಗೂ, ದೇವರ ಸೇವೆಗೂ, ಹೈಟೆಕ್ ರೆಸ್ಟೋರೆಂಟ್ ನಡೆಸುವುದಕ್ಕೂ, ಜಪತಪಕ್ಕೂ, ರಿಯಲ್ ಎಸ್ಟೇಟ್ ದಂಧೆಗೂ, ಪೂಜೆ ಪುನಸ್ಕಾರಕ್ಕೂ, ತರಕಾರಿ ಮಳಿಗೆಗೂ ಹೇಗೆ ಪರಸ್ಪರ ಸಂಬಂಧವಿಲ್ಲವೋ ಹಾಗೆ ಮಧುಪಂಡಿತನ ಸೋಗಿಗೂ ದೇವರಿಗೂ ಸಂಬಂಧವಿಲ್ಲ. ಸದ್ಯ ಇಸ್ಕಾನ್ ದೇಗುಲದ ಒಡೆತನದ ಪ್ರಶ್ನೆ, ಹೈಕೋರ್ಟ್ ತೀರ್ಪು, ಈ ಸಂಬಂಧ ಕೃಷ್ಣಭಕ್ತರ ಮೇಲೆ ನಡೆದ ರೌಡಿದಾಳಿಗಳ ಹಿಂದಿರುವುದು ಕೂಡ ಇದೇ ಪ್ರಶ್ನೆ.

ಇಸ್ಕಾನ್ ವಂಚಕ ಮಧುಪಂಡಿತದಾಸನ ದುರಾಚಾರದ ವಿರುದ್ಧ ಪತ್ರಿಕೆ ಬರೆಯುತ್ತಿರುವುದು ಇದೇ ಮೊದಲೇನಲ್ಲ. ಅಕ್ಷಯ ಪಾತ್ರೆಯ ಹೆಸರಲ್ಲಿ ಶಾಲಾ ಮಕ್ಕಳ ಅಕ್ಕಿ ಕದ್ದ, ಅದನ್ನು ಕಳ್ಳ ಮಾರುಕಟ್ಟೆಯಲ್ಲಿ ಮಾರಲು ಹೋಗಿ ಸಿಕ್ಕಿಬಿದ್ದ. 'ಇಸ್ಕಾನ್ ಅಕ್ಕಿಕಳ್ಳರು' ಎಂದು ಬರೆದದ್ದನ್ನೇ ಛಾನಗಡಿ ಮಾಡಿ ಪತ್ರಿಕೆ ವಿರುದ್ಧ ಕೇಸು ಹಾಕುತ್ತೇನೆಂದು ಬೊಬ್ಬೆ ಹೊಡೆದ. ಈಗ ಈತನ ಬಣ್ಣ ಬಯಲಾಗಿದೆ. ರಾಜ್ಯ

ನಕಲಿ ಛಾಪಾ ವಂಚಕ ತೆಲಗಿ ಸರ್ಕಾರಿ ಬೊಕ್ಕಸಕ್ಕೇ ಕನ್ನವಿಟ್ಟ. ಬಳ್ಳಾರಿ ರೆಡ್ಡಿಗಳು ಭೂಮಿ ತಾಯನ್ನೇ ಅಗೆದು ಬಗೆದರು. ಕೆಐಡಿಬಿಯನ್ನೇ ದೋಚಿದ ಕಟ್ಟಾ, ಬಿಡಿಎಯನ್ನೇ ಕೊಳ್ಳೇ ಹೊಡೆದ ಯಡ್ಡಿ, ಬ್ಯಾಂಕನ್ನೇ ಲೂಟಿಗೈದವರು, ಬಿಬಿಎಂಪಿಗೇ ಕನ್ನ ಕೊರೆದವರು, ಕಾಡುಗಳ್ಳರು, ನೆಲಗಳ್ಳರು; ಇತ್ಯಾದಿ ವೈಟ್ ಕಾಲರ್ ದರೋಡೆಕೋರರ ಪೈಕಿ ಈತನೇ ಬೇರೆ ಈತನ ಸ್ಟೈಲೇ ಬೇರೆ.

ಅವನು ಮಧು ಪಂಡಿತದಾಸ!

ಕೃಷ್ಣಭಕ್ತಿಯೇ ಈತನ ಆಯುಧ. ರಾಜಾಜಿನಗರದ ಇಸ್ಕಾನ್ ದೇವಾಲಯವೆಂಬುದು ಈತನ ಪಾಲಿಗೆ ಚಿನ್ನದ ಗಣಿ. ಜುಟ್ಟು ಬಿಟ್ಟು ಧೋತಿ ಉಟ್ಟ ಹೈಟೆಕ್ ದಾಸರೇ ಈತನ ಕರ್ಮಚಾರಿಗಳು. ಬಾಯಲ್ಲಿ ಕೃಷ್ಣಜಪ ತಲೆಯಲ್ಲಿ ನಾನಾ ಪಾಪ. ಮೈತುಂಬ ದುಡ್ಡು ದೋಚುವ ಕಪಟ ತಂತ್ರ; ಹೀಗೆ ಕೇವಲ ಹನ್ನೆರಡು ವರ್ಷದಲ್ಲಿ ಈತ ಅದೆಷ್ಟು ಮೊತ್ತದ ಸಂಪತ್ತು ಗಳಿಸಲು ಸಾಧ್ಯ?

ಯಾರೂ ನಂಬಲಿಕ್ಕಿಲ್ಲ; ಇಲ್ಲಿಗೆ 15 ವರ್ಷದ ಹಿಂದೆ ಕೇವಲ ಮೂರು ಜೊತೆ ಬಟ್ಟೆ, ಒಂದು ಜೋಡಿ ಚಪ್ಪಲಿ, ಹಳೆಯದೊಂದು ಸೂಟ್‌ಕೇಸ್ ಮತ್ತು ಕೈಲೊಂದು ಜಪಮಾಲೆ ಹಿಡಿದು ಬೆಂಗಳೂರಿಗೆ ಕಾಲಿಟ್ಟ ಮಧುಪಂಡಿತದಾಸ ಇವತ್ತು ಒಂದೂವರೆ ಸಾವಿರ ಕೋಟಿಯ ಒಡೆಯ!


ಮಿಕ್ಕೆಲ್ಲ ವಂಚಕರು ಕದ್ದು ಪೊಲೀಸರಿಗೋ ಲೋಕಾಯುಕ್ತಕ್ಕೋ ಸಿಕ್ಕಿ ಬೀಳುತ್ತಾರೆ. ಮಾಧ್ಯಮಗಳು ಇಂಥವರನ್ನು ಖದೀಮರೆಂದೇ ಪರಿಗಣಿಸಿವೆ. ಸಮಾಜದ ಕಣ್ಣಿಗೆ ಇವರೆಲ್ಲ ಯಾವತ್ತಿದ್ದರೂ ಅಪರಾಧಿಗಳೆ. ಆದರೆ ಮಧುಪಂಡಿತ ಹಾಗಲ್ಲ. ಇವತ್ತಿಗೂ ಆತ ಕೃಷ್ಣಭಕ್ತ, ರಾಜಾಜಿನಗರದ ಇಸ್ಕಾನ್ ದೇಗುಲದ ಅಧ್ಯಕ್ಷ. ಅಕ್ಷಯ ಪಾತ್ರಾ ಫೌಂಡೇಷನ್ ಹುಟ್ಟು ಹಾಕಿ ನಾಡಿನ ಸಹಸ್ರಾರು ಶಾಲಾ ಮಕ್ಕಳಿಗೆ ಬಿಸಿಯೂಟ ಬಡಿಸುವ ನಿಷ್ಣಾತ. ಕನಕಪುರ ರಸ್ತೆಯಲ್ಲಿ ಮುಂದೆಂದೋ ತಲೆ ಎತ್ತಲಿರುವ ಕೃಷ್ಣಲೀಲಾ ಪಾರ್ಕ್‌ಗೆ ಈತನೇ ಸೃಷ್ಟಿಕರ್ತ. ಇಸ್ಕಾನ್ ದೇಗುಲವನ್ನೇ ಮುಂದಿಟ್ಟುಕೊಂಡು ಕಾವೇರಿ ನದಿ ತೀರದಲ್ಲಿ ಆತ ಸಾವಯುವ ಕೃಷಿಗೆ ಕೈಯಿಟ್ಟಿದ್ದಾನೆ. ಅಲ್ಲಿ ಬೆಳೆದ ತರಕಾರಿ ಅತ್ಯಂತ ಪವಿತ್ರವಾದದ್ದು. ಏಕೆಂದರೆ ಅದೇ ಸಾವಯುವ ತರಕಾರಿ ತಂದು ರಾಜಾಜಿನಗರದ ಇಸ್ಕಾನ್ ದೇಗುಲದಲ್ಲಿ



ಶ್ರೀಕೃಷ್ಣ ಪರಮಾತ್ಮನಿಗೆ ನೈವೇದ್ಯವಾಗಿ ಬಳಸುತ್ತಾರೆ. ಹೀಗೆ ಕಾವೇರಿ ತೀರದಲ್ಲಿ ಶ್ರೀಕೃಷ್ಣನಿಗೆಂದು ಬೆಳೆದ ಪವಿತ್ರ ಕಾಯಿಪಲ್ಲೆಯನ್ನು ಇಸ್ಕಾನ್ ದೇಗುಲದ ಆವರಣದಲ್ಲೇ ಮಾರಲಾಗುತ್ತದೆ. ಆ ದೇವರ ಹೆಸರಲ್ಲಿ ಬೆಳೆದ ರಾಸಾಯನಿಕ ರಹಿತ ತರಕಾರಿಯಾದ್ದರಿಂದ ಭಕ್ತರು ಅದನ್ನು ದುಪ್ಪಟ್ಟು ಬೆಲೆ ತೆತ್ತಾದರೂ ಖರೀದಿಸುತ್ತಾರೆ. ಇಂಥ ದೈವಕೃಪೆಯ ತರಕಾರಿ ಬಳಸಿಯೇ ಮಾಡಿದ ರುಚಿಕಟ್ಟು ಅಡಿಗೆಯನ್ನು ಇದೇ ಇಸ್ಕಾನ್ ದೇವಾಲಯದಲ್ಲಿರುವ 'ಹೈಯರ್ ಟೇಸ್ಟ್' ಎಂಬ ಐಷಾರಾಮಿ ರೆಸ್ಟೋರೆಂಟಿನಲ್ಲಿ ಮಾರುತ್ತಾರೆ. ದೇಗುಲದೊಳಗೇ ರೆಸ್ಟೋರೆಂಟ್ ಇದೆಯಾದ್ದರಿಂದ ಅಲ್ಲಿ ಉಣ್ಣುವ ಊಟವೂ ದೈವಿಕ. ಆದ್ದರಿಂದ ಪ್ರತಿ ಊಟವೊಂದಕ್ಕೆ ಮುನ್ನೂರು ರೂಪಾಯಿ ವಿಧಿಸಿದರೂ ಭಕ್ತಾದಿಗಳು ಬಂದು ತಿನ್ನುತ್ತಾರೆ. ಇದೇ 'ಹೈಯರ್ ಟೇಸ್ಟ್' ರೆಸ್ಟೋರೆಂಟಿನ ಬಾಣಸಿಗರು ತಯಾರಿಸಿದ ಬೇಕರಿ ಉತ್ಪನ್ನಗಳಿಗೂ ಡಿಮ್ಯಾಂಡಿದೆ. ಇಂಥ ಬೇಕರಿ ಐಟಮ್ಮುಗಳನ್ನು ಮಾರಲೆಂದೇ ಬೆಂಗಳೂರಿನ ನಾಲ್ಕೂ ದಿಕ್ಕುಗಳಲ್ಲಿ ಇದೇ ಹೆಸರಿನ ಬೇಕರಿಗಳನ್ನು ತೆರೆದಿದ್ದಾನೆ ಮಧುಪಂಡಿತ.

ಇದಲ್ಲದೆ ಕನಕಪುರ ರಸ್ತೆಯ ತಲಘಟ್ಟಪುರದ ಬಳಿ ಮಧುಪಂಡಿತಾ ಐಷಾರಾಮಿ ಅಪಾರ್ಟ್‌ಮೆಂಟ್ ಕಟ್ಟಿಸಿದ್ದಾನೆ. ಅದನ್ನು ಮಂತ್ರಿ ಬಿಲ್ಡರ್ಸ್ ನಿಭಾಯಿಸುತ್ತಾರಾದರೂ ಅಲ್ಲಿ ಫ್ಲಾಟು ಖರೀದಿಸಿದ ಬಹುತೇಕರೆಲ್ಲ ಇಸ್ಕಾನ್ ಭಕ್ತರೆ. ಇಸ್ಕಾನ್ ದೇಗುಲದ ವತಿಯಿಂದ ಕಟ್ಟಿಸಿದ ಅಪಾರ್ಟ್‌ಮೆಂಟ್‌ನಲ್ಲಿ ವಾಸಿಸಿದರೆ ಸಹಜವಾಗೇ ಕೃಷ್ಣನ ಕೃಪೆಗೆ ಪಾತ್ರರಾದಂತೆಯೇ. ಇದರ ಪಕ್ಕದಲ್ಲೇ ಕೃಷ್ಣಲೀಲಾ ಪಾರ್ಕ್ ತಲೆ ಎತ್ತಲಿದೆಯಾದ್ದರಿಂದ ಮುಂದೊಮ್ಮೆ ಈ ಅಪಾರ್ಟ್‌ಮೆಂಟಿಗೂ ದೈವಕೃಪೆಯಾಗುತ್ತದೆ!

ಇಸ್ಕಾನ್ ದೇವಾಲಯವೇ 'ಗೋಕುಲ' ಬ್ರಾಂಡಿನ ಅಗರಬತ್ತಿಯನ್ನು ಮಾರುತ್ತದೆ. ಇಂಥ ಊದುಬತ್ತಿ ಅಂಟಿಸಿ ದೇವರನ್ನು ಪೂಜಿಸಿದಲ್ಲಿ ದೇವರು ಸಾಧ್ಯವಾದಷ್ಟು ಬೇಗ ಒಲಿಯುತ್ತಾನೆ. ದೇವಾಲಯದ ವತಿಯಿಂದಲೇ ಭಕ್ತಿವೇದಾಂತ ದರ್ಶನವೆಂಬ ಪತ್ರಿಕೆಯೂ ಬರುತ್ತದೆ. ಇದಕ್ಕೊಂದು ಕೊಟ್ಟ ಚಂದಾ ಶ್ರೀಕೃಷ್ಣನ ಪಾದಕ್ಕೆ ಅರ್ಪಣೆಯಾಗುತ್ತದೆ. ಜೊತೆಗೆ ಭಗವದ್ಗೀತೆ, ಭಾಗವತ, ಕೃಷ್ಣಲೀಲೆ ಕುರಿತ ಥರಾವರಿ ದೈವಿಕ ಪುಸ್ತಕಗಳ ರಾಶಿಯೇ ಇಲ್ಲಿದೆ. ಕೊಂಡ ಪುಸ್ತಕದ ಲಾಭಪೂರ್ತಿ ಕೃಷ್ಣಾರ್ಪಣ. ಹೀಗೆ ರಾಜಾಜಿನಗರ ಹರೇಕೃಷ್ಣ ಬೆಟ್ಟ, ಅದರ ಮೇಲಿರುವ ಇಸ್ಕಾನ್ ದೇಗುಲ, ಅದರೊಳಗಿನ ಶ್ರೀಕೃಷ್ಣ ಬಲರಾಮ, ತಿರುಪತಿ ವೆಂಕಟೇಶ್ವರ, ಸೀತಾಮಾತೆ, ರಾಮಭಕ್ತ ಆಂಜನೇಯ, ಗಣಪತಿ, ಗೋವರ್ಧನ ಗಿರಿಧಾರಿ; ಇತ್ಯಾದಿ ದೈವಮೂರ್ತಿಗಳು, ಅಲ್ಲಿ ನಡೆಯುವ ಪೂಜೆ, ಭಜನೆ, ಪ್ರಸಾದ ಇತ್ಯಾದಿಗಳನ್ನೇ ನೆಪ ಮಾಡಿಕೊಂಡು ಹೇಗೆ ಸಹಸ್ರಾರು ಕೋಟಿಯ ದುಡ್ಡು ದೋಚಬಹುದೆಂಬುದನ್ನು ತೋರಿಸಿಕೊಟ್ಟವನು ಇದೇ ಮಧುಪಂಡಿತದಾಸ.



ಮನೆಹಾಳನ ಮುಷ್ಠಿಯಲ್ಲಿ ಮೂರ್ಖ ದಾಸರು

ಇಲ್ಲಿಗೆ ಹತ್ತು ವರ್ಷದ ಹಿಂದೆ ಎಂ.ಎಸ್. ರಾಮಯ್ಯ ಕಾಲೇಜಿನಲ್ಲಿ ಎಂಬಿಬಿಎಸ್ ಓದುತ್ತಿದ್ದ ಯೋಗೇಶ್ ಇದ್ದಕ್ಕಿದ್ದಂತೆ ಕಾಲೇಜು ತೊರೆದು ಇಸ್ಕಾನ್ ಸೇರಿಕೊಂಡ. ಈತನ ತಾಯಿ ನೀಲಾಂಬಿಕೆ ಬಡ ವಿಧವೆ. ಮದುವೆಗೆ ಬಂದ ತಂಗಿಯಿದ್ದೂ ಎಂಬಿಬಿಎಸ್ ಓದುವುದನ್ನೂ ತೊರೆದು ಧೋತಿ ಉಟ್ಟು, ಜುಟ್ಟು ಬಿಟ್ಟು ಜಪಮಾಲೆ ಹಿಡಿದು ಇಸ್ಕಾನ್ ಪಾಲಾದ ಮಗನ ಹುಚ್ಚು ಬಿಡಿಸಲು ತಾಯಿ ನೀಲಾಂಬಿಕೆ ಪಟ್ಟಪಾಡು ಅಷ್ಟಿಷ್ಟಲ್ಲ. ಮಧುಪಂಡಿತನ ವಿರುದ್ಧ ಪೊಲೀಸರಿಗೆ ದೂರಿತ್ತಳು. ಪತ್ರಿಕಾಗೋಷ್ಠಿ ಮಾಡಿ ಕಣ್ಣೀರಿಟ್ಟಳು. ಮಗ ಯೋಗೇಶ್ ಯಾವುದಕ್ಕೂ ಜಗ್ಗಲಿಲ್ಲ.

ಇದು ಕೇವಲ ಯೋಗೇಶ್ ಒಬ್ಬನದೇ ಕತೆಯಾಗಿರಲಿಲ್ಲ. ಇದೇ ರೀತಿ ಮುಸ್ಲಿಂ ಶಿಕ್ಷಕಿಯೊಬ್ಬರ ಮಗ ಯುಸೂಫ್ ಕಾಲೇಜಿಗೇ ಗುಡ್‌ಬೈ ಹೇಳಿ ಇಸ್ಕಾನ್ ಸೇರಿ ಜಪಮಾಲೆ ಹಿಡಿದಿದ್ದ. ಚಿಕ್ಕಪೇಟೆಯ ಶ್ರೀಮಂತ ಮಾರ್ವಾಡಿಯೊಬ್ಬರ ಮಗ ಓದು ತೊರೆದು ತನ್ನ ಹೆಸರನ್ನು ವನಮಾಲ ಕೃಷ್ಣ ಎಂದು ಬದಲಿಸಿಕೊಂಡ. ಕಂದಾಯ ಇಲಾಖೆಯ ತಹಶೀಲ್ದಾರ್ ಒಬ್ಬರ ಮಗ ಸುನೀಲ್ ತನ್ನ ಲಕ್ಷ ರೂಪಾಯಿ ಸಂಬಳದ ಐಟಿ ಉದ್ಯೋಗವನ್ನೇ ತೊರೆದು ರಾಧಾಕಾಂತನಾದ. ಈ ರೀತಿ ಕೃಷ್ಣಭಕ್ತಿಯ ಹುಚ್ಚಿಗೆ ಬಿದ್ದು ಮನೆಮಠ ಬಿಟ್ಟು ಇಸ್ಕಾನ್ ಪಾಲದ ಸೋಕಾಲ್ಡ್ ದಾಸರೆಲ್ಲ ತಮಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ ಪರೋಕ್ಷವಾಗಿ ಮಧುಪಂಡಿತನ ವಂಚನೆಯ ಪಾಲುದಾರರಾಗಿದ್ದಾರೆ.

ಇಸ್ಕಾನ್ ದೇಗುಲದ ಇಡೀ ಆದಾಯ ಮಧುಪಂಡಿತನ ಬೇರೆಬೇರೆ ಹೆಸರಿನ ಟ್ರಸ್ಟುಗಳ ಪಾಲಾಗಿದೆ. ಕೃಷ್ಣಭಕ್ತಿಗೆ ಬಿದ್ದು ದಾಸರಾದವರು ಆತನ ರೆಸ್ಟೋರೆಂಟಿನಲ್ಲೋ, ಗೋಶಾಲೆಯಲ್ಲೋ, ಅಕ್ಷಯ ಪಾತ್ರಾ ಬಿಸಿಯೂಟದ ಅಡುಗೆ ಮನೆಯಲ್ಲೋ, ತರಕಾರಿ ಬೆಳೆಯುವ ಹೊಲದಲ್ಲೋ ಅಕ್ಷರಶಃ 'ದಾಸ'ರಾಗೇ ದುಡಿಯುತ್ತಿದ್ದಾರೆ. ಈ ಪೈಕಿ ಅಷ್ಟಿಷ್ಟು ಅದೃಷ್ಟಶಾಲಿಯೆಂದರೆ ಯೋಗೇಶ್. ಸದ್ಯ ಆತ ಬಳ್ಳಾರಿ ಇಸ್ಕಾನ್‌ನ ಮುಖ್ಯಸ್ಥ. ತನ್ನ ಹೆಸರನ್ನು ಯದಿಷ್ಠಿರ ಕೃಷ್ಣದಾಸ ಎಂದು ಬದಲಿಸಿಕೊಂಡಿದ್ದಾನೆ. ಬಳ್ಳಾರಿಯ ಗಣಿಧಣಿಗಳನ್ನು ಕಂಡು ಕೃಷ್ಣನ ಹೆಸರಲ್ಲಿ ಭಿಕ್ಷೆ ಎತ್ತಿ ದೇವಸ್ಥಾನಕ್ಕೆಂದು ಸುರಿದರೆ ಇಡೀ ದೇವಸ್ಥಾನ ಮಧುಪಂಡಿತನ ಸೊತ್ತಾಗುತ್ತದೆ. ಕೃಷ್ಣನ ಪೂಜೆಗೆಂದು ತರಕಾರಿ ಬೆಳೆದರೆ ಅದನ್ನು ಮಧುಪಂಡಿತ ಮಾರಿಕೊಳ್ಳುತ್ತಾನೆ. ಅಕ್ಷಯಪಾತ್ರೆಯ ಹೆಸರಲ್ಲಿ ಎತ್ತಿದ ಚಂದಾ ಅನ್ನೂ ಆತನೇ ಜೇಬಿಗಿಳಿಸುತ್ತಾನೆ. ಕೃಷ್ಣದಾಸರ ಮೂರ್ಖತನಕ್ಕಿಂತ ಮಧುಪಂಡಿತನಿಗೆ ಇನ್ನೆಂಥ ಬಂಡವಾಳ ಬೇಕು?

ಪೂಜೆಗೂ ದುಡ್ಡು ಪ್ರಸಾದಕ್ಕೂ ದುಡ್ಡು, ದುಡ್ಡೇ ಇಲ್ಲಿ ದೇವರು.....!

ಸದ್ಯ ರಾಜ್ಯ ಹೈಕೋರ್ಟ್ ಬೆಂಗಳೂರಿನ ಇಸ್ಕಾನ್ ದೇಗುಲವನ್ನು ಮುಂಬಯಿ ಹೆಡ್ಡಾಫೀಸಿನ ಸೊತ್ತೆಂದು ತೀರ್ಪಿತ್ತಿದೆ ನಿಜ, ಆದರೆ ಮಧುಪಂಡಿತ ಸುಲಭಕ್ಕೆ ಬಿಟ್ಟುಕೊಡುವ ಆಸಾಮಿಯಲ್ಲ. ಇದೆಲ್ಲ ಲೆಕ್ಕಾಚಾರ ಹಾಕಿಯೇ ಆತ ಇಸ್ಕಾನ್ ಬೆಂಗಳೂರು ಎಂಬ ನಕಲಿ ಟ್ರಸ್ಟ್ ಹುಟ್ಟುಹಾಕಿದ. ರಾಜಾಜಿನಗರದ ಇಡೀ ಇಸ್ಕಾನ್ ದೇಗುಲ ತನ್ನದೇ ಬೋಗಸ್ ಟ್ರಸ್ಟ್‌ನ ಸೊತ್ತೆಂದು ವಾದಿಸಿದ. ಹಕೀಕತ್ತೆಂದರೆ ಮಧುಪಂಡಿತನ ಟ್ರಸ್ಟ್ ಕೇವಲ ಖೊಟ್ಟಿ ದಾಖಲೆಗಳ ಟ್ರಸ್ಟಾಗಿತ್ತೇ ಹೊರತು ಮಿಕ್ಕಂತೆ ವ್ಯಾವಹಾರಿಕವಾಗಿ ಮುಂಬಯಿಯ ಹೆಡ್ಡಾಫೀಸಿನ ಹೆಸರಲ್ಲೇ ಸಮಸ್ತ ವಹಿವಾಟನ್ನು ನಡೆಸಲಾಗಿತ್ತು.

ಇದೇ ಆಧಾರದ ಮೇಲೆ ಹೈಕೋರ್ಟ್ ಮಧುಪಂಡಿತನ ಗ್ಯಾಂಗ್‌ನ ವಾದವನ್ನು ತಳ್ಳಿಹಾಕಿತ್ತು. ನಿಜಕ್ಕೂ ಕೃಷ್ಣಭಕ್ತಿಯೇ ಮುಖ್ಯವಾಗಿದ್ದು ದೇವರ ಪೂಜೆ ಯಾರು ಮಾಡಿದರೇನು? ಭಕ್ತಿಯಲ್ಲಿ ನಿಜಕ್ಕೂ ದಾಸನೇ ಆಗಿದ್ದರೆ ತಾನೇ ದೇವಸ್ಥಾನವನ್ನು ಆಳಬೇಕೆಂಬ ಹಠವೇಕೆ? ದೇಗುಲಕ್ಕೆಂದು ಬಂದ ಮುಂಬಯಿ ಕೃಷ್ಣದಾಸರಿಗೆ ರೌಡಿಗಳನ್ನು ಛೂಬಿಟ್ಟು ಏಕೆ ಹೊಡೆಸಬೇಕು?

ಮಧುಪಂಡಿತನಿಗೆ ಕೃಷ್ಣಭಕ್ತಿ, ಕೀರ್ತನೆ, ಪೂಜೆ, ಜಪ-ತಪಕ್ಕಿಂತಲೂ ದೇವಸ್ಥಾನದ ಆದಾಯ ಮತ್ತು ಆಸ್ತಿಯೇ ಮುಖ್ಯ. ಆತನ ಪಾಲಿಗದು ಹಾಲು ಕರೆಯುವ ಕಾಮಧೇನು. ಸರ್ಕಾರ ಕೊಟ್ಟ 6.14 ಎಕರೆ ಭೂಮಿ ಮತ್ತು ದೇಗುಲದ ಹಾಲಿ ಮಾರುಕಟ್ಟೆ ಬೆಲೆ ಸದ್ಯಕ್ಕೆ ಕಮ್ಮಿಯೆಂದರೂ 500 ಕೋಟಿ ಬೆಲೆ ಬಾಳುತ್ತದೆ. ದೇಗುಲದ ಹಿಂಬದಿಯಲ್ಲೊಂದು ಗೋಶಾಲೆ ಮಾಡಿದ್ದೇವೆಂದು ಈತ ಹೇಳಿಕೊಳ್ಳುವುದು ಗೋಪೂಜೆಗಿಂತಲೂ ಗೋವಿನ ಹಾಲಿನ ಕಾರಣಕ್ಕೆ. ದಿನಕ್ಕೆ ಕಮ್ಮಿಯೆಂದರೂ ಸಾವಿರ ಲೀಟರ್ ಹಾಲು ಇಲ್ಲಿನ ಪ್ರಸಾದ, ರೆಸ್ಟೋರೆಂಟ್, ಬೇಕರಿಗಳಿಗೆ ಬೇಕು. ಇದೊಂದೇ ಬಾಬ್ತಿನಿಂದ ದಿನಕ್ಕೆ 25 ಸಾವಿರ ರೂಪಾಯಿ ಲಾಭವಿದೆ. ತಿಂಗಳಿಗಿದೇ 8 ಲಕ್ಷದ ಆದಾಯ.

ಇದಲ್ಲದೇ ಭಕ್ತಿವೇದಾಂತ ಬುಕ್ ಟ್ರಸ್ಟ್ ಒಂದೇ ವರ್ಷಕ್ಕೆ 50 ಲಕ್ಷ ರೂಪಾಯಿಗಳ ವಹಿವಾಟು ನಡೆಸುತ್ತದೆ. ಪುಸ್ತಕಗಳಲ್ಲದೇ ಭಕ್ತಿ ವೇದಾಂತ ದರ್ಶನ ಎಂಬ ಮಾಸಪತ್ರಿಕೆಯನ್ನೂ ಮಧುಪಂಡಿತ ಹೊರತರುತ್ತಾನೆ. ಇದಕ್ಕೆಂದೇ ಸ್ತೋಕ ಕೃಷ್ಣದಾಸ ಮತ್ತು ಚಂಚಲ ಪತಿದಾಸರ ನೇತೃತ್ವದಲ್ಲಿ ಸಂಕೀರ್ತನ ಸೇವಾ ಟ್ರಸ್ಟ್ ಎಂಬ ಪ್ರತ್ಯೇಕ ಟ್ರಸ್ಟ್ ರಚಿಸಲಾಗಿದೆ. ಐದು ವರ್ಷದ ಭಕ್ತಿವೇದಾಂತ ದರ್ಶನ ಪತ್ರಿಕೆಯ ಚಂದಾ ಮೊತ್ತವೇ 1200 ರೂಪಾಯಿ. ಇದರ ಚಂದಾ ಸಂಗ್ರಹಣೆಗೆಂದೇ 60 ಮಂದಿ ಯುವತಿಯರನ್ನು ನೇಮಿಸಿಕೊಂಡು ಅವರಿಗೆ ಮಾಸಿಕ 12 ಸಾವಿರ ರೂಪಾಯಿ ಸಂಬಳ ಕೊಡುತ್ತಾನೆ. ಅದೂ ಪ್ರತಿ ತಿಂಗಳು ಲಕ್ಷ ರೂಪಾಯಿ ಸಂಗ್ರಹಿಸಲೇಬೇಕೆಂಬ ಷರತ್ತಿನ ಮೇಲೆ.



ಭಕ್ತಿ ವೇದಾಂತ ದರ್ಶನದ ಚಂದಾ ಸಂಗ್ರಹಿಸುವ ನೆಪದಲ್ಲಿ ಬೆಂಗಳೂರಿನ ಗಲ್ಲಿಗಲ್ಲಿ ಸುತ್ತುವ ಈ ಯುವತಿಯರು ಅಕ್ಷಯ ಪಾತ್ರೆ ಫೌಂಡೇಷನ್ನಿನ ಹೆಸರಲ್ಲಿ ಬಡಮಕ್ಕಳಿಗೆ ಬಿಸಿಯೂಟ ಕೊಡುತ್ತಿದ್ದೇವೆಂದು ವ್ಯಾಪಾರಸ್ಥರನ್ನು ನಂಬಿಸಿ ತಲಾ ಐದು ಸಾವಿರದಿಂದ 50 ಸಾವಿರದ ತನಕ ವಸೂಲಿ ಮಾಡುತ್ತಾರೆ. ಹೀಗೆ ಅಕ್ಷಯ ಪಾತ್ರೆ ಹೆಸರಲ್ಲಿ ಸಂಗ್ರಹಿಸಿದ ಅಷ್ಟು ದುಡ್ಡು ಮಧುಪಂಡಿತನ ಜೇಬು ಸೇರುತ್ತದೆ. ಏಕೆಂದರೆ ಬಿಸಿಯೂಟದ ಅಷ್ಟೂ ವೆಚ್ಚ ಪಾವತಿಸುವುದು ಸರ್ಕಾರ.

ಇದಲ್ಲದೇ ಶಾಲಾಮಕ್ಕಳಿಗೆ ಆಧ್ಯಾತ್ಮ ವಿದ್ಯಾದಾನದ ಪ್ರಾಯೋಜಕತ್ವ ಅಂತಲೇ ತಲಾ ಐದು ಸಾವಿರದಂತೆ ಈ ಯುವತಿಯರು ಕೃಷ್ಣನ ಫೋಟೋ ತೋರಿಸಿ ವಸೂಲಿ ಮಾಡುತ್ತಾರೆ. ಆಧ್ಯಾತ್ಮ ವಿದ್ಯಾದಾನವೆಂದರೆ ಭಕ್ತಿ ವೇದಾಂತ ದರ್ಶನ ಪತ್ರಿಕೆಯ ಹಳೇ ಪ್ರತಿಗಳನ್ನು ಸಂಗ್ರಹಿಸಿ ಬಿಟ್ಟಿ ಹಂಚುವುದು. ಮೊದಲೇ ಚಂದಾ ಸಂಗ್ರಹ ಮಾಡಿದ್ದರಿಂದ ಆಸ್ತಿಕರು ಕೊಟ್ಟ 5 ಸಾವಿರ ಕೂಡ ಮಧುಪಂಡಿತನ ಜೇಬು ಸೇರುತ್ತದೆ. ಮಧುಪಂಡಿತನ ಆಸ್ತಿದಾಹದ ಒಂದೆರಡು ಉದಾಹರಣೆಯಷ್ಟೇ. ಇದಲ್ಲದೇ ಟ್ರಾವೆಲ್ಸ್‌ಗೂ ಕೈಯಿಟ್ಟಿದ್ದಾನೆ. ಪಾರ್ಟಿ, ಸಭೆಗಳಿಗೆಂದೇ ಅಡುಗೆ ಮಾಡಿ ಸರಬರಾಜು ಮಾಡುವ ಕ್ಯಾಟರಿಂಗ್ ದಂಧೆಯನ್ನೂ ಸದ್ದಿಲ್ಲದೇ ನಡೆಸುತ್ತಾನೆ. ಅಕ್ಷಯ ಪಾತ್ರೆ ಹೆಸರಲ್ಲಿ ಬಿಸಿಯೂಟದ ಒಂದೇ ಬಾಬತ್ತಿನಿಂದ ಈತ ವರ್ಷಕ್ಕೆ ಕನಿಷ್ಠ ಎಂಟು ಕೋಟಿ ಸಂಪಾದಿಸುತ್ತಾನೆ.

ದೇವರ ದರ್ಶನದಿಂದ ಹಿಡಿದು ದೇವಸ್ಥಾನದ ಪ್ರವೇಶಕ್ಕೂ ಇಲ್ಲಿ ಕಾಸು ಕೊಡಬೇಕು. ಪ್ರಸಾದ ಕೂಡ ಇಲ್ಲಿ ಉಚಿತವಲ್ಲ. ಪ್ರತಿಯೊಂದಕ್ಕೂ ದುಡ್ಡು, ಪೂಜೆಗೂ ದುಡ್ಡು. ಬಹುಶಃ ತಿರುಪತಿಯನ್ನು ಬಿಟ್ಟರೆ ದಕ್ಷಿಣ ಭಾರತದ ಮಟ್ಟಿಗೆ ಅತೀಹೆಚ್ಚು ಆದಾಯವುಳ್ಳ ದೇವಸ್ಥಾನವೆಂದರೆ ಅದು ರಾಜಾಜಿನಗರದ ಇಸ್ಕಾನ್. ಇಂಥ ಅಗಾಧ ಉತ್ಪತ್ತಿಯ ದೇವಸ್ಥಾನವನ್ನು ಸುಮ್ಮನೇ ಬಿಟ್ಟುಕೊಡಲು ಮಧುಪಂಡಿತನೇನು ಮೂರ್ಖನೇ?

ಅದಕ್ಕೇ ತಾನು ಅಮೆರಿಕನ್ ಗುರು ಪದ್ಧತಿ ವಿರೋಧಿಸಿದ್ದರಿಂದ ಮುಂಬಯಿಯವರು ಸಿಟ್ಟಾಗಿದ್ದಾರೆಂದು ಒಮ್ಮೆ ಹೇಳಿದರೆ ಮತ್ತೊಮ್ಮೆ ಕನ್ನಡಿಗರ ಆಸ್ತಿ ಹೊಡೆಯಲು ಮುಂಬಯಿಯವರು ಹವಣಿಸುತ್ತಿದ್ದಾರೆಂದು ಬಣ್ಣ ಕಟ್ಟುತ್ತಾನೆ. ನಿಜ ಭಕ್ತನಿಗೆ ಸ್ಥಾವರದ ಹಂಗೇಕೆ? ದೇವಾಲಯವೆಂಬುದು ರೊಕ್ಕ ಟಂಕಸಾಲೆಯಾದರೆ ಅಲ್ಲಿ ಮಧುಪಂಡಿತನಂಥ ಪಿಶಾಚಿಗಳಷ್ಟೇ ಇರಲು ಸಾಧ್ಯವೇ ಹೊರತು ದೇವರು ಸುಳಿಯುವುದುಂಟೆ?





ಹೈಕೋರ್ಟ್ ಈತನ ಅಷ್ಟೂ ವಂಚನೆಯನ್ನು ಪತ್ತೆಹಚ್ಚಿ ಛೀಮಾರಿ ಹಾಕಿದೆ. ಶಾಲಾಮಕ್ಕಳ ಅಕ್ಕಿ ಕದ್ದವನು ಕೃಷ್ಣನ ದೇವಸ್ಥಾನವನ್ನೇ ಕದ್ದಿದ್ದಾನೆಂಬುದನ್ನು ಕೋರ್ಟ್ ಸಾಬೀತುಮಾಡಿದೆ. ಮುಂಬಯಿಯ ಇಸ್ಕಾನ್ ಕೇಂದ್ರ ಕಚೇರಿಗೆ ಪಂಗನಾಮ ಹಾಕಿ ಇಡೀ ಬೆಂಗಳೂರು ಇಸ್ಕಾನ್ ಆಸ್ತಿಯನ್ನು ಲಪಟಾಯಿಸಿದ ಮಧುಪಂಡಿತ ಕರ್ನಾಟಕದ ಜನಕ್ಕೆ ಹೇಗೆಲ್ಲಾ ಟೋಪಿ ಹಾಕಿದ್ದಾನೆಂಬುದಕ್ಕೆ ಆತ ಇಸ್ಕಾನ್ ಅನ್ನು ನೆಪ ಮಾಡಿಕೊಂಡು ಹುಟ್ಟುಹಾಕಿದ ತರಹೇವಾರಿ ಟ್ರಸ್ಟುಗಳು, ಅವು ನಡೆಸುವ ವ್ಯವಹಾರ, ಅವುಗಳ ಆರ್ಥಿಕ ವಹಿವಾಟು, ದೋಚಿದ ದುಡ್ಡು ಇತ್ಯಾದಿಗಳ ವಿವರವೇ ಸಾಕಷ್ಟು ಪುರಾವೆ ಕಲ್ಪಿಸುತ್ತದೆ.

1978 ರಲ್ಲಿ ಬೆಂಗಳೂರಿನಲ್ಲಿ ರಿಜಿಸ್ಟರ್ಡ್ ಆದ ಇಸ್ಕಾನ್ ಘಟಕ ಸಹಜವಾಗೇ ಮುಂಬಯಿ ಕೇಂದ್ರದ ಅಧೀನ ಶಾಖೆಯಾಗಿತ್ತು. ಭಾರತೀಯ ಇಸ್ಕಾನ್ ಚಳವಳಿಯ ನಾಯಕ ಜೈಪತಾಕ ಸ್ವಾಮಿಯ ನೇತೃತ್ವದಲ್ಲಿ ಶುರುವಾದ ಬೆಂಗಳೂರಿನ ಇಸ್ಕಾನ್ ಘಟಕಕ್ಕೆ ಮಧುಪಂಡಿತದಾಸ ಅಧ್ಯಕ್ಷನಾದರೆ ಚಂಚಲಪತಿದಾಸ ಉಪಾಧ್ಯಕ್ಷನಾದ. ವರದ ಕೃಷ್ಣದಾಸ, ಸ್ತೋಕ ಕೃಷ್ಣದಾಸ, ಗೌರಂಗದಾಸ, ನಿತ್ಯ ಚೈತನ್ಯದಾಸ- ಹೀಗೆ ಮನೆಮಠ ಬಿಟ್ಟು ಕೃಷ್ಣ ಪಂಥ ಸೇರಿದ ಪ್ರತಿಭಾವಂತ ವಿದ್ಯಾರ್ಥಿಗಳೆಲ್ಲ ಜುಟ್ಟು ಬಿಟ್ಟು, ಪಂಚೆ ಉಟ್ಟು, ನಾಮಧರಿಸಿ, ಜಪಮಾಲೆ ಹಿಡಿದು ಬೆಂಗಳೂರಿನ ಗಲ್ಲಿಗಲ್ಲೀ ಸುತ್ತಿ ಎತ್ತಿದ ಕಾಣಿಕೆಯೇ ಇವತ್ತಿನ ಇಸ್ಕಾನ್ ದೇವಾಲಯವಾಯಿತು.

ಇಸ್ಕಾನ್ ಚಳವಳಿಗೆ ಮನಸೋತ ಆಗಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ರಾಜಾಜಿನಗರದ ಸಾಬೂನು ಕಾರ್ಖಾನೆ ಎದುರು ಇದ್ದ 6.14 ಎಕರೆ ಬೆಟ್ಟವನ್ನೇ ಕೃಷ್ಣ ದೇವಸ್ಥಾನಕ್ಕೆಂದು ಬರೆದುಕೊಟ್ಟರು. ಕ್ರಮೇಣ ಅದೇ ಹರೇಕೃಷ್ಣಗಿರಿಯಾಯಿತು. ಅಲ್ಲಿ ವೈಭವೋಪೇತ ರಾಧಾಕೃಷ್ಣ ಮಂದಿರ ತಲೆ ಎತ್ತಿ ಅದು ಬೆಂಗಳೂರಿನ ಪ್ರವಾಸಿ ಕೇಂದ್ರವೇ ಆಗಿಹೋಯಿತು.

ದೇವಸ್ಥಾನಕ್ಕೊಂದು ಭೂಮಿ ಕೊಟ್ಟಿದ್ದು ಸರ್ಕಾರ. ಕಟ್ಟಲು ಕಾಣಿಕೆ ಕೊಟ್ಟವರು ಬೆಂಗಳೂರಿನ ಜನ. ಇದಕ್ಕೊಂದು ಮಧುಪಂಡಿತನಾಗಲಿ, ಚಂಚಲಪತಿಯಾಗಲಿ ತಮ್ಮ ಮನೆಯಿಂದ ನಯಾಪೈಸೆಯನ್ನೂ ತರಲಿಲ್ಲ. ಯಾವತ್ತು ದೇವಾಲಯದ ಖ್ಯಾತಿ, ಆಕರ್ಷಣೆ, ಆದಾಯ ತನ್ನಿಂತಾನೇ ಉಲ್ಬಣಿಸಿತೋ ಒಳಗೊಳಗೇ ಇದ್ದ ಮಧುಪಂಡಿತನ ಸ್ವಾರ್ಥ ಹೆಡೆಯೆತ್ತಿತ್ತು. ಮುಂಬಯಿಯ ಇಸ್ಕಾನ್ ಕೇಂದ್ರ ಕಚೇರಿ ಮುಂದೊಮ್ಮೆ ತನ್ನ ಬದಲು ಬೇರೊಬ್ಬನನ್ನು ಅಧ್ಯಕ್ಷನನ್ನಾಗಿ ಮಾಡಿಬಿಟ್ಟರೆ?

ಈತನಕ ಅನುಭವಿಸಿದ ಸುಖ, ಸಂಪತ್ತು, ಐಷಾರಾಮ ತನ್ನ ಕೈಬಿಡುತ್ತದೆ!

ಇಂಥ ಕುಟಿಲ ಯೋಚನೆಯಲ್ಲೇ ಮಧುಪಂಡಿತ ಮುಂಬೈಯ ಕೇಂದ್ರ ಕಚೇರಿ ವಿರುದ್ಧ ಬಂಡೆದ್ದು ತಾನೇ ಬೆಂಗಳೂರು ಕೇಂದ್ರದ ಮಾಲೀಕನೆಂದು ಸ್ವಯಂಘೋಷಿಸಿ ಕೊಂಡ. ಮೊದಮೊದಲು ಇದು ಕೃಷ್ಣಭಕ್ತಿ ಕುರಿತ ಭಿನ್ನಾಭಿಪ್ರಾಯದ ಪರಿಣಾಮವೆಂದೇ ಭಕ್ತಾದಿಗಳು ಲೆಕ್ಕ ಹಾಕಿದ್ದರು. ಮನೆ, ಓದು ಬಿಟ್ಟು ದಾಸರಾದವರ ಪೈಕಿ ಬಹುತೇಕರನ್ನು ಮಧುಪಂಡಿತ ಮರುಳು ಮಾಡಿದ್ದ. ತಾವೆಲ್ಲ ಸೇರಿ ಕಷ್ಟಪಟ್ಟು ಕಟ್ಟಿದ ದೇವಸ್ಥಾನವನ್ನು ಮುಂಬಯಿಯವರು ಲಪಟಾಯಿಸಲು ಹವಣಿಸುತ್ತಿದ್ದಾರೆಂದೇ ಪುಕಾರೆಬ್ಬಿಸಿದ. ಬೆಂಗಳೂರು ಇಸ್ಕಾನ್ ಕೇಂದ್ರದಲ್ಲಿದ್ದ ಬಹುತೇಕ ದಾಸರಿಗೆ ಇದು ಸರಿಯೆನ್ನಿಸಿದೆ. ಸಹಜವಾಗೇ ಮಧುಪಂಡಿತನ ಪರ ವಹಿಸಿದ್ದಾರೆ.

ಯಾರೆಲ್ಲ ಈ ರೀತಿ ಕೃಷ್ಣಭಕ್ತಿಗೆ ಬಿದ್ದು ಮಧುಪಂಡಿತನ ಪರ ನಿಂತು ಮುಂಬಯಿ ಕೇಂದ್ರ ಕಚೇರಿಯ ವಿರುದ್ಧ ಬಂಡೆದ್ದಿದ್ದರೋ ಅಂಥವರಿಗೆ ಸತ್ಯ ಅರ್ಥವಾಗಲು ಹೆಚ್ಚು ಸಮಯ ಹಿಡಿಯ ಲಿಲ್ಲ. ಮಧುಪಂಡಿತದಾಸ ಇದೇ ಇಸ್ಕಾನ್‌ನ ಕೇರಳ ಘಟಕದ ಮುಖ್ಯಸ್ಥರ ಲ್ಲೊಬ್ಬನಾಗಿದ್ದ ವಿಶ್ವಕ್‌ಸೇನ ದಾಸ ಮತ್ತಾತನ ಪತ್ನಿ ಉಜ್ವಲಾ ದಂಪತಿಗಳ ಮಗಳು ಭಕ್ತಿಲತಾಳನ್ನು ಮದುವೆಯಾದ. ಮಧುಪಂಡಿತನೂ ಮೂಲತಃ ಕೇರಳ ಕುಟ್ಟಿ. ಆತ ಮದುವೆಯಾಗಿದ್ದ ಭಕ್ತಿಲತಾ ಕೂಡಾ ಮಲೆಯಾಳಿಯೆ. ಈ ಭಕ್ತಿಲತಾಳ ತಂಗಿಯೇ ಚಮರಿದೇವಿದಾಸಿ. ಈಕೆಯನ್ನು ಬೆಂಗಳೂರು ಇಸ್ಕಾನ್ ಉಪಾಧ್ಯಕ್ಷನಾಗಿದ್ದ ತನ್ನ ಶಿಷ್ಯ ಚಂಚಲಪತಿ ದಾಸನಿಗೆ ಮದುವೆ ಮಾಡಿದ.

ಅಲ್ಲಿಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರಿಬ್ಬರೂ ಒಂದೇ ಕುಟುಂಬದ ರಕ್ತ ಸಂಬಂಧಿಗಳಾದಂತಾಯ್ತು. ಪತ್ನಿ ಲತಾ ಮತ್ತು ತಂಗಿ ಚಮರಿದೇವಿಯಲ್ಲದೆ ಇವರಿಗೆ ಇನ್ನೂ ಒಬ್ಬಳು ತಂಗಿಯಿದ್ದಳು. ಆಕೆ ಲೇಖಾ. ಈಕೆಯನ್ನು ಮಧುಪಂಡಿತನೇ ನಿಂತು ಬೆಂಗಳೂರು ಇಸ್ಕಾನ್‌ನ ಮತ್ತೊಬ್ಬ ಪ್ರಮುಖ ಶ್ಯಾಂಸುಂದರದಾಸ್‌ನಿಗೆ ಮದುವೆ ಮಾಡಿಸಿದ. ಪತ್ನಿ ಭಕ್ತಿಲತಾಳ ಬಾಲ್ಯದ ಗೆಳೆಯ ಮತ್ತು ಸಂಬಂಧಿ ಜೈಚೈತನ್ಯದಾಸನನ್ನೂ ಕರೆತಂದು ಬೆಂಗಳೂರು ಇಸ್ಕಾನ್‌ನಲ್ಲೇ ಪ್ರತಿಷ್ಠಾಪಿಸಿದ. ಅಲ್ಲಿಗೆ ಇಡೀ ಹರೇಕೃಷ್ಣ ಬೆಟ್ಟದ ಪ್ರಾಬಲ್ಯ ಮಧುಪಂಡಿತ ಮತ್ತಾತನ ಸಂಬಂಧಿಗಳದ್ದೇ ಅಧೀನಕ್ಕೊಳಪಟ್ಟು ಬೆಂಗಳೂರು ಇಸ್ಕಾನ್ ಪೂರ್ತಿ ಕೇರಳ ಮಲೆಯಾಳಿ ಕುಟ್ಟಿಗಳ ಅಡ್ಡೆಯಾಗಿ ಹೋಯಿತು.

ಆಗಲೂ ಬಹುತೇಕ ದಾಸರಿಗೆ ಮಧುಪಂಡಿತನ ವಂಚನೆ ಅರ್ಥವಾಗಿರಲಿಲ್ಲ. 1997 ರ ಹೊತ್ತಿಗೆ ದೇವರಪೂಜೆಗೆಂದೇ ವಿಶಿಷ್ಟ ಅಗರಬತ್ತಿ ಉತ್ಪಾದಿಸಿ ಮಾರಲೆಂದು ಮಧುಪಂಡಿತ ಗೋಲಕ ಸೇವಾಟ್ರಸ್ಟ್ ಎಂಬ ಸ್ವತಂತ್ರ ಸಂಸ್ಥೆಯೊಂದನ್ನು ಹುಟ್ಟುಹಾಕಿದ. ಮೊದಮೊದಲು ಇಸ್ಕಾನ್ ದೇವಸ್ಥಾನ ಪೂಜೆಗಷ್ಟೇ ಊದುಬತ್ತಿ ಮಾಡುತ್ತಾರೆಂದು ನಂಬಿದವರಿಗೆ ಕ್ರಮೇಣ ವಿಧವಿಧದ ಅಗರಬತ್ತಿಗಳನ್ನು ಸೃಷ್ಟಿಸಿ ಇಸ್ಕಾನ್ ಹೆಸರಲ್ಲಿ ಮಾರುಕಟ್ಟೆಗೆ ಬಿಟ್ಟಾಗ ಮಧುಪಂಡಿತನ ಮಾರ್ಕೆಟಿಂಗ್ ಭಕ್ತಿಯ ವಾಸನೆ ಹತ್ತಿತು.

ಅಗರಬತ್ತಿಯೇನೋ ದೇವರಪೂಜೆಗಾಯ್ತು. ಇನ್ನು ದೇವರ ನೈವೇದ್ಯಕ್ಕೆ ರಸಗೊಬ್ಬರ, ರಾಸಾಯನಿಕ ಬಳಸಿದ ಹಣ್ಣು, ತರಕಾರಿ ಬಳಸಿದರೆ ಹೇಗೆ? ಅದಕ್ಕೆಂದು ಮಧುಪಂಡಿತ ಮತ್ತೊಂದು ತಲೆ ಓಡಿಸಿದ. ಮೈಸೂರಿಗೆ ಹದಿನೈದು ಕಿ.ಮೀ. ದೂರದಲ್ಲಿ ಶ್ರೀರಂಗಪಟ್ಟಣ ತಾಲ್ಲೂಕಿನ ಮಹದೇವಪುರದಲ್ಲಿ 30 ಎಕರೆ ಕೃಷಿ ಭೂಮಿಯನ್ನು ಇಸ್ಕಾನ್ ಹೆಸರಲ್ಲಿ ಖರೀದಿಸಿದ. ಪಕ್ಕದ 77 ಎಕರೆ ಸರ್ಕಾರಿ ಜಮೀನನ್ನೂ ಸೇರಿಸಿ ಕಾಂಪೌಂಡ್ ಹಾಕಿ ಅಕ್ಕಪಕ್ಕದ ರೈತರ ಭೂಮಿಯನ್ನೂ ಆಕ್ರಮಿಸಿಕೊಂಡ. ಅದು ಒಟ್ಟು 140 ಎಕರೆ ಜಮೀನಾಗಿತ್ತು. ಕಾವೇರಿ ನದಿತೀರದಲ್ಲಿ ಮೈಸೂರಿಗೆ ಹೊಂದಿಕೊಂಡಂತೆ 77 ಎಕರೆ ಸರ್ಕಾರಿ ಭೂಮಿಯನ್ನೂ ಆಕ್ರಮಿಸಿ ಒಟ್ಟು 140 ಎಕರೆಯೆಂದರೆ ಸಣ್ಣ ಮಾತೆ?

ಇಲ್ಲಿ ಬೆಳೆದ ತರಕಾರಿಯನ್ನೇ ಇಸ್ಕಾನ್‌ನ ಅಡುಗೆಗೆ ಬಳಸಲಾಗುತ್ತಿತ್ತು. ಉಳಿದ ತರಕಾರಿಯನ್ನು ಸಾವಯವ ತರಕಾರಿ ಎಂದೇ ಶ್ರೀಕೃಷ್ಣನ ಕೃಪೆಯಿಂದ ಬೆಳೆದ ಪವಿತ್ರ



ಕಾಯಿಪಲ್ಲೆ ಎಂಬಂತೆ ಇಸ್ಕಾನ್ ದೇವಸ್ಥಾನದ ಆವರಣದಲ್ಲಿಟ್ಟು ಮಾರಲಾಯಿತು. ಒಂದಕ್ಕೆ ದುಪ್ಪಟ್ಟು ಬೆಲೆ. ಸರ್ಕಾರಿ ಭೂಮಿ ಒತ್ತುವರಿ ಮಾಡಿ ತರಕಾರಿ ಬೆಳೆದು ಅದನ್ನು ಇಸ್ಕಾನ್ ಹೆಸರಲ್ಲಿ ಕೃಷ್ಣಪ್ರಸಾದವೆಂಬಂತೆ ದುಪ್ಪಟ್ಟು ರೇಟಿಗೆ ಮಾರುವ ದಂಧೆಗೆ ಮಧುಪಂಡಿತ ತನ್ನ ಪತ್ನಿಯ ಬಾಲ್ಯದ ಗೆಳೆಯ ಜೈಚೈತನ್ಯದಾಸನನ್ನು ನೇಮಿಸಿದ್ದ.

ಮೇಲುನೋಟಕ್ಕೆ ಇದು ಇಸ್ಕಾನ್‌ನ ಪ್ರತ್ಯೇಕ ಘಟಕದಂತೆ ಕಂಡರೂ ಆಳದ ವ್ಯವಹಾರ ಬೇರೆಯದೇ ಆಗಿತ್ತು. ಇದಕ್ಕೆಂದೇ ಮಧುಪಂಡಿತ ಇಕೋ ಅಗ್ರಿಕಲ್ಚರಲ್ ರೀಸರ್ಚ್ ಫೌಂಡೇಷನ್ ಹುಟ್ಟು ಹಾಕಿ ಅದಕ್ಕೆ ಜೈಚೈತನ್ಯದಾಸನನ್ನು ಮುಖ್ಯಸ್ಥನನ್ನಾಗಿ ಮಾಡಿದ್ದ.

ಇಸ್ಕಾನ್ ಮತ್ತು ಶ್ರೀಕೃಷ್ಣನ ಹೆಸರಲ್ಲಿ ಈ ರೀತಿ ದೋಚಿದ ದುಡ್ಡನ್ನೇನು ಮಾಡುವುದು? ಅದಕ್ಕೆಂದೇ ರಿಯಲ್ ಎಸ್ಟೇಟ್ ದಂಧೆಗೆ ಕೈಯಿಟ್ಟ. ಕನಕಪುರ ರಸ್ತೆಯ ತಲಘಟ್ಟಪುರದ ಬಳಿ ಇದ್ದ ಬೆಟ್ಟವೊಂದರ ಮೇಲೆ ಕಣ್ಣು ಹಾಕಿದ. ಅದನ್ನು ಲಪಟಾಯಿಸಲೆಂದೇ ಇಂಡಿಯಾ ಹೆರಿಟೇಜ್ ಟ್ರಸ್ಟ್ ಹುಟ್ಟುಹಾಕಿ ಅದಕ್ಕೆ ತಾನೇ ಮ್ಯಾನೇಜಿಂಗ್ ಡೈರೆಕ್ಟರಾದ. ಕನಕಪುರ ರಸ್ತೆಗೆ ಹೊಂದಿಕೊಂಡಿದ್ದ ಬೆಟ್ಟದ ಮೇಲೆ ತಾನು ಪ್ರವಾಸೋದ್ಯಮದ ಅಭಿವೃದ್ಧಿಗೆಂದು ಕೃಷ್ಣಲೀಲಾ ಥೀಮ್‌ಪಾರ್ಕನ್ನು ನಿರ್ಮಿಸುತ್ತೇನೆಂದೂ ಇದು ಪ್ರವಾಸೋದ್ಯಮ ಹೆಚ್ಚಿ ಸರ್ಕಾರಕ್ಕೆ ಆದಾಯ ಬರುತ್ತದೆಯೆಂದೂ ಸರ್ಕಾರವನ್ನು ನಂಬಿಸಿ 28 ಎಕರೆ ಬೆಟ್ಟವನ್ನು ಮಂಜೂರು ಮಾಡಿಸಿಕೊಂಡ.

ಈ ಬೆಟ್ಟಕ್ಕೆ ಹೊಂದಿಕೊಂಡಂತೆ ಹೆಗಡೆ ಅಂಡ್ ಗೋಲೆ ಕಂಪೆನಿಯ 45 ಎಕರೆ ಜಮೀನಿತ್ತು. ಗೋಲೆ ಕಂಪೆನಿ ಮಾಡಿದ ಸಾಲ ಬೆಳೆದು ಇಡೀ ಆಸ್ತಿಯೇ ಹರಾಜಿಗೆ ಬಂದಿತ್ತಲ್ಲ; ಹರಾಜಿನ ಸ್ಪರ್ಧೆಯಲ್ಲಿದ್ದ ದಯಾನಂದ ಪೈ, ಇರ್ಫಾನ್ ರಜಾಕ್ ಮುಂತಾದವರನ್ನೆಲ್ಲ ಕೃಷ್ಣನ ಹೆಸರಲ್ಲೇ ತಲೆ ತಿಕ್ಕಿ ಹರಾಜಿಗೆ ಬರದಂತೆ ನೋಡಿಕೊಂಡ. ತೀರ ಕಮ್ಮಿ ರೇಟಿಗೆ ಹೊಡೆದ 45 ಎಕರೆಯನ್ನು ಮಂತ್ರಿ ಡೆವಲಪರ್ಸ್ ಜೊತೆ ಸೇರಿ 650 ಫ್ಲಾಟುಗಳನ್ನು ಕಟ್ಟಿಸಿ ಮಾರಿಕೊಂಡ. ಉಳಿಕೆ 28 ಎಕರೆಯಲ್ಲಿ ಕೃಷ್ಣಲೀಲಾ ಪಾರ್ಕ್ ಮಾಡುತ್ತಾನಂತೆ.

ಥೀಮ್‌ಪಾರ್ಕ್ ಹೆಸರಲ್ಲಿ ದೋಚಿದ ಜಮೀನನ್ನು ರಿಯಲ್ ಎಸ್ಟೇಟ್‌ಗೆ ಮಾರಿಕೊಂಡನಾದರೂ ಉಳಿಕೆ ಜಮೀನಿನಲ್ಲಿ ಈತನಕ ಥೀಮ್‌ಪಾರ್ಕ್ ತಲೆ ಎತ್ತಿಲ್ಲ. ಏಕೆ ಗೊತ್ತೆ? ಥೀಮ್‌ಪಾರ್ಕ್ ನಿರ್ಮಿಸುವುದಕ್ಕೆ ಕನಿಷ್ಠ ಐನೂರು ಕೋಟಿ ಬೇಕು. ಐನೂರು ಕೋಟಿ ಹಾಕಿ ಕಟ್ಟಿದ ಥೀಮ್ ಪಾರ್ಕ್‌ನಲ್ಲಿ ಹುಟ್ಟುವ ಆದಾಯ ಹಾಕಿದ ಬಂಡವಾಳದ ಬಡ್ಡಿಗೂ ಹುಟ್ಟುವುದಿಲ್ಲ. ಕೇವಲ ಕೃಷ್ಣಭಕ್ತಿ ಮೆರೆಯಲು ಈ ಪಾಟಿ ಬಂಡವಾಳ ಹಾಕಲು ಮಧುಪಂಡಿತನೇನು ಹುಚ್ಚನೆ?

ಥೀಮ್‌ಪಾರ್ಕ್ ಮತ್ತು ಕೃಷ್ಣನ ಹೆಸರಲ್ಲಿ ರಿಯಲ್ ಎಸ್ಟೇಟ್ ದಂಧೆ ಬಿಟ್ಟರೆ ಮಧುಪಂಡಿತನಿಗೆ ಬೇರೆ ಉದ್ದೇಶವಾದರೂ ಎಲ್ಲಿತ್ತು? ಥೀಮ್‌ಪಾರ್ಕ್ ಹೆಸರಲ್ಲಿ ದೋಚಿದ ದುಡ್ಡನ್ನು ತಂದು ದೇವನಹಳ್ಳಿ ಬಳಿ 110 ಎಕರೆ ಭೂಮಿ ಖರೀದಿಸಿದ್ದ. ಅದನ್ನು ಕ್ರಮೇಣ ಪ್ರೆಸಿಡೆನ್ಸಿ ಬಿಲ್ಡರ್ಸ್ ರೆಡ್ಡಿಗೆ ಮಾರಿಕೊಂಡ. ಇದೇ ದುಡ್ಡನ್ನು ತಂದು ದೆಹಲಿ ಸಮೀಪ 90 ಎಕರೆ ಜಮೀನು ಖರೀದಿಸಿದ. ಮಥುರಾ-ಬೃಂದಾವನದ ಬಳಿ ಇಂಥದ್ದೇ ಮತ್ತೊಂದು ಥೀಮ್‌ಪಾರ್ಕ್ ಮಾಡುತ್ತೇನೆಂದ. 90 ಎಕರೆ ಭೂಮಿ ಗಿಟ್ಟಿದ್ದು ಬಿಟ್ಟರೆ ಇವತ್ತಿಗೂ ಇಲ್ಲಿ ಥೀಮ್‌ನ ಯಾವುದೇ ಲಕ್ಷಣಗಳಿಲ್ಲ.

ಇದು ಮಧುಪಂಡಿತನ ಅಸಾಧ್ಯ ಕಲೆಗಾರಿಕೆ ಮತ್ತು ಪ್ರಳಯಾಂತಕ ಬುದ್ಧಿಗೆ ಕೆಲ ಉದಾಹರಣೆಗಳಷ್ಟೇ. ದೇವನಹಳ್ಳಿ ಬಳಿ ಆಸ್ತಿ ದೆಹಲಿಯಲ್ಲಿ ಆಸ್ತಿ ಕಾವೇರಿ ನದಿ ತೀರದಲ್ಲಿ ಆಸ್ತಿ ಥೀಮ್‌ಪಾರ್ಕ್ ಹೆಸರಲ್ಲಿ ಆಸ್ತಿ.

ಇಷ್ಟೆಲ್ಲಕ್ಕೂ ಆತ ಬಳಸಿದ್ದು ಕೃಷ್ಣನ ಹೆಸರನ್ನು. ಇದು ನಿಷ್ಠಾವಂತ ಇಸ್ಕಾನ್ ಭಕ್ತರಿಗೆ ಅರ್ಥವಾಗುವ ಹೊತ್ತಿಗೆ ಇಸ್ಕಾನ್‌ನ ಹೆಸರು ಮತ್ತು ಕೃಷ್ಣ ದೇವಾಲಯವನ್ನು ತೋರಿಸಿ ಏನೇನು ದಂಧೆ ನಡೆಸಬಹುದೆಂಬುದನ್ನು ಮಧುಪಂಡಿತ ತೋರಿಸಿಕೊಟ್ಟಿದ್ದ.

ಸಾವಿರಾರು ಕೋಟಿ ರೂಪಾಯಿಗಳ ಇಂಥ ಇಸ್ಕಾನ್ ದಂಧೆಯ ಅಸಲೀ ಮರ್ಮ ಈಗ ಬಯಲಾಗಿದೆ.

ಗಾಂಧಿವಾದಿಯನ್ನು ತುಳಿದ ಕೋಮುವಾದಿ

ಭೂಸಿ ಬಾಬಾ!



ಭ್ರಷ್ಟಾಚಾರದ ವಿರುದ್ಧ ದನಿ ಎತ್ತಿದ್ದ ಅಣ್ಣಾ ಹಜಾರೆಯನ್ನು ಬದಿಗೆ ತಳ್ಳಿ ಬಾಬಾ ರಾಮದೇವನ ಕಪ್ಪುಹಣದ ವಿರುದ್ಧದ ಹೋರಾಟ ಸಡನ್ನಾಗಿ ನಾಟಕೀಯ ತಿರುವು ಪಡೆಯುತ್ತಿರುವುದರ ಹಿಂದೆ ಆರೆಸ್ಸೆಸ್ ಇರುವುದು ಈಗ ಗುಟ್ಟಾಗಿ ಉಳಿದಿಲ್ಲ. ಇಂತಹದೊಂದು ಚೆಡ್ಡಿಗಳ ಪ್ಲಾನ್ ಬಗ್ಗೆ 'ಲಂಕೇಶ್' 2011ರ ಏಪ್ರಿಲ್ 20 ಹಾಗೂ 27ರ ಸಂಚಿಕೆಯಲ್ಲೇ ಬರೆದು ಎಚ್ಚರಿಸಿತ್ತು. ಕಳೆದವಾರ ರಾಮಲೀಲಾ ಮೈದಾನದಿಂದ ಹೊರದಬ್ಬಿಸಿಕೊಂಡಿರುವ ಬಾಬಾ ರಾಮದೇವ್ ಈಗ ಹನ್ನೊಂದು ಸಾವಿರ ಶಸ್ತ್ರಸಜ್ಜಿತ ಸೈನಿಕರ ಪಡೆ ಕಟ್ಟುವುದಾಗಿ ಘೋಷಿಸಿದ್ದಾನೆ. ಖಂಡಿತಾ ಅಂತಹದೊಂದು ಪಡೆ ಆರೆಸ್ಸೆಸ್ ಕಾರ್ಯಕರ್ತರದ್ದೇ ಆಗಿರುತ್ತದೆ.

• ಪಾರ್ವತೀಶ ಮತ್ತು ಗೌರಿ ಲಂಕೇಶ್

ಕೊನೆಗೂ ಏನಾಗಬಾರದಿತ್ತೋ ಅದೇ ಆಗುತ್ತಿದೆ.

ಸ್ವತಂತ್ರ ಭಾರತದ ಇತಿಹಾಸದಲ್ಲೇ ಅಭೂತಪೂರ್ವವೆನ್ನಿಸುವಂತೆ ಸ್ಫೋಟಗೊಂಡಿದ್ದ ಭ್ರಷ್ಟಾಚಾರದ ವಿರುದ್ಧದ ಆಂದೋಲನ ಹಳ್ಳ ಹಿಡಿಯುವ ಎಲ್ಲಾ ಲಕ್ಷಣಗಳು ಈಗ ಕಾಣಿಸುತ್ತಿವೆ.

ಇದನ್ನು ಹಾಳುಮಾಡುತ್ತಿರುವವನು ಬೇರ್‍ಯಾರೂ ಅಲ್ಲ ಬಾಬಾ ರಾಮದೇವ್!

ಹಿರಿಯ ಗಾಂಧಿವಾದಿ ಅಣ್ಣಾ ಹಜಾರೆಯ ನಾಯಕತ್ವದಲ್ಲಿ ಕಳೆದ ಏಪ್ರಿಲ್ 5ರಂದು ಶುರುವಾಗಿದ್ದ ಹೋರಾಟವನ್ನೇ ಬಾಬಾ ರಾಮದೇವ್ ಈಗ ಹೈಜಾಕ್ ಮಾಡಲು ಹೊರಟಿದ್ದಾನೆ. ಅಣ್ಣಾ ಹಜಾರೆ ಆರಂಭಿಸಿದ್ದ ಹೋರಾಟಕ್ಕೆ ದೇಶಾದ್ಯಂತ ಲಕ್ಷಾಂತರ ಜನಸಾಮಾನ್ಯರು ಸ್ಪಂದಿಸಿದ್ದರು. ಹಲವು ಮಿತಿಗಳ ನಡುವೆಯೂ ಈ ಆಂದೋಲನ ಜಡ್ಡುಗಟ್ಟಿದ್ದ ವ್ಯವಸ್ಥೆಗೆ ಕೊಂಚ ಬಿಸಿ ಮುಟ್ಟಿಸುವಲ್ಲಿ ಯಶ ಕಂಡಿತ್ತು. ಮೀಡಿಯಾಗಳ ದಾಳಿಯಿಂದಲೂ ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಇಕ್ಕಟ್ಟಿಗೆ ಸಿಲುಕಿ ಕೊನೆಗೆ ಹಜಾರೆಯವರ ಎದುರು ಶರಣಾಗುವ ಪರಿಸ್ಥಿತಿ ಉದ್ಭವಿಸಿತ್ತು.

ಏಪ್ರಿಲ್ 5ರಂದು ಉಪವಾಸ ಕೂತ ಹಜಾರೆ ಏಪ್ರಿಲ್ 9ರಂದು ಮುಷ್ಕರ ಮುಗಿಸಿ ಏಳುವಾಗ 'ಜನ ಲೋಕಪಾಲ್ ಮಸೂದೆ' ರಚನೆ ಕುರಿತಂತೆ ಒಂದು ಕಾರ್ಯಸೂಚಿ ತಯಾರಾಗಿತ್ತು. ಸರ್ಕಾರದ ಹಾಗೂ ಹೋರಾಟಗಾರರ ಒಂದು ಜಂಟಿ ಸಮಿತಿಯೂ ರಚನೆಯಾಗಿ ಸರ್ಕಾರ ಗೆಜೆಟ್ ಪ್ರಕಟಣೆಯನ್ನು ಮಾಡಿತ್ತು. ಈ ಪ್ರಕ್ರಿಯೆಗಳು ಚಾಲೂ ಆಗಿ ಮುಂದಿನ ಆಗಸ್ಟ್ 15ರೊಳಗಾಗಿ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಜಾರಿಯಾಗುವುದು ಗ್ಯಾರಂಟಿ ಎನಿಸುತ್ತಿರುವಾಗಲೇ ಈ ಹೋರಾಟ ಬೇರೊಂದು ದಾರಿ ಹಿಡಿಯಬೇಕೆ!

ಎಲ್ಲೋ ಇದ್ದ ಬಾಬಾ ರಾಮದೇವ್ ದಿಢೀರೆಂದು



ಮುಂದೆ ನುಗ್ಗಿದ್ದಾನೆ. ಅಣ್ಣಾ ಹಜಾರೆಯವರನ್ನೂ ಸೈಲೆಂಟಾಗಿ ಮೂಲೆಗೆ ನೂಕಿ ತಾನೇ ಮೆರೆಯಲು ರೆಡಿಯಾಗಿ ನಿಂತಿದ್ದಾನೆ.

ಏನಿದರ ಮರ್ಮ?

ನೇರವಾಗಿ ಹೇಳಬೇಕೆಂದರೆ ಬಿಜೆಪಿ ಆರೆಸ್ಸೆಸ್‌ಗಳ Election Strategy. ಇದು. 2014ರ ಲೋಕಸಭಾ ಚುನಾವಣೆಗಳು ಬರುವಷ್ಟರಲ್ಲಿ ಆಳುವ ಕಾಂಗ್ರೆಸ್ ವಿರುದ್ಧ ಏನೇನು ಸಾಧ್ಯವೋ ಯಾವ್ಯಾವ ಮಾರ್ಗದ ಮೂಲಕವೋ ಅಂತೂ ಒಂದು ಜನಾಭಿಪ್ರಾಯ ರೂಪಿಸಲು ಮಾಡಿರುವ ಪ್ಲಾನಿನ ಒಂದು ಭಾಗವೇ ಬಾಬಾ ರಾಮದೇವನ ಪ್ರತಿಷ್ಠಾಪನೆ.

ಬಿಜೆಪಿಗೀಗ ಚೆನ್ನಾಗಿ ಅರ್ಥವಾಗಿರುವ ಸಂಗತಿ ಏನೆಂದರೆ ಹಿಂದೂತ್ವವಾಗಲಿ ಇಂಡಿಯಾ ಶೈನಿಂಗ್ ಎನ್ನುವ ಸ್ಲೋಗನ್ ಆಗಲಿ ತನಗೆ ಓಟು ತಂದುಕೊಡುವುದಿಲ್ಲ ಎಂಬುದು. ಹಾಗಾಗಿ ಜನಸಾಮಾನ್ಯರು ಒಪ್ಪಬಹುದಾದ ಪಾಪ್ಯುಲರ್ ಅಜೆಂಡಾ ಒಂದನ್ನು ಹಿಡಿದುಕೊಂಡು ತನಗಿರುವ ಕೋಮುವಾದಿಯೆಂಬ ಕುಖ್ಯಾತಿಯನ್ನು ಅದು ಕಳಚಿಕೊಳ್ಳಲು ಬಯಸಿದೆ. ಸದ್ಯಕ್ಕೆ ಕಾಂಗ್ರೆಸ್‌ನ್ನು ಹಣಿಯಲು 'ಭ್ರಷ್ಟಾಚಾರ'ದ ಇಷ್ಯೂವನ್ನು ಮುಂದೆ ಇಟ್ಟುಕೊಂಡು ಅದು ಹೊಸ ಆಟ ಶುರು ಮಾಡುತ್ತಿರುವುದು ಸ್ಪಷ್ಟವಾಗಿದೆ.

ಬಾಬಾ ರಾಮದೇವ್ ಚೆಡ್ಡಿಗಳ ಈ ಹಿಡನ್ ಅಜೆಂಡಾವನ್ನು ಜಾರಿ ಮಾಡಲು ಹೊರಟಿರುವ ಸೀಕ್ರೆಟ್ ಏಜೆಂಟ್ ಆಗಿದ್ದಾನೆ. ಕಾಂಗ್ರೆಸ್‌ನವರು ಭ್ರಷ್ಟರೆಂಬ ಬಗ್ಗೆ ಯಾರಿಗೂ ಅನುಮಾನಗಳಿಲ್ಲ ನಿಜ. ಅದೇರೀತಿ ಬಿಜೆಪಿಗಳೂ ಕಡುಭ್ರಷ್ಟರೆಂಬುದಂತೂ ಡೌಟೇ ಇಲ್ಲದಂತೆ ಸಾಬೀತಾಗುತ್ತಿದೆ. ಇಷ್ಟಕ್ಕೂ ಬಿಜೆಪಿ ಕ್ಯಾಂಪಿನ ಈ ಸೀಕ್ರೆಟ್ ಏಜೆಂಟ್ ರಾಮದೇವ್ ಎಂತವನು, ಇವನ ಹಿನ್ನೆಲೆಯೇನು? ಎಂದು ಹುಡುಕಿದರೆ ಇಂಟರೆಸ್ಟಿಂಗ್ ಆದ ಕತೆಗಳೇ ಸಿಗುತ್ತಿವೆ.

ಒಂದು ಸಾವಿರ ಕೋಟಿ ರೂಪಾಯಿಗೂ ಹೆಚ್ಚಿನ ಮೌಲ್ಯದ ಆಯುರ್ವೇದ ಔಷಧ ವ್ಯಾಪಾರ, ಸ್ವಂತಕ್ಕೊಂದು ಟಿವಿ ಚಾನೆಲ್, ವಿಹಾರಕ್ಕೆ ಯುರೋಪ್‌ನಲ್ಲೊಂದು ಐಲ್ಯಾಂಡ್, ಓಡಾಟಕ್ಕೆ ಸ್ವಂತ ವಿಮಾನ ಇಟ್ಟುಕೊಂಡಿರುವ ಬಾಬಾ ರಾಮ್‌ದೇವ್ ಎಲ್ಲಿ?

ತೊಡಲು ಎರಡು ಜೊತೆ ಖಾದಿ ಪಂಚೆ-ಜುಬ್ಬಾ ಹಾಸಲು ಸಿಂಗಲ್ ಚಾಪೆಯನ್ನಷ್ಟೇ ಹೊಂದಿರುವ ಗಾಂಧಿವಾದಿ ಅಣ್ಣಾ ಹಜಾರೆ ಎಲ್ಲಿ?

ಒಬ್ಬ ಬಿಲಿಯೇನರ್ ಆದರೆ ಇನ್ನೊಬ್ಬರು ಭಿಕಾರಿ ಎನ್ನುವಂತಿಲ್ಲವೇ? ಎತ್ತ ಕಡೆಯಿಂದ ಟೇಪ್ ಹಿಡಿದು ಅಳೆದರೂ, ಯಾವ ತಕ್ಕಡಿಯಲ್ಲಿಟ್ಟು ತೂಗಿದರೂ ವ್ಯಕ್ತಿತ್ವ-ಗುಣದಲ್ಲಿ ಬಾಬಾ ರಾಮದೇವ್ ಅಣ್ಣಾ ಹಜಾರೆಗಿಂತ ಹೆಚ್ಚು ತೂಗುವುದಿಲ್ಲ. ಹಾಗಿದ್ದಾಗಲೂ ರಾಮದೇವ್ ಈ ಭ್ರಷ್ಟಾಚಾರ ವಿರೋಧಿ, ಕಪ್ಪು ಹಣ ವಿರೋಧಿ ಚಳವಳಿ ಅಂತ ಚೀರಿಕೊಂಡ ತಕ್ಷಣ ದೇಶದ ನಾನಾ ಭಾಗಗಳಿಂದ ಆತನಿಗೆ ಜನ ಬೆಂಬಲ ಸಿಗುತ್ತಿದೆಯೆಂಬಂತೆ ಸೀನ್ ಕ್ರಿಯೇಟ್ ಮಾಡಲಾಗುತ್ತಿದೆ. ಕರ್ನಾಟಕದಲ್ಲಂತೂ ಇದುವರೆಗೂ ಅಡ್ರೆಸ್ಸೇ ಇರದಿದ್ದ ಯೋಗಪಟುಗಳು, ಲಾಗಾ ಹಾಕುವವರೆಲ್ಲ ಬೀದಿಗಿಳಿದಿದ್ದಾರೆ. ಪೇಜಾವರ ಸ್ವಾಮಿ, ಈಶ್ವರಪ್ಪ ಮುಂತಾದ



ಸ್ಕಾಟ್‌ಲ್ಯಾಂಡಿನ ದ್ವೀಪವನ್ನೇ ಕೊಂಡ ರಾಮದೇವ್

ಅಂತರರಾಷ್ಟ್ರೀಯ ಖ್ಯಾತಿ ಮತ್ತು ಕುಖ್ಯಾತಿಯನ್ನು ಮಾತ್ರವಲ್ಲ, ಅಪಾರ ಮೊತ್ತದ ಅಂತರರಾಷ್ಟ್ರೀಯ ಆಸ್ತಿಯನ್ನು ಗಳಿಸಿರುವ ಭಾರತೀಯ 'ಕಾವಿಗುರು'ಗಳಲ್ಲಿ ಬಾಬಾ ರಾಮದೇವ್ ಕೂಡ ಒಬ್ಬ!

ಇದಕ್ಕೆ ಕಳಸವಿಟ್ಟಂತೆ ಕಂಗೊಳಿಸುತ್ತಿರುವುದು ಕಳೆದ ವರ್ಷ ರಾಮದೇವನ ಪತಂಜಲಿ ಟ್ರಸ್ಟ್ ಖರೀದಿಸಿದ ಸ್ಕಾಟ್‌ಲ್ಯಾಂಡಿನ ಒಂದು ದ್ವೀಪ!!

ಸುಮಾರು 300 ಎಕರೆ ವಿಸ್ತೀರ್ಣದ ಈ ದ್ವೀಪವನ್ನು ಎರಡು ಮಿಲಿಯನ್ ಪೌಂಡ್‌ಗಳಿಗೆ (ಸುಮಾರು 12 ಕೋಟಿ ರೂಪಾಯಿಗಳು) ಖರೀದಿಸಿ ರಾಮದೇವನಿಗೆ ಉಡುಗೊರೆಯಾಗಿ ನೀಡಿದ್ದು ಪೊದ್ದರ್ ದಂಪತಿಗಳು.

ಸಾಮ್ ಪೊದ್ದರ್ ಎಂಬಾತ ಬಿಹಾರ್ ಮೂಲದವನಾಗಿದ್ದು ಆತನ ಪತ್ನಿ ಸುನೀತ ಪೊದ್ದರ್ ನೇಪಾಳಿ ಮೂಲದವಳು. ಇವರಿಬ್ಬರು ಈಗ ಬ್ರಿಟನ್ನಿನ ಪ್ರಜೆಗಳು. ಎರಡು ವರ್ಷಗಳ ಹಿಂದೆ ಸಂಭವಿಸಿದ ಜಾಗತಿಕ ಆರ್ಥಿಕ ಹಿಂಜರಿತದ ಸಂದರ್ಭದಲ್ಲಿ ಈ ದ್ವೀಪದ ಮಾಲೀಕ ಇದನ್ನು ಮಾರಲು ಮುಂದಾದ. ಶಂಖ ಆಕಾರದಲ್ಲಿರುವ ಈ ದ್ವೀಪದ ಹೆಸರು ಲಿಟ್ಲ್ ಕುಂಬ್ರೇ (ಗೇಲಿಕ್ ಭಾಷೆಯಲ್ಲಿ ಕುಂಬ್ರೇ ಪದದ ಅರ್ಥ ಆಶ್ರಯ ಅಥವಾ ಆಸರೆ) ಎಂದಾಗಿದ್ದು ಇಲ್ಲಿ 13 ನೇ ಶತಮಾನದಲ್ಲಿ ನಿರ್ಮಿಸಿದ ಒಂದು ಕೋಟೆ ಇದೆ. ಈ ಸುಂದರ ದ್ವೀಪವನ್ನು ರಾಮದೇವನ ಅನುಯಾಯಿಗಳಾದ ಪೊದ್ದರ್ ದಂಪತಿಗಳು ಖರೀದಿಸಿ ಈಗ ರಾಮದೇವನ ಪತಂಜಲಿ ಟ್ರಸ್ಟಿಗೆ ದಾನ ಮಾಡಿದ್ದಾರೆ.

ಈ ದ್ವೀಪವನ್ನೇ ರಾಮದೇವ್ ತನ್ನ ವಿದೇಶಿ ಕಾರ್ಯಾಚರಣೆಗೆ ನೆಲೆಯಾಗಿಸಲು ಉದ್ದೇಶಿಸಿದ್ದಾನೆ. ಇಲ್ಲೊಂದು ಐಷಾರಾಮಿ ಆರೋಗ್ಯ ಕೇಂದ್ರ ತಲೆ ಎತ್ತಲಿದೆ.


2009 ರ ಸೆಪ್ಟೆಂಬರ್ 28 ರಂದು ಸುಮಾರು ಒಂದು ಸಾವಿರ ಹಿಂಬಾಲಕರು ಮತ್ತು ಮಾಧ್ಯಮದವರೊಂದಿಗೆ ಈ ದ್ವೀಪಕ್ಕೆ ಆಗಮಿಸಿದ ರಾಮದೇವ್ ಅಲ್ಲೊಂದು ಹವನ ನಡೆಸಿದ್ದಲ್ಲದೆ, ಒಂದಿಷ್ಟು ಯೋಗಾಸನಗಳನ್ನು ಮಾಡುವ ಮೂಲಕ ತನ್ನ ಈ ದ್ವೀಪ ಸಾಮ್ರಾಜ್ಯವನ್ನು ಉದ್ಘಾಟಿಸಿದ್ದ.

"ಇದನ್ನು 'ಶಾಂತಿ ದ್ವೀಪ'ವನ್ನಾಗಿ ಪರಿವರ್ತಿಸುವುದು ನನ್ನ ಗುರಿ" ಎಂದಿದ್ದಾನೆ ರಾಮದೇವ್.

ಸ್ಕಾಟ್‌ಲ್ಯಾಂಡಿನ ಈ ದ್ವೀಪವಲ್ಲದೆ ಇಂದು ಅಮೆರಿಕದ ಹ್ಯೂಸ್ಟನ್ ರಾಜ್ಯದಲ್ಲಿ 95 ಎಕರೆ, ಕೆನಡಾದಲ್ಲೂ ಸುಮಾರಷ್ಟು ಭೂಮಿಯ ಒಡೆಯ ರಾಮದೇವ್. ಭಾರತದಲ್ಲಂತೂ ಆತನ ಕಬ್ಜಾದಲ್ಲಿ ಸಾವಿರಾರು ಎಕರೆ ಭೂಮಿ ಇದೆ.

ಚೆನ್ನಾಗಿ ಆಸನಗಳನ್ನು ಹಾಕುವ, ಪೆದ್ದುಪೆದ್ದು ಹೇಳಿಕೆಗಳನ್ನು ಕೊಡುವ ರಾಮದೇವ್ ಆ ಮೂಲಕವೇ ಒಂದು ಮಲ್ಟಿನ್ಯಾಷನಲ್ ಸಂಸ್ಥೆಯನ್ನು ಸ್ಥಾಪಿಸುತ್ತಾನೆಂದರೆ ಯಾರಿಗೇ ಆದರೂ ಆಚ್ಚರಿ ಆಗೇ ಆಗುತ್ತದೆ.





ರಾಮಲೀಲಾ ಮೈದಾನದ ಪೆಂಡಾಲ್‌ಗೆ ಬೆಂಕಿ ಹಾಕಲು ಸಂಘ ಪರಿವಾರ ಪ್ಲಾನ್ ಮಾಡಿತ್ತೆ?

ಇಂತದೊಂದು ಅನುಮಾನದ ಮಾತು ಈಗ ಕೇಳಿಬರುತ್ತಿದೆ.

ದೆಹಲಿಯ ರಾಮಲೀಲಾ ಮೈದಾನದಲ್ಲಿ ಉಪವಾಸ ಕುಳಿತಿದ್ದ ರಾಮದೇವನನ್ನು ಅವನ ಬೆಂಬಲಿಗರ ಸಮೇತ ಜೂನ್ 5 ರ ನಡುರಾತ್ರಿ ಅರೆಸ್ಟ್ ಮಾಡಿದರಲ್ಲ, ಅದೇ ದಿನ ರಾತ್ರಿ ಮೂರು ಗಂಟೆಗೆ ಪೆಂಡಾಲ್‌ಗೆ ಬೆಂಕಿ ಕೊಟ್ಟು ನಿರಶನ ನಿರತರಲ್ಲಿ ಕೆಲವು ಅಮಾಯಕರನ್ನು ಬಲಿಕೊಟ್ಟು, ನಂತರ ದೇಶಾದ್ಯಂತ ಗಲಭೆ ಎಬ್ಬಿಸುವ ಪ್ಲಾನೊಂದು ಇತ್ತೆಂದು ಹೇಳಲಾಗುತ್ತಿವೆ. ಹಾಗಾಗಿದ್ದಿದ್ದರೆ ಸಹಜವಾಗಿಯೇ ಅದರ ಆರೋಪ ಸರ್ಕಾರದ ಮೇಲೇ ಬರುತ್ತಿತ್ತು. ಅದನ್ನೇ ದೊಡ್ಡದು ಮಾಡಿಕೊಂಡು ಬಿಜೆಪಿಗಳು ದೇಶಾದ್ಯಂತ ಪ್ರತಿಭಟನೆ ಇತ್ಯಾದಿಗಳಿಗೆ ಕರೆ ನೀಡುವ ಯೋಚನೆ ಮಾಡಿದ್ದರು ಎನ್ನಲಾಗಿದೆ.

ಇದನ್ನು ಬರಿ ಕಲ್ಪನೆ ಎನ್ನಲಾಗದು.

ಏಕೆಂದರೆ ಈ ಹಿಂದೆ ಗುಜರಾತ್‌ನಲ್ಲೂ ಸಂಘ ಪರಿವಾರಿಗಳೇ ಕರಸೇವಕರಿದ್ದ ರೈಲಿಗೆ ಬೆಂಕಿ ಹಾಕಿ ಹಲವರನ್ನು ಬಲಿಕೊಟ್ಟು ನಂತರ ಅದನ್ನೇ ಮುಸ್ಲಿಮರ ವಿರುದ್ಧ ಆರೋಪ ಮಾಡಿ ಗುಜರಾತ್ ದಂಗೆ ನಡೆಸಿದ್ದರು. 2008 ರ ಕರ್ನಾಟಕ ವಿಧಾನಸಭಾ ಚುನಾವಣೆಯ ಸಮಯದಲ್ಲಿ ಹುಬ್ಬಳ್ಳಿ ಕೋರ್ಟ್‌ನಲ್ಲಿ ಬಾಂಬ್ ಸ್ಫೋಟಿಸಿ ಆತಂಕ ಸೃಷ್ಟಿಸಿದ್ದನ್ನು ನಾವು ನೋಡಿಲ್ಲವೆ.

ಅದಿರಲಿ, ದೆಹಲಿಯಲ್ಲಿ ರಾಮಲೀಲಾ ಮೈದಾನದಲ್ಲಿ ಇಂತಾದೊಂದು ಪಿತೂರಿ ನಡೆಯಬಹುದೆಂಬ ಅನುಮಾನ ಪೊಲೀಸರಿಗೂ ತ್ತು. ಹಾಗಾಗಿ ರಾತ್ರಿ ಎರಡೂವರೆಗೆ ಪೆಂಡಾಲ್‌ಗೆ ನುಗ್ಗಿ ಹೆಣ್ಣಿನ ಧರಿಸಿ ಓಡಿಹೋಗುತ್ತಿದ್ದ ಬಾಬಾನನ್ನು ಬಂಧಿಸಿ ಎಲ್ಲರನ್ನು ಆಚೆ ಕಳಿಸಿದರು ಎನ್ನಲಾಗಿದೆ.

...ಾರಿಗೇ ಈಗ 'ಬಾಬಾ ರಾಮ್‌ದೇವ್ ಕೀ ...ಎನ್ನುತ್ತಿರುವುದಂತೂ ಇನ್ನಷ್ಟು ಅನುಮಾನಗಳನ್ನು ...ಸುತ್ತಿದೆ.

...ಈಗ್ಗೆ ಕೆಲ ವರ್ಷಗಳ ಹಿಂದೆ ಗಣಪತಿ ಹಾಲುಕುಡಿದ ...ಹಬ್ಬಿಸಿದಾಗಲೂ ಇಂಥದ್ದೇ ವ್ಯವಸ್ಥಿತ ಪ್ರಚಾರ ...ತಲಾಗಿತ್ತು. ಆರೆಸ್ಸೆಸ್‌ನವರ ಪ್ಲಾನ್‌ಗಳು ಇರುವುದೇ ...!

ರಾಮದೇವನ ಪುರಾಣ

...ಹರಿಯಾಣದ ಅಲಿಪುರದ ರೈತ ಕುಟುಂಬದ ...ಕಿಶನ್ ಯಾದವನೇ ಈಗಿನ ಬಾಬಾ ರಾಮದೇವ್. ...ನೇ ಕ್ಲಾಸು ಓದಿ ಶಾಲೆ ಬಿಟ್ಟ ಕಿಶನ್ ಒಂದಷ್ಟು ...ಗ ಹಾಗೂ ಸಂಸ್ಕೃತ ಕಲಿತ. ಮುಂದೆ ಹರಿದ್ವಾರಕ್ಕೆ ...ಗಿ ಜನರಿಗೆ ಯೋಗ-ಲಾಗ ಎಲ್ಲಾ ಕಲಿಸತೊಡಗಿದ. ...ತ ಹಣ ಮಾಡಿಕೊಂಡು ಕೆಲವು ಟ್ರಸ್ಟ್‌ಗಳನ್ನೂ ...ಬಿಟ್ಟ. ಬೆಂಗಳೂರಿನ ವ್ಯಾಪಾರಿ ಧರ್ಮಗುರು ...ಶಂಕರ ಸುದರ್ಶನ ಕ್ರಿಯೆ ಕಲಿಸುವ ದಂಧೆ ಚಾಲು ...ತ್ತಿದರೆ ಬಾಬಾ ರಾಮದೇವ್ ಅಲಿಯಾಸ್ ...ಕಿಶನ್ ಪ್ರಾಣಾಯಾಮ ಕಲಿಸುತ್ತೇನೆಂದ. 1995ರ ...ಜನೂರಿಗೆ ಅವನ ಯೋಗ ಟಿವಿಯಲ್ಲಿ ...ಬರಾಗತೊಡಗಿತು. ಬಾಬಾ ಇನ್ನಷ್ಟು ಪಾಪ್ಯುಲರ್ ... ಯೋಗದ ಜೊತೆಗೆ ಆಗಾಗ್ಗೆ ಸಮಾಜಮೌಲ್ಯ ...ಲೂ ಮಾತು ಶುರುಮಾಡಿಕೊಂಡ. ಬಹುತೇಕ ... ಮಾತುಗಳು ಹಿಂದೂ ಸಂಸ್ಕೃತಿ-ಆಚಾರಗಳ ಬಗ್ಗೆಯೂ ಇರುತ್ತಿತ್ತಾದ್ದರಿಂದ ಹಿಂದೂ ಕೋಮುವಾದಿಗಳಿಗೆ ಆನಂದವಾಗಿ ಅವರೂ ಸಹ ರಾಮದೇವನ ಬೆನ್ನಿಗೆ ನಿಂತರು. 2003ರ ಜನವರಿಗೆ ಆಚಾರ್ಯ ಬಾಲಕೃಷ್ಣ ಎಂಬುವನೊಂದಿಗೆ ಸೇರಿ ಯೋಗ ಮಂದಿರ ಟ್ರಸ್ಟ್ ಎನ್ನುವ ಬ್ಯುಸಿನೆಸ್ ಶುರು ಮಾಡಿದ. ಆಸ್ತಾ ಟಿವಿ ಚಾನೆಲ್ ಆರಂಭಿಸಿ ತಾನೇ ಯೋಗದ ಲೈವ್ ಟೆಲಿಕಾಸ್ಟ್ ನಡೆಸತೊಡಗಿದ. ಈ ಆಸ್ತಾ ಟಿವಿ ಹಂಡ್ರೆಡ್ ಪರ್ಸೆಂಟ್ ದೇವರು-ಧರ್ಮದ ಕಾರ್ಯಕ್ರಮಗಳ ಚಾನೆಲ್ ಆಗಿ ಬೆಳೆಯಿತು. 2006ರ ಆಗಸ್ಟ್‌ನಲ್ಲಿ ರಾಮದೇವ್ ಪತಂಜಲಿ ಯೋಗ ಪೀಠ ಎನ್ನುವ ಇನ್ನೊಂದು ಅಂಗಡಿ ತೆರೆದ. ಉಪರಾಷ್ಟ್ರಪತಿಯಾಗಿದ್ದ ಬಿಜೆಪಿಯ ಬೈರೋನ್ ಸಿಂಗ್ ಶೇಖಾವತ್ ಖುದ್ದಾಗಿ ಬಂದು ಪೀಠ ಉದ್ಘಾಟಿಸಿದ್ದ. ಆಯುರ್ವೇದ ಹಾಗೂ ಯೋಗದ ಚಿಕಿತ್ಸೆ-ಸಂಶೋಧನೆ ಮತ್ತು ತರಬೇತಿಗಾಗಿ ಈ ಪೀಠ ಹುಟ್ಟಿದ್ದು. ಅದೇ ವೇಳೆಯಲ್ಲಿ ಉತ್ತರಖಂಡ್‌ನಲ್ಲಿ ಬಾಬಾನ ಪತಂಜಲಿ ಯೋಗ ಸಮಿತಿ ಎನ್ನುವ ಸಂಸ್ಥೆಗೆ ವಿಶ್ವವಿದ್ಯಾಲಯದ ಸ್ಥಾನಮಾನ ಕೊಡಲಾಯಿತು.

ತಮಾಷೆ ಅಂದರೆ ಅದಕ್ಕೆ ಅನುಮತಿ ಕೊಟ್ಟವನು ಎನ್.ಡಿ.ತಿವಾರಿ!

ಆಗಿನ ಕಾಂಗ್ರೆಸ್ ಮುಖ್ಯಮಂತ್ರಿ ಆತ!!

ಕೇವಲ ಹದಿನೈದು ವರ್ಷಗಳ ಹಿಂದೆ ಒಂದು ಸೈಕಲ್ ಮಾತ್ರ ಹೊಂದಿದ್ದ ರಾಮದೇವ್ ಈಗ ವಿಮಾನ ಇಟ್ಟುಕೊಂಡಿದ್ದಾನೆ. 1152 ಕೋಟಿ ರೂಪಾಯಿಗಳ ಘೋಷಿತ ಆಸ್ತಿ ಹೊಂದಿದ್ದಾನೆ ಮತ್ತು ಇದೇ ವ್ಯಕ್ತಿ ಈಗ ಬ್ಲ್ಯಾಕ್‌ಮನಿ ಬಗ್ಗೆ ಮಾತನಾಡುತ್ತಿದ್ದರೆ ಜೋಕ್ ಎನಿಸದೆ ಇದ್ದೀತಾ?



ಈ ಬಾಬಾನ ಆಯುರ್ವೇದ ಔಷಧ ವ್ಯಾಪಾರದ ಬಗ್ಗೆ ತರಹೇವಾರಿ ಕತೆಗಳಿವೆ. ಹಿಮಾಲಯದಲ್ಲಿ ಹಾಲಿ ಇರುವ ಎಲ್ಲಾ ಔಷಧೀಯ ಸಸ್ಯರಾಶಿಗಿಂತ ಹೆಚ್ಚಿನ ಆಯುರ್ವೇದ ಔಷಧಿಗಳನ್ನು ಬಾಬಾ ಉತ್ಪಾದಿಸುತ್ತಿದ್ದಾನೆ. ಇಂಡಿಯಾ ದೇಶದ ಎಲ್ಲಾ ದನಗಳು ನಿತ್ಯ ಸುರಿಸುವ ಗಂಜಲದ ಪ್ರಮಾಣಕ್ಕಿಂತ ಹೆಚ್ಚಿನ ಗಂಜಲಾಧಾರಿತ ಔಷಧವನ್ನು ಅವನು ರೆಡಿ ಮಾಡುತ್ತಿರುತ್ತಾನೆ.

'ನಾನು ಕ್ಯಾನ್ಸರು, ಏಡ್ಸ್ ಎಲ್ಲಾ ವಾಸಿ ಮಾಡ್ತೀನಿ' ಅನ್ನುವುದು ಇವನ ಚಾಳಿ.

ಉತ್ತರಾಖಂಡ್ ರಾಜ್ಯದಲ್ಲಿ ಬಿಜೆಪಿ ಆಡಳಿತ ಇದ್ದಾಗ ಬಾಬಾ ಬೇಗನೆ ಬೆಳೆದ. ಅಲ್ಲಿ ಅತ್ಯಂತ ಭ್ರಷ್ಟ ಆಡಳಿತ ನೀಡಿದ ಬಿಜೆಪಿ ನಾಯಕರು ಸರ್ಕಾರಿ ತಿಜೋರಿಯಿಂದ ಸಾವಿರಾರು ಕೋಟಿ ಕದ್ದರು. ಆಗೆಲ್ಲಾ ಬಾಬಾ ರಾಮದೇವ್ ಅಂಥವರ ಪಕ್ಕದಲ್ಲೇ ಇದ್ದ.


ಹೀಗೆ ವಾಮನನಾಗಿ ದೈತ್ಯಾಕಾರಿಯಾಗಿ ಬೆಳೆದು ಈಗ ಹೇಗಿದ್ದಾನೆ ಗೊತ್ತೇ?

ಹರಿದ್ವಾರದಲ್ಲಿರುವ ಪತಂಜಲಿ ಯೋಗ ಪೀಠದ ವಾರ್ಷಿಕ ಟರ್ನ್‌ಓವರ್ ಮೊತ್ತ ಒಂದು ಸಾವಿರ ಕೋಟಿ ರೂ.ಗಳು.

- ದೇಶಾದ್ಯಂತ ನಡೆಸುವ ಯೋಗ ಶಿಬಿರಗಳ ಉತ್ಪಾದನೆ 50 ಕೋಟಿ ರೂ.ನಷ್ಟಿದೆ.
- ಕೇವಲ ಔಷಧ ಮಾರಾಟದ ಬಾಬ್ತಿನಿಂದಲೇ 50 ಕೋಟಿ ರೂ.ಆದಾಯ.
- ಪುಸ್ತಕ-ಸಿಡಿ ಮಾರಾಟದಿಂದ ಸರಾಸರಿ 2.3 ಕೋಟಿ ವರಮಾನ.
- ಇನ್ನೂ ಇವನ ಆಸ್ತಿಪಾಸ್ತಿಗಳ ವಿಚಾರಕ್ಕೆ ಬಂದರೆ ಸ್ಕಾಟ್‌ಲ್ಯಾಂಡ್‌ನ ಸಮುದ್ರ ತೀರದಾಚೆ ಲಿಟಲ್ ಕ್ಯಾಂಬ್ರೆ ದ್ವೀಪದ ಮಾಲೀಕತ್ವ. ಮುನ್ನೂರು ಎಕರೆ ವಿಸ್ತೀರ್ಣದ ಇದರ ಬೆಲೆ 12 ಕೋಟಿ ರೂ. ಕೊಡಿಸಿದವರು ಪೋದಾರ್ ಫ್ಯಾಮಿಲಿಯವರು.
- ಹರಿದ್ವಾರದಲ್ಲಿ 1115 ಕೋಟಿ ರೂ. ಬೆಲೆಯ ಒಂದು ಸಾವಿರ ಎಕರೆ ಜಮೀನು.
- ಹರಿದ್ವಾರದಲ್ಲಿ ಒಂದು ಫುಡ್‌ಪಾರ್ಕ್ ಯೋಜನೆಗೆ 500 ಕೋಟಿ ರೂ. ಬಂಡವಾಳ ಹೂಡಿಕೆ.
- ಜಾರ್ಖಂಡ್ ರಾಜ್ಯದಲ್ಲಿನ ಒಂದು ಫುಡ್‌ಪಾರ್ಕ್ ಯೋಜನೆಯಲ್ಲಿ 44 ಕೋಟಿ ರೂ. ಬಂಡವಾಳ ತೊಡಗಿಸಿ ಆ ಕಂಪೆನಿಯ ಶೇ. 40ರಷ್ಟು ಷೇರು ಖರೀದಿ.
- ಹರಿದ್ವಾರದಲ್ಲಿ ಪತಂಜಲಿ ವಿಶ್ವವಿದ್ಯಾಲಯದ ಮಾಲೀಕ, ಮೌಲ್ಯ 100 ಕೋಟಿ ರೂ. ಅಲ್ಲದೆ ಈ ... ಗೆ ರಾಮದೇವನೇ ಅಜೀವ ಕುಲಪತಿ.
- ಹಿಮಾಚಲ ಪ್ರದೇಶದ ಸೋಲನ್‌ನಲ್ಲಿ 38 ...ರೆ ಭೂಮಿ ಇದೆ. ಇದರ ಮಾರ್ಕೆಟ್ ರೇಟ್ ...0

(ಮುಂದಿನ ಪು...)

ಆಯುರ್ವೇದ ಔಷಧಗಳಲ್ಲಿ ಮನುಷ್ಯ-ಪ್ರಾಣಿಗಳ ಮಾಂಸ ಬಳಕೆ



ಬಾಬಾ ರಾಮದೇವ್ ಆಯುರ್ವೇದ ಪಂಡಿತನೋ ಇಲ್ಲ ಅಘೋರಿಯೋ ಎನ್ನುವ ಅನುಮಾನ ಬರುವಂತಹ ಘಟನೆಗಳು ಈಗ ಬೆಳಕಿಗೆ ಬರುತ್ತಿವೆ. ಬಾಬಾನ ದಿವ್ಯ ಫಾರ್ಮಸಿ ಈಗ ಇಂಡಿಯಾದ ಹೆಸರುವಾಸಿ ಆಯುರ್ವೇದ ಔಷಧ ತಯಾರಕ ಕಂಪನಿಯಾಗಿದೆ. ಈ ಕಂಪನಿಯ ಕೆಲ ನೌಕರರು ಒಮ್ಮೆ ಔಷಧ ತಯಾರಿಕೆಯಲ್ಲಿ ಬಾಬಾ ಮನುಷ್ಯರ ಹಾಗೂ ಪ್ರಾಣಿಗಳ ಮೂಳೆ-ಮಾಂಸ ಬಳಸುತ್ತಿದ್ದಾನೆಂದು ಆರೋಪಿಸಿದರು. ನಂತರ ಆ ಬಗ್ಗೆ ತನಿಖೆಯೂ ಆಯಿತು. ಕುಲ್ಯ ಭಸಂ (ಭಸ್ಮ) ಹಾಗೂ ಯೌವ್ವನ ಮೃತಿ ವಟಿ ಎಂಬ ಔಷಧಗಳನ್ನು ಬಾಬಾನ ಬ್ರಹ್ಮಕಲ್ಪ ಚಿಕಿತ್ಸಾಲಯದಿಂದಲೇ ಖರೀದಿಸಿ ಪ್ರಯೋಗಾಲಯಕ್ಕೆ ಕಳಿಸಲಾಯಿತು. ಸಿಪಿಎಂನ ಪಾಲಿಟ್‌ಬ್ಯೂರೋ ಸದಸ್ಯೆ ಬೃಂದಾ ಕಾರಟ್ ಈ ಔಷಧ ಖರೀದಿಸಿ ರಸೀದಿ ಇತ್ಯಾದಿ ದಾಖಲೆ ಇಟ್ಟುಕೊಂಡು ಔಷಧಗಳನ್ನು ಲ್ಯಾಬಿಗೆ ಕಳುಹಿಸಿದ್ದರು. ಜೊತೆಗೆ ಕೇಂದ್ರ ಸರ್ಕಾರದ ಆರೋಗ್ಯ ಇಲಾಖೆಯೂ ಇದನ್ನು ಪರಿಶೀಲಿಸಿ ಬಾಬಾನ ಔಷಧಗಳಲ್ಲಿ ಪ್ರಾಣಿ ಜನ್ಯ ಹಾಗೂ ಮನುಷ್ಯರ ಡಿಎನ್‌ಎ ಅಂಶಗಳು ಇರುವುದನ್ನು ದೃಢಪಡಿಸಿತ್ತು.

ಈ ಬಾಬಾ ಮನುಷ್ಯರ ತಲೆಬುರುಡೆ ಮೂಳೆಗಳು ಹಾಗೂ ಪ್ರಾಣಿಗಳ ಮೂಳೆ-ಮಜ್ಜೆಯನ್ನು ಔಷಧದೊಳಗೆ ಬೆರೆಸುತ್ತಿರುವುದು ಕೊನೆಗೂ ಸಾಬೀತಾಯಿತು.

ಆದರೆ ವಿಶ್ವಹಿಂದೂ ಪರಿಷತ್ ಹಾಗೂ ಆರ್‌ಎಸ್‌ಎಸ್‌ನವರು ತಕ್ಷಣ ಬಾಬಾನ ಬೆಂಬಲಕ್ಕೆ ಬಂದರು.

ಬಾಬಾರನ್ನು ಟೀಕಿಸಿದವರು ಹಿಂದೂ ವಿರೋಧಿಗಳು, ದೇಶದ್ರೋಹಿಗಳೆಂದು ಚೀರಿಕೊಂಡು ತಮ್ಮ ಮಾಮೂಲಿ ವರಸೆ ತೆಗೆದರು.

...ಮಪ್ಪಟ್ಟಾ ಕೇ ಪೀಚೆ ಮೂಂಛ್!

...ಎರಡೂವರೆ ಶತಮಾನಗಳ ಹಿಂದೆ ಬ್ರಿಟನ್ನಿನ ಸಾಮ್ರಾಜ್ಯದ ವಿರುದ್ಧ ...ಟ್‌ಲ್ಯಾಂಡಿನ ರಾಜವಂಶಗಳು ದಂಗೆ ಎದ್ದಾಗ ಅದರ ನೇತೃತ್ವವನ್ನು ...ಸಿಕೊಂಡವನು ಸ್ಟೂವರ್ಟ್ ರಾಜಮನೆತನದ ರಾಜಕುಮಾರ ಬೋನಿ ...ನ್ಸ್ ಚಾರ್ಲಿ.

... ಯುದ್ಧದ ಆರಂಭದಲ್ಲಿ ಚಾರ್ಲಿ ಹಲವು ಪ್ರದೇಶಗಳಲ್ಲಿ ಜಯ ...ಧಿಸಿದನಾದರೂ ಬ್ರಿಟನ್ನಿನ ಸೈನ್ಯ ಬಲಿಷ್ಠವಾಗಿದ್ದರಿಂದ ಆತ ಕೊನೆಗೆ ...ದ್ಧ ಭೂಮಿಯಿಂದಲೇ ಓಡಿಹೋದ. ಅಷ್ಟೇ ಅಲ್ಲ, ಆದಾದ ಬಹಳ ... ಬ್ರಿಟನ್ನಿನ ಸೈನಿಕರಿಂದ ತಪ್ಪಿಸಿಕೊಳ್ಳಲು ಚಾರ್ಲಿ ಬಹಳ ದಿನ ...ಹಿಳೆಯರ ಉಡುಪು ಧರಿಸುತ್ತಿದ್ದ.

... ಇತ್ತೀಚೆಗೆ ಅದೇ ಚಾರ್ಲಿಯ ಸ್ಕಾಟ್‌ಲ್ಯಾಂಡ್ ಹತ್ತಿರದ ದ್ವೀಪವನ್ನು ...ರೀದಿಸಿರುವ ರಾಮದೇವ್ ಮೇಲೆ ಚಾರ್ಲಿಯ ಪ್ರಭಾವ ಬೀರಿರಬೇಕು. ...ಶ್ಯೇ ಈತ ಕೂಡ ಮೊನ್ನೆ ಪೊಲೀಸರಿಂದ ತಪ್ಪಿಸಿಕೊಳ್ಳಲು ಸತ್ಯಾಗ್ರಹದಂತಹ ...ತಿಕ ಯುದ್ಧ' ಭೂಮಿಯಿಂದ ಮಹಿಳಾ ವೇಷದಲ್ಲಿ ಪರಾರಿಯಾಗಲು ...ತ್ನಿಸಿದ. ಅವತ್ತು ನಡೆದದ್ದೆಲ್ಲ ಮಜವಾಗಿರುವುದರಿಂದ ಇಲ್ಲಿ ವಿವರವಾಗಿ ...ಖಲಿಸುತ್ತಿದ್ದೇವೆ.

... ರಾಮಲೀಲಾ ಮೈದಾನದಿಂದ ರಾಮಕಿಷನ್ ಯಾದವ್ ಅಲಿಯಾಸ್ ...ಮದೇವ್‌ನನ್ನು 'ಕರೆದುಕೊಂಡು' ಹೋಗಲು ಮಧ್ಯರಾತ್ರಿ ಬಂದ ...ಲೀಸರು ಆತನನ್ನು ಎಬ್ಬಿಸಿ "ನಿಮ್ಮ ಜೀವಕ್ಕೆ ಬೆದರಿಕೆ ಇದೆ. ...ಹ್ಹಿಂದ ನೀವು ನಮ್ಮೊಂದಿಗೆ ಬನ್ನಿ" ಎಂದರು. ಅದನ್ನು ಕೇಳಿದ ...ಮದೇವ್ ಸುಮ್ಮನಿರಲಿಲ್ಲ, ಹೋರಾಟ ನಿರತ ಇತರೆ ಸತ್ಯಾಗ್ರಹಿಗಳಂತೆ ...ಟ್ಟುಬಿಡದೆ ಕೂರಲಿಲ್ಲ, ಬದಲಾಗಿ ರಾಮದೇವ್ ಆರಡಿ ಎತ್ತರದ ...ಜಿನಿಂದ ಜಿಂಗ್ ಎಂದು ಮಂಗನಂತೆ ಹಾರಿದ. ಅದೂ ಮಹಿಳೆಯರಿದ್ದ ...ಂಪೊಳಗೆ.

...! ಸ್ಟೇಜಿನ ಹಿಂಬದಿ ಒಂದು ಪುಟ್ಟ ಕೊಠಡಿಯನ್ನು ನಿರ್ಮಿಸಲಾಗಿತ್ತು ... ಕೊಠಡಿ ಒಳಗಿನಿಂದಲೇ ರಾಮದೇವ್ ಮತ್ತು ಸರ್ಕಾರದ ನಡುವೆ ಫೋನ್ ಮೂಲಕ ಚರ್ಚೆಗಳು ನಡೆಯುತ್ತಿದ್ದದ್ದು. ಹೀಗೆ ಸ್ಟೇಜಿನಿಂದ ಹಾರಿದ ರಾಮದೇವ್ ಮಹಿಳೆಯರ ರಕ್ಷಣೆಯಲ್ಲಿ ಆ ಕೊಠಡಿಯನ್ನು ಪ್ರವೇಶಿಸಿ ಅಲ್ಲಿ ಸುಮಾರು ಎರಡು ಗಂಟೆ ಕಾಲ ಅವಿತುಕೊಂಡು ಕುಳಿತ.

ಅಷ್ಟು ಹೊತ್ತಿಗೆ ಹೊರಗಿದ್ದ ಪೊಲೀಸರು ತಮ್ಮ ಕಾರ್ಯಾಚರಣೆಯನ್ನು ಮುಗಿಸಿದ್ದರು. ಮಾತ್ರವಲ್ಲ ಗಾಯಗೊಂಡವರನ್ನು ಕರೆದುಕೊಂಡು ಆಸ್ಪತ್ರೆಗೆ ದಾಖಲಾರಂಭಿಸಿದ್ದರು.



ಇಲ್ಲಿಯತನಕ ತಾನು ಓರ್ವ ಸನ್ಯಾಸಿ ಆಗಿರುವುದರಿಂದ ತಾನು ಹೊಲಿಗೆ ಹಾಕಿರುವ ಉಡುಪುಗಳನ್ನು ಧರಿಸುವುದಿಲ್ಲ ಎಂದೇ ರಾಮದೇವ್ ಹೇಳುತ್ತಿದ್ದ. ಆದರೆ ಅವತ್ತು ಆ ಕೊಠಡಿಯಲ್ಲಿದ್ದ ತನ್ನ ಹಿಂಬಾಲಕಿಯೊಬ್ಬಳಿಂದ ಸಲ್ವಾರ್ ಕಮೀಜ್ ಮತ್ತು ದುಪಟ್ಟಾವನ್ನು ಪಡೆದು ಅದನ್ನು ಧರಿಸಿದ. ಮುಖ ತುಂಬ ದಟ್ಟವಾದ ಗಡ್ಡ ಮೀಸೆ ಹೊಂದಿರುವ ರಾಮದೇವ್ ತಾನು ಇಂತಹ ವೇಷದಲ್ಲಿ ತಪ್ಪಿಸಿಕೊಳ್ಳಬಹುದು ಎಂದು ಹೇಗೆ ಭಾವಿಸಿದನೋ ಆ ರಾಮದೇವನೇ ಬಲ್ಲ!

ಹೀಗೆ ಸಲ್ವಾರ್ ಕಮೀಜ್ ತೊಟ್ಟ ರಾಮದೇವ್ ತಾನೋರ್ವ ಗಾಯಗೊಂಡಿರುವ ಮಹಿಳೆಯಂತೆ ಇಬ್ಬರು ಮಹಿಳೆಯರ ಹೆಗಲ ಮೇಲೆ ಕೈಯಿಟ್ಟು ಕುಂಟುತ್ತಾ ರಾಮಲೀಲಾ ಮೈದಾನದಿಂದ ಹೊರಟ.

ಈ ಮೂವರು 'ಮಹಿಳೆ'ಯರ ಪಾಡನ್ನು ನೋಡಿ ಮರುಗಿದ ಇಬ್ಬರು ಪೊಲೀಸರು ಅವರನ್ನು ತಡೆದು ಹತ್ತಿರದಲ್ಲೇ ನಿಂತಿದ್ದ ಆಂಬ್ಯುಲೆನ್ಸ್ ಅನ್ನು ಹತ್ತಬೇಕೆಂದೂ, ಅವರನ್ನು ತಾವೇ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತೇವೆಂದ... ವಿನಂತಿಸಿಕೊಂಡರು. ಆದರೆ ಅವರ ಮಾತನ್ನು ಕೇಳಿಸಿಕೊಳ್ಳದ ಆ ಮೂವರು ಇನ್ನೂ ವೇಗವಾಗಿ ನಡೆಯಲಾರಂಭಿಸಿದರು. ಇದನ್ನು ಕಂಡು ಚಕಿತರಾ... ಪೊಲೀಸರು ಅವರನ್ನು ಬಲವಂತವಾಗಿ ಆಂಬ್ಯುಲೆನ್ಸ್‌ಗೆ ಹತ್ತಿಸಲು ನೋಡಿದ...


ಆಗ ಆ ಮೂವರು ಮಹಿಳೆಯರ 'ಗಾಯಗೊಂಡಿದ್ದ' ಮಧ್ಯದವಳು ತನ್ನ ಅಕ್ಕಪಕ್ಕದವರ... ತೊರೆದು ಇದ್ದಕ್ಕಿದ್ದಂತೆ ಪಿ.ಟಿ. ಉಷಾ ತರ... ಓಡಲಾರಂಭಿಸಿದಳು. ಇದರಲ್ಲೇನೋ ಮಸಲತ್ತಿದೆ ಎಂ... ಆ ಪೊಲೀಸರೂ ಅವಳ ಬೆನ್ನು ಹತ್ತಿ ಓಡಿದ... ಎದುಸಿರು ಬಿಡುತ್ತಾ 'ಆಕೆ'ಯನ್ನು ತಡೆದು ಅ... ಮುಖಮುಚ್ಚಿದ ದುಪಟ್ಟಾವನ್ನು ಕಿತ್ತೊಗೆದಾಗ ಅದರ... ಇದ್ದ ಕಪ್ಪುಬಣ್ಣದ ಗಡ್ಡ ಮೀಸೆ ಕಂಡು ಪೊಲೀಸರಿ... ನಗಬೇಕೋ, ಆತನನ್ನು ಹಿಡಿದಿದ್ದಕ್ಕೆ ಸಂಭ್ರಮಿಸಬೇಕೋ ಒಂದು ಕ್ಷಣ ತೋಚಲಿಲ್ಲ.

"ನಮ್ಮ ಕಣ್ಣನ್ನು ನಾವು ನಂಬಲಾಗಲಿಲ್ಲ. ರಾಮದೇವ್ ಸಲ್ವಾರ್ ಕಮೀಜ್ ತೊಟ್ಟಿದ್ದ!" ಎಂದು ದೆಹಲಿಯ ವಿಶೇಷ ಕಮೀಷನರ್ ಧರ್ಮೇಂದ್ರ ಕುಮಾರ್ ಉದ್ಗಾರವೆತ್ತಿದರು.

ಇತ್ತೀಚೆಗೆ ಮಂಗಳೂರಿನಲ್ಲಿ ಯೋಗ ಶಿಬಿರ ನಡೆಸಿದ ರಾಮದೇವ್ ಅಲ್ಲಿನ ಜನರಿಗೆ "ಕೋಳಿ ಮೊಟ್ಟೆ ತಿನ್ನುತ್ತೀರಾ? ಅದು ಕೋಳಿಯ ಗುದದ್ವಾರದಿಂದ ಬರುತ್ತೆ ಛೀ" ಎಂದಿದ್ದ. ಆಗ ನಾವು "ಹಾಗಾದರೆ ನೀನು ಹುಟ್ಟಿದ್ದು ಎಲ್ಲಿಂದ?" ಎಂದು ಪ್ರಶ್ನಿಸಿದ್ದೆವು.

ಈಗ ಅದೇ ರಾಮದೇವ್ ಮಹಿಳಾ ಉಡುಪು ಧರಿಸಿ ಪರಾರಿಯಾಗಲು ಯತ್ನಿಸಿ ಸಿಕ್ಕಿಬಿದ್ದಿದ್ದಾನೆ. ಆದರೆ ಈಗ ಮಾತ್ರ "ಮಹಿಳೆಯ ಉಡುಪು ಧರಿಸುವುದು ತಪ್ಪಲ್ಲ, ಅವರೇ ಜನ್ಮ ನೀಡುವವರು" ಎಂದಿದ್ದಾನೆ.

ಇಂತಹ ಹುಚ್ಚನನ್ನು ಹೆದ್ದ ಶಿಖಾಮಣಿಗಳು ಮಾತ್ರ ಬೆಂಬಲಿಸಲು ಸಾಧ್ಯ!



(ಹಿಂದಿನ ಪುಟದಿಂದ)

ಕೋಟಿಯಾದರೂ ಸುಳ್ಳು ಲೆಕ್ಕ ತೋರಿಸಿ 10 ಲಕ್ಷ ರೂ.ಗೆ ರಿಜಿಸ್ಟರ್ ಮಾಡಿಸಿದ್ದಾನೆ.

ಮಗುವಿನಂತೆ ಕಾಣುವ ಅಣ್ಣಾ ಹಜಾರೆಯವರೊಂದಿಗೆ ಈತನನ್ನು ಈಗ ಇನ್ನೊಮ್ಮೆ ಹೋಲಿಸಿ ನೋಡಿ ಬ್ಯಾಂಕ್ ಅಕೌಂಟಿನಲ್ಲಿ ಹತ್ತು ಸಾವಿರ ರೂಪಾಯಿಯನ್ನೂ ಇಟ್ಟುಕೊಂಡಿರದ ಅಣ್ಣಾ ಹಜಾರೆಯವರೆಲ್ಲಿ?

ಈ ಖದೀಮ ಆರೆಸ್ಸೆಸ್ ಏಜೆಂಟ್ ಎಲ್ಲಿ?

ಬಾಬಾನ ಬ್ಲಾಕ್ ಮನಿ

ಈಗ್ಗೆ ನಾಲ್ಕಾರು ದಿನಗಳ ಹಿಂದೆ ಮ್ಯಾಗ್ಸೆಸೆ ಪ್ರಶಸ್ತಿ ವಿಜೇತ ಸಾಮಾಜಿಕ ಕಾರ್ಯಕರ್ತ ಸಂದೀಪ್ ಪಾಂಡೆ ಈ ರಾಮದೇವನ ಕಾಳದಂಧೆಗಳ ಬಗ್ಗೆ ಹೈದರಾಬಾದ್‌ನಲ್ಲಿ ಬಹಿರಂಗ ಹೇಳಿಕೆ ನೀಡಿದರು.

"ಇಂಡಿಯಾದಲ್ಲಿ ಬ್ಲಾಕ್ ಮನಿ ಬಾಬಾಗಳು, ಸ್ವಾಮಿಗಳು, ಮಠಾಧೀಶರ ಹತ್ತಿರವೇ ಜಾಸ್ತಿ ಇದೆ. ಬಾಬಾ ರಾಮದೇವ ಇಂಥವರ ವಿರುದ್ಧವೇ. ಯಾಕೆ ಮೊದಲ ಹೋರಾಟ ಶುರು ಮಾಡಬಾರದು?" ಎಂದಿದ್ದಾರೆ ಪಾಂಡೆ.

ಇದು ನಿಜವೂ ಹೌದು.

ಸ್ವತಃ ರಾಮದೇವನ ಹತ್ತಿರ ಶೇಖರಗೊಳ್ಳುತ್ತಿರುವ ಹಣ ಸಾವಿರಾರು ಕೋಟಿ ರೂಪಾಯಿಗಳ ಬಂಡವಾಳವು ಕಪ್ಪುಹಣವೇ ಆಗಿದೆ. ಆದರೆ ರಾಮದೇವ್ ಇದರ ಬಗ್ಗೆ ಮಾತೇ ಆಡುವುದಿಲ್ಲ. ಆದಾಯ ತೆರಿಗೆ ಅಧಿಕಾರಿಗಳ ಪ್ರಕಾರ ರಾಮದೇವ್ ಮತ್ತವನ ಗುಂಪು ಹತ್ತಿರತ್ತಿರ ಇನ್ನೂರು ಖಾಸಗಿ ಕಂಪೆನಿಗಳಲ್ಲಿ ಬಂಡವಾಳ ಹೂಡಿದ್ದಾರೆ. ರಾಮದೇವನ ಬಲಗೈ ಬಂಟ ಆಚಾರ್ಯ ಬಾಲಕೃಷ್ಣನೊಬ್ಬನೇ ಮೂವತ್ನಾಲ್ಕು ಕಂಪೆನಿಗಳಿಗೆ ಡೈರೆಕ್ಟರ್ ಆಗಿದ್ದಾನೆ.

ಔಷಧದಲ್ಲಿ ಮಾಂಸ ಬೆರೆಸುತ್ತಾನೆ!

ಕಪ್ಪುಹಣದ ವಿರುದ್ಧ ಹೋರಾಡುವ, ನ್ಯಾಯ ನಿಜಾಯಿತಿಗಳ ಬಗ್ಗೆ ಮಾತನಾಡುತ್ತಿರುವ ರಾಮದೇವನ ಕತೆ ಇಷ್ಟಕ್ಕೇ ಮುಗಿಯುವುದಿಲ್ಲ.

ಇವನಿಗೆ ನಮ್ಮ ದೇಶದ ಕಾಯ್ದೆ ಕಾನೂನುಗಳು ಲೆಕ್ಕಕ್ಕೆ ಇಲ್ಲ. 2005ರಲ್ಲಿ ಒಮ್ಮೆ ಹರಿದ್ವಾರದ ಇವನ ದಿವ್ಯಯೋಗ ಮಂದಿರ ಟ್ರಸ್ಟಿನ 113 ಮಂದಿ ನೌಕರರು ಕನಿಷ್ಠ ವೇತನ ಕೇಳಿ ಪ್ರತಿಭಟನೆ ಶುರು ಮಾಡಿದ್ದರು. ಈ ನೌಕರರಿಗೆ ಪ್ರಾವಿಡೆಂಟ್ ಫಂಡ್ ಆಗಲಿ ಇನ್ಸೂರೆನ್ಸ್ ಆಗಲಿ ಬಾಬಾ ಕೊಟ್ಟಿರಲಿಲ್ಲ. ಕೊನೆಗೆ ನೌಕರರೊಂದಿಗೆ ಬಾಬಾ ಒಂದು ಒಪ್ಪಂದ ಮಾಡಿಕೊಂಡನಾದರೂ ಅದು ಜಾರಿಯಾಗಲಿಲ್ಲ. ಬದಲಾಗಿ ಕಾರ್ಮಿಕ ನಾಯಕರನ್ನೂ ಕೆಲಸದಿಂದ ಕಿತ್ತು ಹಾಕಿಬಿಟ್ಟ. ಕೊನೆಗೆ ಗೊತ್ತಾಗಿದ್ದೇನೆಂದರೆ ಬಾಬಾನ ದಿವ್ಯ ಫಾರ್ಮಸಿಯ ಆಯುರ್ವೇದ ಔಷಧಿಗಳಲ್ಲಿ ಮನುಷ್ಯರ ಹಾಗೂ ಪ್ರಾಣಿಗಳ ಮೂಳೆಗಳನ್ನು ಬಾಬಾ ಬಳಸುತ್ತಿದ್ದನೆಂಬುದು (ಬಾಕ್ಸ್ ನೋಡಿ). ಇದು ವಿವಾದವಾದಾಗ ಬಾಬಾ ಹಿಂದೂತ್ವವಾದಿಗಳ ನೆರವು ಪಡೆದು ತನ್ನ ಟೀಕಾಕಾರರ ವಿರುದ್ಧ ಛೂಬಿಟ್ಟ.

ಭಯಾನಕ ಸಂಗತಿ ಏನೆಂದರೆ ಬಾಬಾ ಮೂರ್ಛೆರೋಗ (ಎಪಿಲೆಪ್ಸಿ) ಪೀಡಿತರಿಗೆ ಔಷಧವೆಂದು ಮನುಷ್ಯರ ತಲೆಬುರುಡೆಗಳನ್ನು ಕುಟ್ಟಿ ಪುಡಿ ಮಾಡಿಬೆರೆಸಿದ ಎಂತದ್ದೋ ಆಯುರ್ವೇದ ಔಷಧ ತಯಾರಿಸಿ ಮಾರುತ್ತಾನೆ. ಲೈಂಗಿಕ ರೋಗಗಳಿಗೂ ತನ್ನಲ್ಲಿ ಮದ್ದಿದೆ ಎಂದೆನ್ನುತ್ತಾ ಪ್ರಾಣಿಗಳ ವೃಷಣಗಳನ್ನು ಒಣಗಿಸಿ ಪುಡಿ ಮಾಡಿ ಬೆರೆಸಿದ ಔಷಧ ಮಾರುತ್ತಿದ್ದಾನೆ.

ಆಯೂಶ್(Ayush) ಎನ್ನುವ ಆಯುರ್ವೇದ-ಯೋಗ, ಯುನಾನಿ, ಸಿದ್ಧಿ ಹೋಮಿಯೋಪತಿ ಪದ್ಧತಿಗಳಿಗಾಗಿನ ಒಂದು ಸರ್ಕಾರಿ ಸಂಸ್ಥೆಯು ಬಾಬಾನ ಔಷಧಗಳ ಸ್ಯಾಂಪಲ್‌ಗಳನ್ನು ಪರಿಶೀಲಿಸಿದೆ. ಒಮ್ಮೆ ಆಯುರ್ವೇದ ಹಾಗೂ ಸಿದ್ಧಿ ಔಷಧಗಳ ಸಂಶೋಧನೆಯ ಸೆಂಟ್ರಲ್ ಕೌನ್ಸಿಲ್‌ನ ಡೈರೆಕ್ಟರಿಗೂ ಈ ಸ್ಯಾಂಪಲ್‌ಗಳನ್ನು ಕಳುಹಿಸಿದಾಗ ಮನುಷ್ಯರ ಹಾಗೂ ಪ್ರಾಣಿಗಳ ಮೂಳೆಗಳ ಅಂಶ(ಡಿಎನ್‌ಎ) ಪತ್ತೆಯಾಗಿತ್ತು.

"ಇದೇನಯ್ಯ ನಿನ್ನ ವ್ಯವಹಾರ?"

ಅಂತ ಕೇಳಿದವರಿಗೆ ರಾಮದೇವನ ಬಂಟನೊಬ್ಬ "ಹಿಂದೂ ಶಾಸ್ತ್ರಗಳಲ್ಲಿ ಪ್ರಾಣಿ ಮಾಂಸ ಬಳಕೆಗೆ ನಿಷೇಧವೇನೂ ಇಲ್ಲ" ಎಂದಿದ್ದ. ಇನ್ನೊಬ್ಬ "ಆಯುರ್ವೇದದ ಭೈಶಜ್ಯ ರತ್ನಾವಳಿ ಕೃತಿಯಲ್ಲಿ ಅಲ್ಸರ್ ಕಾಯಿಲೆಗೆ ಮನುಷ್ಯನ ತಲೆಬುರುಡೆಯ ಪುಡಿ ಹಾಗೂ ಗೋಮೂತ್ರ ಬೆರೆಸಿದ ಔಷಧಿ ಉತ್ತಮ ಚಿಕಿತ್ಸೆ ಎಂದು ಹೇಳಿದೆ" ಎಂದು ಸಮರ್ಥಿಸಿಕೊಂಡುಬಿಟ್ಟ. ಅದನ್ನು 'ಕಪಾಲಸ್ಥಿಲಯಾಪಸಮ್' ಅನ್ನುತ್ತಾರಂತೆ!

ಈ ಬಾಬಾನ ತಿಕ್ಕಲುತನಗಳು ಹೀಗೆ ನಡೆಯುತ್ತಿವೆ.

ಸೇನೆ ಕಟ್ಟುತ್ತಾನಂತೆ

ಭ್ರಷ್ಟಾಚಾರದ ವಿರುದ್ಧ ದನಿ ಎತ್ತಿದ್ದ ಅಣ್ಣಾ ಹಜಾರೆಯನ್ನು ಬದಿಗೆ ತಳ್ಳಿ ಬಾಬಾ ರಾಮದೇವನ ಕಪ್ಪುಹಣದ ವಿರುದ್ಧದ ಹೋರಾಟ ಸಡನ್ನಾಗಿ ನಾಟಕೀಯ ತಿರುವು ಪಡೆಯುತ್ತಿರುವುದರ ಹಿಂದೆ ಆರೆಸ್ಸೆಸ್ ಇರುವುದು ಈಗ ಗುಟ್ಟಾಗಿ ಉಳಿದಿಲ್ಲ. ಇಂತಹದೊಂದು ಚಡ್ಡಿಗಳ ಪ್ಲಾನ್ ಬಗ್ಗೆ 'ಲಂಕೇಶ್' 2011ರ ಏಪ್ರಿಲ್ 20 ಹಾಗೂ 27ರ ಸಂಚಿಕೆಯಲ್ಲೇ ಬರೆದು ಎಚ್ಚರಿಸಿತ್ತು. ಕಳೆದವಾರ ರಾಮಲೀಲಾ ಮೈದಾನದಿಂದ ಹೊರದಬ್ಬಿಸಿಕೊಂಡಿರುವ ಬಾಬಾ ರಾಮದೇವ್ ಈಗ ಹನ್ನೊಂದು ಸಾವಿರ ಶಸ್ತ್ರಸಜ್ಜಿತ ಸೈನಿಕರ ಪಡೆ ಕಟ್ಟುವುದಾಗಿ ಘೋಷಿಸಿದ್ದಾನೆ. ಖಂಡಿತಾ ಅಂತಹದೊಂದು ಪಡೆ ಆರೆಸ್ಸೆಸ್ ಕಾರ್ಯಕರ್ತರದ್ದೇ ಆಗಿರುತ್ತದೆ.

ಈಗಿನ ದುರಂತ ಏನೆಂದರೆ ಇಂಡಿಯಾದ ಜನಸಾಮಾನ್ಯರು ಅಣ್ಣಾ ಹಜಾರೆಯವರಲ್ಲಿ ನಂಬಿಕೆಯಿಟ್ಟು ಆಂದೋಲನಕ್ಕೆ ಬೆಂಬಲ ತೋರಿದ್ದರು. ಆದರೆ ಬಾಬಾ ರಾಮದೇವ್‌ನನ್ನು ಮುಂದಿಟ್ಟುಕೊಂಡು ಸಂಘಪರಿವಾರಿಗಳು ಇಡೀ ಹೋರಾಟವನ್ನೇ ಈಗ ಹೈಜಾಕ್ ಮಾಡಲು ಹೊರಟಿದ್ದಾರೆ. ಈ ಗದ್ದಲದಲ್ಲಿ ಅಣ್ಣಾ ಹಜಾರೆಯವರನ್ನೇ ಮೂಲೆಗೆ ತಳ್ಳುವ ಹುನ್ನಾರ ನಡೆಯುತ್ತಿದೆ.

ಹೀಗಾಗಕೂಡದು ಎಂದರೆ ಕನಿಷ್ಠ ಪಕ್ಷ ಕರ್ನಾಟಕದವರಾದರೂ ಭ್ರಷ್ಟಾಚಾರ ವಿರೋಧಿ ಹೋರಾಟಗಾರರು ಅಣ್ಣಾ ಹಜಾರೆ ಹಾಗೂ ಬಾಬಾ ರಾಮದೇವ್ ನಡುವಿನ ವ್ಯತ್ಯಾಸ ಅರಿತು ಮುಂದುವರೆಯಬೇಕು. ರಾಮದೇವ ಒಬ್ಬ ಕಪಟ ಸನ್ಯಾಸಿ. ಅಣ್ಣಾ ಹಜಾರೆ ಓರ್ವ ಪ್ರಾಮಾಣಿಕ ವ್ಯಕ್ತಿ.

ಇವರಿಬ್ಬರಲ್ಲಿ ಅಣ್ಣಾ ಜನಬೆಂಬಲಕ್ಕೆ ಅರ್ಹರೇ ಹೊರತು ರಾಮದೇವನಲ್ಲ. ಅವನ ಹಿಂದೆ ನಿಂತು ಆಟವಾಡುತ್ತಿರುವ ರಾಮಭಕ್ತರೂ ಅಲ್ಲ.



ಬಾಬಾ ಏಕೆ ದೇಶದಿಂದ ಕ್ಯಾನ್ಸರ್ ಅನ್ನು ಒದ್ದೋಡಿಸಿಲ್ಲ?

ಬಾಬಾ ರಾಮದೇವನ ನಾಲಿಗೆಗೆ ಸುಸ್ತು ಎಂಬುದೇ ಇಲ್ಲದಂತಿದೆ. ಭ್ರಷ್ಟಾಚಾರ ವಿರುದ್ಧ 'ಸಮರ' ಪ್ರಾರಂಭಿಸುವ ಮುನ್ನ ಈತ ತಾನು ಎಲ್ಲ ರೀತಿಯ ಕಾಯಿಲೆಗಳನ್ನು ನಿವಾರಿಸಬಲ್ಲೆ ಎಂದು ಬಡಾಯಿಕೊಚ್ಚಿಕೊಳ್ಳುತ್ತಿದ್ದ.

ಮೊದಮೊದಲು ಈತ ಕಲಿಸುವ ಯೋಗ ಮತ್ತು ಮಾರುವ ಆಯುರ್ವೇದ ಔಷಧಿಗಳಿಂದ ಏಡ್ಸ್ ತರಹದ ರೋಗಗಳೂ ನಿವಾರಣೆ ಆಗುತ್ತದೆ ಎಂದು ಹೋದಲ್ಲೆಲ್ಲ ಹೇಳಲಾರಂಭಿಸಿದ. ಇದು ಒಂದು ಹಂತದಲ್ಲಿ ಯಾವ ಮಟ್ಟಕ್ಕೆ ಹೋಯಿತೆಂದರೆ, ಈತ ಜನರನ್ನು ದಾರಿತಪ್ಪಿಸುತ್ತಿದ್ದಾನೆಂದು ಹೆದರಿದ ಕೇಂದ್ರ ಆರೋಗ್ಯ ಸಚಿವರಾಗಿದ್ದ ಮತ್ತು ಸ್ವತಃ ವೈದ್ಯರಾಗಿರುವ ಅಂಬುಮಣಿ ರಾಮದಾಸ್ ಅವರು ರಾಮದೇವನಿಗೆ 2007 ರ ಆರಂಭದಲ್ಲಿ ನೋಟಿಸು ಜಾರಿ ಮಾಡಿ ಇನ್ನು ಮುಂದೆ ಹಾಗೆ ಹೇಳಕೂಡದೆಂದು ಎಚ್ಚರಿಸಿದರು. ಹಾಗೆಯೇ ಜನಪರ ಸಮಾಜಸೇವಕರೂ ನ್ಯಾಯಾಲಯದಲ್ಲಿ ಆತನ ವಿರುದ್ಧ ಮೊಕದ್ದಮೆಗಳನ್ನು ಹೂಡುವುದಾಗಿ ಬೆದರಿಸಿದರು.

ಆಗ ರಾಮದೇವ್ "ನಾನೆಂದೂ ಯೋಗ ಮತ್ತು ಆಯುರ್ವೇದದಿಂದ ಏಡ್ಸ್ ಕಾಯಿಲೆಯನ್ನು ಗುಣಪಡಿಸಬಹುದು ಎಂದು ಹೇಳಿಲ್ಲ" ಎಂದು ನುಣುಚಿಕೊಂಡಿದ್ದ.


ಆದರೆ ಇದಾದನಂತರ ರಾಮದೇವ್ ಇನ್ನೊಂದು ವರಸೆಯನ್ನು ಪ್ರಾರಂಭಿಸಿದ. 2007 ರ ಜೂನ್‌ನಲ್ಲಿ ಈತ "ನಾನು ಜನಪ್ರಿಯಗೊಳಿಸಿರುವ ಏಳು ರೀತಿಯ ಪ್ರಾಣಾಯಾಮಗಳನ್ನು ಪ್ರತಿನಿತ್ಯ ಮಾಡಿದರೆ ಆರರಿಂದ ಒಂಭತ್ತು ತಿಂಗಳಲ್ಲಿ ಕ್ಯಾನ್ಸರ್ ರೋಗಿಗಳೂ ಗುಣಮುಖರಾಗುತ್ತಾರೆ" ಎಂದಿದ್ದ. ಮಾತ್ರವಲ್ಲ ಸ್ತನ, ಪಿತ್ತಜನಕಾಂಗ, ಪ್ರಾಸ್ಟೇಟ್, ಗರ್ಭಕೋಶ, ಪಿಟ್ಯುಟರಿಗ್ರಂಥಿ, ಮೆದುಳು ಮತ್ತು ರಕ್ತ ಕ್ಯಾನ್ಸರ್‌ಗಳೂ ಈ ಪ್ರಾಣಾಯಾಮಗಳಿಂದ ಮಂಗಮಾಯವಾಗುತ್ತವೆ ಎಂದು ಹಲವಾರು ಬಾರಿ ಹೇಳಿದ್ದಾನೆ. ಅಷ್ಟೇ ಅಲ್ಲ, ತನ್ನ ಈ ಯಶಸ್ಸಿಗೆ ಸಾಕ್ಷ್ಯಾಧಾರವಾದ ದಾಖಲೆಗಳೂ ಇವೆ ಎಂದು ಹೇಳಿದ್ದಾನೆ.

ಆದರೆ ಇಲ್ಲಿಯತನಕ ಆತ ಯಾವ ದಾಖಲೆಗಳನ್ನು ಆರೋಗ್ಯ ಸಚಿವಾಲಯಕ್ಕಾಗಲಿ, ಸಂಶೋಧಕರಿಗಾಗಲಿ, ವಿಜ್ಞಾನಿಗಳಿಗಾಗಲಿ, ಪತ್ರಕರ್ತರಿಗಾಗಲಿ ನೀಡಿಲ್ಲ.

ಅಷ್ಟೇ ಅಲ್ಲ, ಬಹಳ ವರ್ಷ ಆತನ ಮಿತ್ರನಾಗಿದ್ದ, ಮಾರ್ಗದರ್ಶಿಯಾಗಿದ್ದ ರಾಜೀವ್ ದೀಕ್ಷಿತ್ ಕ್ಯಾನ್ಸರ್‌ಗೆ ತುತ್ತಾದಾಗ ಆತನಿಗೆ ಯೋಗ ಮತ್ತು ಔಷಧ ನೀಡಿ ಕಾಪಾಡಲಿಲ್ಲ ಏಕೆಂದು ಕೇಳಿದಾಗ "ಆತ ಮೊದಲೇ ನನ್ನ ನೆರವು ಕೇಳಲಿಲ್ಲ" ಎಂದಿದ್ದ ರಾಮದೇವ್.

ಇಲ್ಲೊಂದು ಮುಖ್ಯ ಪ್ರಶ್ನೆ: ಪರದೇಶಗಳ ಕಾನೂನುಗಳ ಬಗ್ಗೆ ಕಿಂಚಿತ್ತೂ ಗೊತ್ತಿಲ್ಲದ ರಾಮದೇವ್ ವಿದೇಶಗಳಲ್ಲಿ ಇರುವ ಕಪ್ಪುಹಣವನ್ನು ವಾಪಸ್ ತರಿಸಿ ಎಂದು ಬೊಬ್ಬೆಹೊಡೆಯುವ ಬದಲಾಗಿ ರಾಮದೇವನೇಕೆ ತನ್ನ 'ಕಲೆ'ಗಳಿಂದ ದೇಶದಲ್ಲಿರುವ ಲಕ್ಷಾಂತರ ಕ್ಯಾನ್ಸರ್ ರೋಗಿಗಳನ್ನು ಗುಣಪಡಿಸಿ ಅವರೆಲ್ಲರ ನೆರವಿಗೆ ಬರಬಾರದು?

ಆದರೆ ರಾಮದೇವ್ ಅದನ್ನು ಮಾಡುವುದಿಲ್ಲ, ಏಕೆಂದರೆ ಯೋಗ ಮತ್ತು ಅವನು ತಯಾರಿಸುವ ಆಯುರ್ವೇದ ಔಷಧಿಗಳಿಂದ ಅದೆಲ್ಲ ಸಾಧ್ಯವಿಲ್ಲ. ಆದ್ದರಿಂದಲೇ ರಾಮದೇವ್ ಈಗ ತನ್ನ ಬಡುವಿಲ್ಲದ ನಾಲಿಗೆಗೆ 'ಭ್ರಷ್ಟಾಚಾರ' ಎಂಬ ಹೊಸ ಸ್ಲೋಗನ್ ಕೊಟ್ಟುಕೊಂಡಿದ್ದಾನೆ.



ಹೈಟೆಕ್ ರವಿಶಂಕರನೂ ಲೋಟೆಕ್ ರಾಮದೇವನೂ

ಪ್ರಾಚೀನ ಕಾಲದ ವಿದ್ಯೆಯಾದ ಯೋಗವನ್ನೇ ಆಧುನಿಕ ಕಾಲದ ಬಂಡವಾಳ ಮಾಡಿಕೊಂಡು ಇವತ್ತು ಜಗತ್ತಿನಾದ್ಯಂತ ಜನರನ್ನು ಮೋಸ ಮಾಡುತ್ತಿರುವ ಮತ್ತು ಅಪಾರ ಆಸ್ತಿ-ಪ್ರಶಸ್ತಿಗಳನ್ನು ಗಳಿಸುತ್ತಿರುವವರಲ್ಲಿ ಟ್ರಿಪಲ್ ಶ್ರೀ ವ್ಯಾಪಾರಿ ರವಿಶಂಕರ್ ಮತ್ತು ಇಂಡಿಯನ್ ರಬ್ಬರ್‌ನಂತಹ ದೇಹ ಹೊಂದಿರುವ ರಾಮದೇವ್ ಪ್ರಮುಖರು.

ಆದರೆ ಇವರಿಬ್ಬರ ನಡುವೆ ಹಲವು ವ್ಯತ್ಯಾಸಗಳಿವೆ. ಅದು ರವಿಶಂಕರ್ ಹೇಳಿಕೊಡುವ ಸುದರ್ಶನಕ್ರಿಯಾ ಮತ್ತು ರಾಮದೇವ್ ಹೇಳಿಕೊಡುವ ಪ್ರಾಣಾಯಾಮಕ್ಕೆ ಮಾತ್ರ ಸೀಮಿತವಾಗಿಲ್ಲ, ಬದಲಾಗಿ ಅವರಿಬ್ಬರ ಹಿಂಬಾಲಕರ ವಲಯಗಳನ್ನು ಆಕ್ರಮಿಸಿದೆ.

ವ್ಯಾಪಾರಿ ರವಿಶಂಕರ್ ಇಂಗ್ಲಿಷ್ ಮಾತನಾಡಬಲ್ಲ. ಆದ್ದರಿಂದ ಆತ ಮೇಲುವರ್ಗದ ಜನರೊಂದಿಗೆ ತನ್ನ ವ್ಯವಹಾರವನ್ನು ಕುದುರಿಸಿಕೊಳ್ಳುತ್ತಾನೆ. ಟೈಮ್ಸ್ ಆಫ್ ಇಂಡಿಯಾದಂತಹ ಪ್ರತಿಷ್ಠಿತ ಪತ್ರಿಕೆಯ ಮಾಲೀಕ ಇಂದು ಜೈನ್‌ನಿಂದ ಹಿಡಿದು ದೇಶವಿದೇಶಗಳ ಹಿರಿಯ ಆದರೆ ಮುಠ್ಠಾಳ ರಾಜಕಾರಣಿಗಳ ತನಕ ರವಿಶಂಕರನ 'ಪ್ರಭಾವ' ಹಬ್ಬಿದೆ. ಇದೆಲ್ಲ ಆತನ ತಲೆ ತಿರುಗಿಸಿರುವುದರಿಂದ ಆತ ಇತ್ತೀಚೆಗೆ ನೊಬೆಲ್ ಪ್ರಶಸ್ತಿಯ ಕನಸು ಕಾಣಲಾರಂಭಿಸಿದ್ದಾನೆ.

ಒಂದೆಡೆ ಪ್ರಭಾವಿ ಪತ್ರಕರ್ತರು ಮತ್ತು ಹಿಂದಿ ಚಿತ್ರರಂಗದ ತೆಳ್ಳಗಿನ ಬೆಳ್ಳಗಿನ ನಟನಟಿಯರ ಮೂಲಕ ವ್ಯಾಪಾರಿ ರವಿಶಂಕರ ತನ್ನ ಹಿಂಬಾಲಕರ ಪಡೆಯನ್ನು ವೃದ್ಧಿಸಿಕೊಳ್ಳುತ್ತಿದ್ದರೆ ಇನ್ನೊಂದೆಡೆ ತನ್ನ ಧನ ಮತ್ತು ತೋಲ್ಬಲದ ಮೂಲಕ ತನ್ನ ಆರ್ಟ್ ಆಫ್ ಲಿವಿಂಗ್ ಸಾಮ್ರಾಜ್ಯವನ್ನು ವಿಸ್ತರಿಸಿಕೊಳ್ಳುತ್ತಿದ್ದಾನೆ. ಇದೆಲ್ಲದರಿಂದಾಗಿ ರವಿಶಂಕರ್‌ನದ್ದು ಹೈಟೆಕ್ ಯೋಗ ದಂಧೆ ಎನ್ನಬಹುದು.

ಆದರೆ ರವಿಶಂಕರನಷ್ಟು 'ಪಾಲಿಷ್' ಎಂಟನೇ ತರಗತಿ ಫೈಲ್ ಗಿರಾಕಿ ರಾಮದೇವ್‌ನಿಗಿಲ್ಲ. ಆದ್ದರಿಂದ ಆತ ಲೋಟೆಕ್ 'ದೇಸಿ' ಸಂಸ್ಕೃತಿಯನ್ನೇ ಅವಲಂಬಿಸಿದ್ದಾನೆ ಮತ್ತು ಅದನ್ನೇ ಪ್ರೋತ್ಸಾಹಿಸುತ್ತಾನೆ.

ತನಗೇ ಇಂಗ್ಲಿಷ್ ಬರುವುದಿಲ್ಲವಾದ್ದರಿಂದ ಎಲ್ಲರೂ ಹಿಂದಿಯಲ್ಲೇ ಮಾತನಾಡಬೇಕು, ಹಿಂದಿಯನ್ನೇ ದೇಶದ ಎಲ್ಲ ರಾಜ್ಯದ ಪ್ರಜೆಗಳು ಉಪಯೋಗಿಸಬೇಕು ಎಂಬುದು ರಾಮದೇವ್ ಒತ್ತಾಯಗಳಲ್ಲಿ ಒಂದಾಗಿದೆ.

ಪ್ರಮುಖ ಪತ್ರಿಕೆಗಳು ರವಿಶಂಕರನನ್ನು ಬೆಂಬಲಿಸುತ್ತಿದ್ದರೆ ರಾಮದೇವನ ಬೆನ್ನಿಗೆ ಓದುಬರಹ ಬಾರದ ಜನಸಾಮಾನ್ಯರ ಮನೆಗಳನ್ನೇ ಪ್ರವೇಶಿಸುವ 'ಆಸ್ಥಾ' ಎಂಬ ಟೀವಿ ಚಾನೆಲ್ ಇದೆ. ಆ ಚಾನೆಲ್ ಹಗಲಿರುಳೂ ರಾಮದೇವನ ಯೋಗಾಸನಗಳನ್ನು, ತಲೆಬುಡವಿಲ್ಲದ ವಿಚಾರಗಳನ್ನು ಪ್ರಸಾರ ಮಾಡುವ ಮೂಲಕ ಆತನ ಮುಖಪರಿಚಯವನ್ನು ಲಕ್ಷಾಂತರ ಜನರಿಗೆ ಮಾಡಿಕೊಟ್ಟಿದೆ.

ರಾಮದೇವನಿಗೆ ನೊಬೆಲ್ ಪ್ರಶಸ್ತಿಗಿಂತ ಸಾಮಾನ್ಯ ಜನರ ಕಣ್ಣಲ್ಲಿ 'ಹೀರೋ' ನಂತೆ ಕಾಣುವ ಆಸೆ. ಆದಕ್ಕೆ ಈಗ ಭ್ರಷ್ಟಾಚಾರದ ವಿರುದ್ಧ ಅರಚಾಡುತ್ತಾ ದೇಶದ ಗಮನ ತನ್ನ ಮೇಲೆ ಕೇಂದ್ರೀಕರಣಗೊಳ್ಳುವಂತೆ ಮಾಡಿದ್ದಾನೆ.

ಒಂದು ರೀತಿಯಲ್ಲಿ ರಾಮದೇವ್‌ನದ್ದು ಲೋಟೆಕ್ ಯೋಗ ದಂಧೆ ಎನ್ನಬಹುದು!

ಬಾಬಾನ ಹಿಂದಿರುವ ತಂಡ

ಪ್ಪಾ ತಳಿ, ಹೈದನಂತಿರುವ, ಎಂಟನೇ ಕ್ಲಾಸ್ ಫೇಲ್ ದ್ದ ಬಾಬಾ ರಾಮದೇವ್ ಇವತ್ತು ಇಷ್ಟು ಬೆಳೆದಿರುವುದಕ್ಕೆ ರಣ ಆತ ಯೋಗ ಎಕ್ಸ್‌ಪರ್ಟ್ ಎಂಬುದೇ ಮುಖ್ಯವಲ್ಲ. ದರ ಜೊತೆಗೆ ಆತನಿಗೆ ಮಾರ್ಗದರ್ಶನ ಮಾಡುವ, ನೆ ಕೊಡುವ ದೊಡ್ಡ ತಂಡವೇ ಇದ್ದು ಆತನನ್ನು ಈ ಟ್ಟಕ್ಕೆ ಬೆಳೆಸಿದೆ. ಆ ತಂಡದಲ್ಲಿ ಾಜಿ ನ್ಯಾಯಾಧೀಶರು, ಪತ್ರ ರು, ಹಿರಿಯ ರಾಜಕಾರಣಿ ೂ ಇದ್ದಾರೆ.


ಗುರುಮೂರ್ತಿ

ಚಾರ್ಯ ಬಾಲಕೃಷ್ಣ

ಈ ತಂಡದ ಪ್ರಮುಖ ಚಾರ್ಯ ಬಾಲಕೃಷ್ಣ ಮೂಲತಃ ಪಾಳಿ ಪ್ರಜೆಯಾದ ಬಾಲಕೃಷ್ಣ ದ 19 ವರ್ಷಗಳಿಂದ ಮದೇವನೊಂದಿಗಿದ್ದಾನೆ. ಅಷ್ಟೇ ್ಲ, ರಾಮದೇವ್ ನಡೆಸುವ ತ್ತಾರು ಸಂಸ್ಥೆಗಳು ಇರುವುದು ಈ ರಾಮಕೃಷ್ಣನ ಹೆಸರಿನಲ್ಲೇ.

ನೇಪಾಳದ ಬಡ ಕುಟುಂಬದಲ್ಲಿ ಜನಿಸಿದ ಬಾಲಕೃಷ್ಣ ವರ್ಷ ವಯಸ್ಸಿನವನಾಗಿದ್ದಾಗ ಭಾರತಕ್ಕೆ ಬಂದ. ದಷ್ಟು ದಿನ ಅಲ್ಲಿ ಇಲ್ಲಿ ಕರಿ ಮಾಡಿದ ಬಾಲಕೃಷ್ಣ ನೆಗೆ ಹರಿಯಾಣದ ಒಂದು ರುಕುಲವನ್ನು ಸೇರಿ ಯೋಗ ತ. ಆ ಗುರುಕುಲದಲ್ಲಾಗಲೇ ಮದೇವನಿದ್ದು ಅವರಿಬ್ಬರ ಿಚಯವಾಯಿತು.


ಗೋವಿಂದಾಚಾರ್ಯ

ಹರಿದ್ವಾರದಲ್ಲಿ ಸ್ವಾಮಿ ಕರ್‌ದೇವ್ ಎಂಬುವವರು ಸುತ್ತಿದ್ದ ದಿವ್ಯ ಯೋಗ ್ರಮಕ್ಕೆ 1994-95 ರಲ್ಲಿ ಮದೇವನನ್ನು ಕರೆದುಕೊಂಡು ೋಗಿದ್ದು ಇದೇ ಬಾಲಕೃಷ್ಣ.

2005 ರ ಹೊತ್ತಿಗೆ ದಿವ್ಯ ಯೋಗ ಆಶ್ರಮ ಹಲವು ಕೋಟಿ ಮೌಲ್ಯಗಳ ಸಂಸ್ಥೆಯಾಗಿತ್ತು, ಅದರ ಉಸ್ತುವಾರಿಯನ್ನು ಬಾಬಾ ರಾಮದೇವ್ ವಹಿಸಿಕೊಂಡ ನಂತರ ಆತನ ಮತ್ತು ಸ್ವಾಮಿ ಶಂಕರ್‌ದೇವ್ ನಡುವೆ ಭಿನ್ನಾಭಿಪ್ರಾಯ ಉಂಟಾಯಿತು. 2009 ರಲ್ಲಿ ಸ್ವಾಮಿ ಶಂಕರ್‌ದೇವ್ ಅನುಮಾನಸ್ಪದ ರೀತಿಯಲ್ಲಿ ಸಾವನ್ನಪ್ಪಿದರು.

ಹರಿದ್ವಾರಕ್ಕೆ ಕಾಲಿಟ್ಟಾಗಿನಿಂದಲೂ ರಾಮದೇವ್ ಮತ್ತಾತನ ಚೇಲಾ ಬಾಲಕೃಷ್ಣನ ಸಂಪತ್ತು ಮತ್ತು ಸಾಮ್ರಾಜ್ಯ ಬೆಳೆಯುತ್ತಲೇ ಇದೆ.

ಅಂದಹಾಗೆ ಈಗ 'ಆಚಾರ್ಯ' ಎಂದು ಬಾಲಕೃಷ್ಣ ತನ್ನನ್ನು ತಾನು ಕರೆದುಕೊಳ್ಳುತ್ತಿದ್ದಾನಾದರೂ ಆತನ ಬಳಿ ಪಿಸ್ತೂಲ್ ಮತ್ತು ರೈಫಲ್‌ಗಳಂತಹ ಆಯುಧಗಳಿವೆ. ಈ ಅಸ್ತ್ರಗಳ ಪರವಾನಗಿಯನ್ನು ಆತ ಅಕ್ರಮವಾಗಿ ಪಡೆದಿದ್ದಾನೆ ಎಂಬ ಗುಮಾನಿಗಳಿವೆ. ಮಾತ್ರವಲ್ಲ ಈತ ಮೂರು ಪಾಸ್‌ಪೋರ್ಟ್‌ಗಳನ್ನು ಹೊಂದಿದ್ದಾನೆ ಎಂಬ ಆರೋಪಗಳೂ ಇವೆ.


ಬಾಲಕೃಷ್ಣ

ಅದೆಲ್ಲ ಬದಿಗಿರಲಿ, ಆಚಾರ್ಯನಾದವನಿಗೆ ಮಾರಕ ಅಸ್ತ್ರಗಳ ಅಗತ್ಯವೇನು ಎಂದರೆ 'ರಕ್ಷಣೆ' ಅಂತಾನೆ ಬಾಲಕೃಷ್ಣ!

ಪತ್ರಕರ್ತ, ಅಧಿಕಾರಿ

ರಾಮದೇವನ ತಂಡದಲ್ಲಿ ವೇದ್‌ಪ್ರಕಾಶ್ ಮಲಿಕ್ ಎಂಬ ಹಿರಿಯ ಪತ್ರಕರ್ತನೂ ಇದ್ದಾನೆ. ಆರೆಸ್ಸೆಸಿನೊಂದಿಗೆ ನಿಕಟಬಾಂಧವ್ಯವನ್ನು ಹೊಂದಿದ್ದಾನೆ ಮಲಿಕ್. ಹಾಗೆಯೇ ಇಂಟೆಲಿಜೆನ್ಸ್ ಬ್ಯೂರೋದ ಮಾಜಿ ಮುಖ್ಯಸ್ಥ ಅಜಿತ್ ದೋವಲ್ ಎಂಬಾತನೂ ರಾಮದೇವನ ಸಹಚರನಾಗಿದ್ದಾನೆ.

ಆರೆಸ್ಸೆಸ್ ಸಿದ್ಧಾಂತಿಗಳು

ಈ ತಂಡದಲ್ಲಿ ಎಸ್. ಗುರುಮೂರ್ತಿ ಎಂಬಾತನೂ ಇದ್ದಾನೆ. ಈತ ವೃತ್ತಿಯಲ್ಲಿ ಲೆಕ್ಕಪರಿಶೋಧಕ ಆಗಿದ್ದರೂ ಪ್ರವೃತ್ತಿಯಲ್ಲಿ ಪಕ್ಕಾ ಹಿಂದೂತ್ವವಾದಿ. ಈತ ಹಲವು ದಶಕಗಳಿಂದ ಆರೆಸ್ಸೆಸ್‌ನ ಪ್ರಮುಖ ಸಿದ್ಧಾಂತಿಗಳಲ್ಲಿ ಒಬ್ಬನಾಗಿದ್ದಾನೆ.

ಇವರೆಲ್ಲರಿಗಿಂತ ಮುಖ್ಯವಾಗಿ 'ಗುರು' ರಾಮದೇವನಿಗೇ 'ಗುರು'ವಾಗಿರುವವನು ಕೆ. ಗೋವಿಂದಾಚಾರ್ಯ. ಪಕ್ಕಾ ಚಾಣಾಕ್ಷನಾದ ಬ್ರಾಹ್ಮಣ ಗೋವಿಂದಾಚಾರ್ಯ ಬಹಳಷ್ಟು ವರ್ಷ ಆರೆಸ್ಸೆಸಿಗೆ ದುಡಿದವನು. 80ರ ದಶಕದಲ್ಲಿ ಮೇಲು ಜಾತಿಗಳ ಮತ್ತು ಬನಿಯಾಗಳ ಪಕ್ಷವಾಗಿದ್ದ ಬಿಜೆಪಿಗೆ ಶೂದ್ರ, ದಲಿತ ಸಮುದಾಯಗಳೂ ಸೇರುವಂತೆ 'ಹಿಂದೂತ್ವ' ಎಂಬ ವಿಷವನ್ನು ಹರಿಸಿದ್ದರಲ್ಲಿ ಗೋವಿಂದಾಚಾರ್ಯನ ಪಾತ್ರ ದೊಡ್ಡದು.

ಆದರೆ ಕಾಲ ಕ್ರಮೇಣ ಗೋವಿಂದಾಚಾರ್ಯನಿಗೆ ಆರೆಸ್ಸೆಸ್ಸಿಗಿಂತಲೂ ಬಿಜೆಪಿಯಲ್ಲಿದ್ದ ಸನ್ಯಾಸಿನಿ ಉಮಾ ಭಾರತಿಯೇ ಮುಖ್ಯವಾದಳು. ಕೊನೆಗೆ ಇವರಿಬ್ಬರನ್ನೂ ಆರೆಸ್ಸೆಸ್ ಬಿಜೆಪಿಯಿಂದಲೇ ಒದ್ದೋಡಿಸಿತು. ಕಾವಿಧಾರಿಣಿ ಉಮಾ ಭಾರತಿಯ ಮೂಲಕ ಗೋವಿಂದಾಚಾರ್ಯ ಬಿಜೆಪಿಗೆ ಪರ್ಯಾಯರಾದ ಹಿಂದೂತ್ವವಾದಿ ಪಕ್ಷವನ್ನು ಕಟ್ಟಲು ಯತ್ನಿಸಿದವನಾದರೂ ಅದು ಸಫಲವಾಗಲಿಲ್ಲ. ಆಗ ಗೋವಿಂದಾಚಾರ್ಯನ ಕಣ್ಣಿಗೆ ಬಿದ್ದಿದ್ದು ಆತನಿಗೆ ಪ್ರಿಯವಾದ ಕಾವಿ ಬಟ್ಟೆಯನ್ನು ಧರಿಸಿದ್ದ ಬಾಬಾ ರಾಮದೇವ್.

ಲೋಕಾಯುಕ್ತ ಪ್ರೀತಿಮ್ ಪಾಲ್


ಪ್ರೀತಮ್ ಪಾಲ್

ಭ್ರಷ್ಟಾಚಾರ ವಿರೋಧಿ ಆಂದೋಲನದಲ್ಲಿ ಅಣ್ಣಾ ಹಜಾರೆ ಅವರೊಂದಿಗೆ ನಮ್ಮ ಕರ್ನಾಟಕದ ಲೋಕಾಯುಕ್ತ ನ್ಯಾ. ಸಂತೋಷ್ ಹೆಗ್ಡೆ ಗುರುತಿಸಿಕೊಂಡಿದ್ದಾರೆ. ಹಾಗೆಯೇ ರಾಮದೇವನ ಆಂದೋಲನದೊಂದಿಗೆ ಪಂಜಾಬ್ ಮತ್ತು ಹರಿಯಾಣದ ಲೋಕಾಯುಕ್ತರಾಗಿರುವ ನ್ಯಾ. ಪ್ರೀತಿಮ್ ಪಾಲ್ ಅವರು ಗುರುತಿಸಿಕೊಂಡಿದ್ದಾರೆ.

ಆದರೆ ಸಂತೋಷ್ ಹೆಗ್ಡೆ-ಅಣ್ಣಾ ಹಜಾರೆ ಅವರ ನಂಟು ಇತ್ತೀಚಿನದ್ದಾಗಿದ್ದರೆ ಪಾಲ್-ರಾಮದೇವನ ನಂಟು ಬಹಳ ವರ್ಷಗಳ ಕಾಲದ್ದು. 90 ರ ದಶಕದಲ್ಲಿ ಪಾಲ್ ಅವರು ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶ ಆಗಿದ್ದಾಗಲೂ ಅವರು ರಾಮದೇವನ ಅನುಯಾಯಿ ಆಗಿದ್ದರು. 2010 ರಲ್ಲಿ ನ್ಯಾ. ಪಾಲ್ ಅವರ ಆಹ್ವಾನದ ಮೇರೆಗೆ ರಾಮದೇವ್ ಪಂಜಾಬ್ ಮತ್ತು ಹರಿಯಾಣದ ನ್ಯಾಯಾಲಯದಸಿಬ್ಬಂದಿಗೆ ಯೋಗ ಕ್ಯಾಂಪ್ ನಡೆಸಿದ್ದ.


ಅಜಿತ್ ದೋವಲ್

ಇತ್ತೀಚೆಗೆ ನಾಲ್ವರು ಕೇಂದ್ರ ಮಂತ್ರಿಗಳು ರಾಮದೇವನನ್ನು ವಿಮಾನ ನಿಲ್ದಾಣದಲ್ಲೇ ಭೇಟಿ ಆಗಿ ಮಾತುಕತೆ ನಡೆಸಿದಾಗ ರಾಮದೇವನ ತಂಡದಲ್ಲಿ ನ್ಯಾ. ಪಾಲ್ ಕೂಡ ಇದ್ದರು!

ಬಾಬಾನ ಭ್ರಮಾಲೋಕ

"I am very powerful. People love me" (ನಾನು ತುಂಬಾ ಬಲಿಷ್ಠ, ಜನ ನನ್ನನ್ನು ಪ್ರೀತಿಸುತ್ತಾರೆ) ಎಂದು ಬಾಬಾ ರಾಮದೇವ್ ಸಂದರ್ಶನವೊಂದರಲ್ಲಿ ಕೊಚ್ಚಿಕೊಂಡಿದ್ದ.

ಆತನ ಇಂತಹ ವಿಶ್ವಾಸದ ಹಿಂದಿರುವ ಲೆಕ್ಕಾಚಾರವನ್ನು ಗಮನಿಸಿದರೆ ಆತ ಎಂತಹ ಮತಿಗೇಡಿ ಎಂದು ಅರ್ಥವಾಗುತ್ತದೆ.

ರಾಮದೇವನ ಪ್ರಕಾರ ಆತ ಇಲ್ಲಿಯತನಕ ನಡೆಸಿರುವ ಯೋಗ ಶಿಬಿರಗಳಲ್ಲಿ 30 ಲಕ್ಷ ಜನ ಭಾಗವಹಿಸಿದ್ದಾರಂತೆ. ಆ ಮೂಲಕ ಅವರೆಲ್ಲರೂ ಆತನ ಅನುಯಾಯಿಗಳಾಗಿದ್ದು ಆ ಜನ ಮಾತ್ರವಲ್ಲದೆ ಅವರ ಕುಟುಂಬದ ಐವರಿಂದ ಏಳು ಜನರೂ ಆತನ ಬೆಂಬಲಿಗರಾಗಿದ್ದಾರಂತೆ. ಈ ಲೆಕ್ಕಾಚಾರದ ಪ್ರಕಾರವೇ ಬಾಬಾನ ಬೆಂಬಲಿಗರ ಸಂಖ್ಯೆ 150 ಮಿಲಿಯನ್ ಜನರಂತೆ! ಇದಷ್ಟೇ ಅಲ್ಲದೆ ಟಿವಿಯಲ್ಲಿ ಆತನ ಯೋಗಾ ಕಾರ್ಯಕ್ರಮವನ್ನು ಪ್ರತಿದಿನ ಒಂದು ಮಿಲಿಯನ್ ಜನ ವೀಕ್ಷಿಸುತ್ತಾರೆಂದೂ, ಅವರೆಲ್ಲರೂ ತನ್ನನ್ನು ಬೆಂಬಲಿಸುತ್ತಾರೆಂದೂ ರಾಮದೇವ್‌ನಿಗೆ ಭ್ರಮೆ ಉಂಟಾಗಿದೆ.


ಆತನ ಇತ್ತೀಚಿನ ಹುಚ್ಚಾಟದ ಮೂಲ ಇರುವುದು ಇಂತಹ ಭ್ರಮೆಯಲ್ಲೇ.



ಬಾಬಾನ ವಿಚಿತ್ರ ಧೋರಣೆಗಳು

ಬಾಬಾ ರಾಮದೇವನ ಹುಚ್ಚಾಟಗಳ ಹಲವು ಸ್ಯಾಂಪಲ್‌ಗಳು ಇಲ್ಲಿವೆ...

* ನಾವು ಚೀನಾ ದೇಶದವರ ನೀತಿಯನ್ನು ಅನುಸರಿಸಿ ಭ್ರಷ್ಟಾಚಾರದಲ್ಲಿ ತೊಡಗಿರುವವರನ್ನೆಲ್ಲ ಶೂಟ್ ಮಾಡಿ ಕೊಲ್ಲಬೇಕು. ನಮ್ಮ ಈಗಿನ ಕಾನೂನಿನ ಪ್ರಕಾರ ನೂರು ಜನ ಅಪರಾಧಿಗಳು ಪಾರಾದರೂ ಒಬ್ಬ ನಿರಪರಾಧಿಗೆ ಶಿಕ್ಷೆ ಆಗಬಾರದು. ಅದು ತಪ್ಪು, ಎಲ್ಲ ಅಪರಾಧಿಗಳಿಗೆ ಶಿಕ್ಷೆ ಆಗಬೇಕು. ಆ ಪ್ರಕ್ರಿಯೆಯಲ್ಲಿ ಒಂದಿಬ್ಬರು ನಿರಪರಾಧಿಗಳಿಗೆ ಶಿಕ್ಷೆ ಆದರೂ ಅದು ಪರವಾಗಿಲ್ಲ.
* ಭಾರತ ಪಾಕಿಸ್ತಾನದ ಮೇಲೆ ಯುದ್ಧ ಸಾರಬೇಕು. ಆ ಯುದ್ಧಕ್ಕೆ ಬೇಕಾದ ಧನವನ್ನು ನಾನು ನೀಡುತ್ತೇನೆ (ಮುಂಬೈ ಮೇಲೆ ದಾಳಿ ಮಾಡಿದ ಸಂದರ್ಭದಲ್ಲಿ)
* ಸಲಿಂಗಕಾಮ ಒಂದು ರೋಗ. ಅದರ ವೈರಸ್ ಒಬ್ಬರ ದೇಹವನ್ನು ಹೊಕ್ಕರೆ ಅವರು ಎಂತಹ ಕೃತ್ಯಕ್ಕೂ ಹೇಸುವುದಿಲ್ಲ. ಸಲಿಂಗಕಾಮ ಒಂದು ಕೆಟ್ಟ ಚಟ. ಸಲಿಂಗಕಾಮ ಅಪರಾಧವಲ್ಲ ಎಂದು ದೆಹಲಿ ನ್ಯಾಯಾಲಯ ನೀಡಿರುವ ತೀರ್ಪು ನಾಚಿಕೆಗೇಡಿನದ್ದು ಮತ್ತು ನಮ್ಮೆಲ್ಲರನ್ನು ಅವಮಾನಿಸುವಂತಹದ್ದು. ನಾವು ಪಾಶ್ಚಿಮಾತ್ಯರನ್ನು ಅಂಧರಾಗಿ ಅನುಸರಿಸುತ್ತಾ ಭಾರತದ ಕುಟುಂಬ ಮೌಲ್ಯಗಳನ್ನು ಮುರಿದು ಹಾಕುತ್ತಿದ್ದೇವೆ.
* ಸಲಿಂಗಕಾಮಿಗಳು ರೋಗಗ್ರಸ್ತರು. ಅವರನ್ನೆಲ್ಲ ಚಿಕಿತ್ಸೆಗೆ ಆಸ್ಪತ್ರೆಗಳಿಗೆ ಕಳುಹಿಸಬೇಕು. ಸಲಿಂಗಕಾಮ ಕುರಿತು ನಾನು ಹಲವಾರು ವೈಜ್ಞಾನಿಕ ಸಂಶೋಧನೆಗಳನ್ನು ಓದಿದ ನಂತರವೇ ಅದೊಂದು ರೋಗ ಎಂದು ಹೇಳುತ್ತಿದ್ದೇನೆ. ಈ ರೋಗವನ್ನು ಯೋಗದ ಮೂಲಕ ನಿವಾರಿಸಬಹುದು.
* ಸೆಲಿನಾ ಜೇಟ್ಲಿ ತರಹದ ಜನರಿಗೆ ಭಾರತೀಯ ಸಂಸ್ಕೃತಿ ಬಗ್ಗೆ ಗೊತ್ತಿಲ್ಲ. ಅಂಥವರಿಗೆ ಯಾವ ನೈತಿಕ ಮೌಲ್ಯಗಳೂ ಇಲ್ಲ. (ಹಿಂದಿ ಸಿನಿಮಾ ತಾರೆ ಸೆಲಿನಾ ಜೇಟ್ಲಿ ಸಲಿಂಗಕಾಮಿಗಳ ಹಕ್ಕುಗಳ ಪರ ದನಿ ಎತ್ತಿದ್ದಾರೆ)


ಸೆಲೀನಾ ಜೇಟ್ಲಿ

ರಾಜಕೀಯ ಅಧಿಕಾರದ ಆಸೆ



ರಾಮದೇವ್ ಈಗ ತನಗೆ ಯಾವ ತರಹದ ಅಧಿಕಾರದ ದಾಹವೇ ಇಲ್ಲ, ಬದಲಾಗಿ ಭಾರತದಲ್ಲಿನ ವ್ಯವಸ್ಥೆಯನ್ನು ಶುದ್ಧೀಕರಿಸುವುದೇ ತನ್ನ ಗುರಿ ಎಂದು ಬೊಗಳೆ ಬಿಡುತ್ತಿದ್ದಾನೆ. ಆದರೆ ಇದೇ ರಾಮದೇವ್ ಕಳೆದ ವರ್ಷ ತಾನೊಂದು ರಾಜಕೀಯ ಪಕ್ಷವನ್ನು ಸ್ಥಾಪಿಸುತ್ತೇನೆಂದು ಘೋಷಿಸಿದ್ದ.

ಅಷ್ಟೇ ಅಲ್ಲ 2014 ರಲ್ಲಿ ನಡೆಯಲಿರುವ ಲೋಕಸಭಾ ಚುನಾವಣೆಯಲ್ಲಿ ತನ್ನ ಪಕ್ಷದ ವತಿಯಿಂದ ದೇಶದಾದ್ಯಂತ ಇರುವ ಎಲ್ಲಾ 543 ಸಂಸತ್ ಕ್ಷೇತ್ರಗಳಿಂದ ಸ್ಪರ್ಧಿಗಳನ್ನು ನಿಲ್ಲಿಸುತ್ತೇನೆಂದೂ ಹೇಳಿದ್ದ. ಆಗ ಈ ಪಕ್ಷದ ಹೆಸರನ್ನು ಆತ ಘೋಷಿಸದಿದ್ದರೂ ಅದಕ್ಕೆ 'ಭಾರತ್ ಸ್ವಾಭಿಮಾನ್' ಎಂಬ ಹೆಸರಿಡುವ ಸೂಚನೆಗಳು ಸಿಕ್ಕಿದ್ದವು.

ತಾನು ಸ್ವತಃ ಚುನಾವಣೆಯಲ್ಲಿ ಸ್ಪರ್ಧಿಸದಿದ್ದರೂ ತನ್ನ ಪಕ್ಷದ ಗುರಿ ಅಕ್ರಮ ಆಸ್ತಿಯನ್ನು ಕಬ್ಜಾ ಮಾಡಿಕೊಳ್ಳುವುದು ಎಂದಿದ್ದ. ಆದರೀಗ ತಾನು ರಾಜಕೀಯ ಪಕ್ಷವನ್ನು ಸ್ಥಾಪಿಸುತ್ತಿಲ್ಲವೆಂದೂ, ತನಗೆ ರಾಜಕೀಯ ಆಕಾಂಕ್ಷೆಗಳೇ ಇಲ್ಲವೆಂದೂ ಹೇಳುತ್ತಿದ್ದಾನೆ.

ತಾನು ಬಹಳ ಜನಪ್ರಿಯ ಎಂಬ ಮದವನ್ನೇರಿಸಿಕೊಂಡಿರುವ ಇಂತಹ ಮನುಷ್ಯನನ್ನು ನಂಬುವುದಾದರೂ ಹೇಗೆ?!



ಮಂಗಳೂರು ಬೀದಿ ವ್ಯಾಪಾರಿಗಳ ಸಂಹಾರಕ್ಕಿಳಿದ ನಗರಪಾಲಿಕೆ

ಈ ಖೂಳ ವ್ಯಾ
ಕಾರ್ಯಾಚರಣೆಯ ಹಿಂ
ಬಂಡವಾಳಶಾಹಿ ಕುಳಗ
ನೇರ ಕೈವಾಡವಿದೆ. ಭಾರತ
ಮಾಲ್, ಸಿ.ಟಿ. ಸೆಂಟರ್
ಮೋರ್ ಮುಂತಾ
ಬೃಹತ್ ಶಾಪಿಂಗ್
ಮಾಲ್‌ಗಳವರ
ಮಂಗಳೂರಿನ ಸೆಂಟ್ರಲ್
ಮಾರ್ಕೆಟ್ ಸುತ್ತ ಮುತ್ತ ತುಂಬಿರು
ಮಾರ್ವಾಡಿಗಳ, ದೊಡ್ಡ ವ್ಯಾಪಾ
ಕುಳಗಳ ಅಮೇಧ್ಯ ತಿಂದು ಅವ
ತಿಜೋರಿ ಮಜಬೂತಾಗಿಸಲ
ಬಡಪಾಯಿ ಬೀದಿವ್ಯಾಪಾರಿ ಗಳ ಅನ್ನ
ತಟ್ಟೆಗೆ ನಗರಪಾಲಿಕೆಯ ಧಣಿಗಳು
ಅಧಿಕಾರಿಗಳು ಕಲ್ಲು ಹಾಕುತ್ತಿದ್ದಾರ

ಕಳೆದ ಒಂದು ತಿಂಗಳಿನಿಂದೀಚೆಗೆ ಮಂಗಳೂರು ನಗರದಲ್ಲಿ ಶ್ರಮಿಕ ವರ್ಗದ ಅಂದರೆ ಬೀದಿ ವ್ಯಾಪಾರಿಗಳ ಬದುಕನ್ನು ಮೂರಾಬಟ್ಟೆಗೊಳಿಸುವ ಕಾರ್ಯಾಚರಣೆಯಲ್ಲಿ ಮಹಾನಗರ ಪಾಲಿಕೆ ತೊಡಗಿದೆ. ಮಂಗಳೂರು ನಗರದ ಸ್ಟೇಟ್‌ಬ್ಯಾಂಕ್, ಲೇಡಿಗೋಷನ್ ಆಸ್ಪತ್ರೆಯ ಸುತ್ತ-ಮುತ್ತಲ ಪ್ರದೇಶ, ಸೆಂಟ್ರಲ್ ಮಾರ್ಕೆಟ್‌ಗೆ ಹೋಗುವ ದಾರಿ, ಹಂಪನಕಟ್ಟೆ ಹಳೆ ಬಸ್ ನಿಲ್ದಾಣ, ಮುಂತಾದೆಡೆ ಹಣ್ಣು ಹಂಪಲು, ತರಕಾರಿ, ಬಟ್ಟೆ ಬರೆ, ಚಪ್ಪಲಿ, ಬೆಲ್ಟ್, ಪರ್ಸ್, ಕಾಸ್ಮೆಟಿಕ್ಸ್, ಮಕ್ಕಳ ಆಟಿಕೆ ಮುಂತಾದವುಗಳನ್ನು ಬೀದಿ ಬದಿಯಲ್ಲಿಟ್ಟು ವ್ಯಾಪಾರ ಮಾಡಿ ದಿನದ ಕೂಳು ದುಡಿಯುವ ಅಸಂಖ್ಯ ಮಂದಿಯಿದ್ದಾರೆ. ಆದರಿಂದ ಬಂಗಲೆ ಕಟ್ಟಲು, ಐಷಾರಾಮಿ ಕಾರು ಕೊಳ್ಳಲು ಸಾಧ್ಯವಿಲ್ಲವಾದರೂ ಗೌರವದ ಬಾಳು ಬದುಕಬಹುದು, ತಮ್ಮ ಮಕ್ಕಳಿಗೆ ವಿದ್ಯೆ ಕೊಟ್ಟು ಅವರ ಭವಿಷ್ಯ ಉಜ್ವಲವಾಗಿಸುವ ಕನಸು ಕಾಣಬಹುದು. ಆದರೆ ಬಡವರು ಗೌರವದ ಬಾಳು ಬದುಕುವುದು, ಅವರ ಮಕ್ಕಳ ಭವಿಷ್ಯ ರೂಪಿಸುವ ಕನಸು ಕಾಣುವುದೇ ಮಂಗಳೂರು ಮಹಾನಗರಪಾಲಿಕೆಯ ಧಣಿಗಳಿಗೆ, ಆಯುಕ್ತರಿಗೆ ದೊಡ್ಡ ಅಪರಾಧವಾಗಿ ಕಾಣುತ್ತಿದೆ.

ನಗರದ ಸೌಂದರ್ಯಕ್ಕೆ ಬೀದಿ ವ್ಯಾಪಾರಿಗಳು ಧಕ್ಕೆ ತರುತ್ತಾರೆ ಎಂದು ಅವರಿಗೆ ಪರ್ಯಾಯ ವ್ಯವಸ್ಥೆಯನ್ನೂ ಕಲ್ಪಿಸದೇ ಅವರನ್ನು ನಿರ್ಮೂಲನಗೊಳಿಸುವ ನಿಟ್ಟಿನಲ್ಲಿ ಕಾರ್ಯಾಚರಣೆ ಸಾಗುತ್ತಿದೆ. ಈ ಕಾರ್ಯಾಚರಣೆಗೆ ನಗರಪಾಲಿಕೆ ಕೊಟ್ಟ ಹೆಸರು "ಟೈಗರ್ ಕಾರ್ಯಾಚರಣೆ". ಈ ಖೂಳ ವ್ಯಾಘ್ರ ಕಾರ್ಯಾಚರಣೆ ಎಷ್ಟು ಅಮಾನವೀಯವೆಂದರೆ ಯಾವ ಮುನ್ಸೂಚನೆಯನ್ನೂ ನೀಡದೇ ದಿಢೀರ್ ಆಗಿ ಬಂದೆರಗುವ ಟೈಗರ್ ಸ್ಕ್ವಾಡ್ ಬಡಪಾಯಿ ಬೀದಿ ವ್ಯಾಪಾರಿಗಳು ಕಷ್ಟಪಟ್ಟು ಸಾಲಸೋಲ ಮಾಡಿ ತಂದ ಮಾಲುಗಳನ್ನು ಕಿಂಚಿತ್ ಕರುಣೆಯೂ ಇಲ್ಲದೇ ಲಾರಿಯಲ್ಲಿ ತುಂಬಿಸಿಕೊಂಡು ಹೋಗುತ್ತದೆ. ಅಷ್ಟು ಮಾತ್ರವಲ್ಲದೆ ಬೀದಿ ವ್ಯಾಪಾರಿಗಳು ಮಾಲುಗಳನ್ನು ಸ್ಟಾಕ್ ಇಟ್ಟ ಸ್ಥಳವನ್ನು ಹುಡುಕಿ ಅಲ್ಲಿಂದಲೂ ಅವರ ಮಾಲುಗಳನ್ನು ಹೊತ್ತೊಯ್ಯುತ್ತವೆ. ಈ ಹಿಂದೆ ನಗರಪಾಲಿಕೆಯಲ್ಲಿ ಕಾಂಗ್ರೆಸ್ ಆಡಳಿತವಿದ್ದಾಗಲೂ ಬೀದಿ ವ್ಯಾಪಾರಿಗಳ ಮಾಲುಗಳನ್ನು ಎತ್ತಿಕೊಂಡು ಹೋಗಿ ಅವರನ್ನು ಬೆದರಿಸುವ ಕಾರ್ಯತಂತ್ರ ಅನುಸರಿಸಿತ್ತು. ಆದರೆ ಬೀದಿ ವ್ಯಾಪಾರಿಗಳಿಂದ ವಶಪಡಿಸಿಕೊಂಡ ಅವರ ಮಾಲುಗಳನ್ನು ಪುನಃ ಅವರಿಗೆ ಹಿಂದಿರುಗಿಸುತ್ತಿದ್ದರು. ಈಗಿನ ನಗರ ಪಾಲಿಕೆಯ ಚಿಡ್ಡಿ ಧಣಿಗಳು, ಹರಾಮಿ ಅಧಿಕಾರಿಗಳು, ದೋಚಿ ತಿನ್ನುವುದರಲ್ಲೇ ಸುಖ ಕಾಣುವ ಪೊಲೀಸರು ಖೂಳವ್ಯಾಘ್ರ ಕಾರ್ಯಾಚರಣೆಯಲ್ಲಿ ಬೇಟೆಯಾಡಿದ ಮಾಲುಗಳನ್ನು ಹಂಚಿ ತಿನ್ನುತ್ತಿದ್ದಾರೆ.

ಬಡಪಾಯಿ ಬೀದಿ ವ್ಯಾಪಾರಿಗಳ ಮೇಲೆ ಇಷ್ಟೊಂದು ಅಮಾನವೀಯ ಕಾರ್ಯಾಚರಣೆ ನಡೆಯುತ್ತಿದ್ದರೂ ಸುನಿಲ್ ಕುಮಾರ್ ಬಜಾಲ್ ನೇತೃತ್ವದ CITU ಸಂಘಟನೆ ಬಿಟ್ಟರೆ ಇನ್ಯಾರಿಗೂ ಅದರಿಂದ ನೋವಾಗುತ್ತಿಲ್ಲ, ಕನಿಷ್ಠ ಪಕ್ಷ ಬೀದಿ ವ್ಯಾಪಾರಿಗಳ ಪರ ಹೇಳಿಕೆ ಕೊಡುವ ದಮ್ಮು ಮಂಗಳೂರಿನ "ಬುದ್ಧಿ(ಲದ್ದಿ)ವಂತ"ರಿಗಿಲ್ಲ, ಕಾಂಗ್ರೆಸ್ ಪಕ್ಷ ಕೂಡಾ ಈ ಅಮಾನವೀಯ ಕಾರ್ಯಾಚರಣೆಯ ವಿರುದ್ಧ ದನಿಯೆತ್ತುವ ನೈತಿಕತೆಯನ್ನೇ ಕಳೆದುಕೊಂಡಿದೆ. ಬೀದಿ ವ್ಯಾಪಾರಿಗಳ ಸಂಹಾರ ಕಾಂಗ್ರೆಸ್ ಬಿತ್ತಿದ ವಿಷ ಬೀಜ. ಬಿಜೆಪಿ ಇಂದು ಅದರ ಫಸಲು ತೆಗೆಯುತ್ತಿದೆ.

ಈ ಖೂಳ ವ್ಯಾಘ್ರ ಕಾರ್ಯಾಚರಣೆಯ ಹಿಂದೆ ಬಂಡವಾಳಶಾಹಿ ಕುಳಗಳ ನೇರ ಕೈವಾಡವಿದೆ. ಭಾರತ್ ಮಾಲ್, ಸಿ.ಟಿ. ಸೆಂಟರ್, ಮೋರ್ ಮುಂತಾದ ಬೃಹತ್ ಶಾಪಿಂಗ್ ಮಾಲ್‌ಗಳವರ, ಮಂಗಳೂರಿನ ಸೆಂಟ್ರಲ್ ಮಾರ್ಕೆಟ್ ಸುತ್ತ ಮುತ್ತ ತುಂಬಿರುವ ಮಾರ್ವಾಡಿಗಳ, ದೊಡ್ಡ ವ್ಯಾಪಾರಿ ಕುಳಗಳ ಅಮೇಧ್ಯ ತಿಂದು ಅವರ ತಿಜೋರಿ ಮಜಬೂತಾಗಿಸಲು ಬಡಪಾಯಿ ಬೀದಿವ್ಯಾಪಾರಿಗಳ ಅನ್ನದ ತಟ್ಟೆಗೆ ನಗರಪಾಲಿಕೆಯ ಧಣಿಗಳು, ಅಧಿಕಾರಿಗಳು ಕಲ್ಲು ಹಾಕುತ್ತಿದ್ದಾರೆ. ಅಷ್ಟಕ್ಕೂ ಈ ಬೀದಿ ವ್ಯಾಪಾರಿಗಳು ದೋ ನಂಬರ್ ದಂಧೆ ಮಾಡುತ್ತಿಲ್ಲ, ಒಂದು ಅಂದಾಜಿನ ಪ್ರಕಾರ ಮಂಗಳೂರು ನಗರದಲ್ಲಿ ನಡೆಯುವ ಬೀದಿ ವ್ಯಾಪಾರದಿಂದ ತುಂಬುವ ಹೊಟ್ಟೆಗಳ ಸಂಖ್ಯೆ





ಸುಮಾರು 50,000ದಷ್ಟು. ಮಂಗಳೂರು ನಗರಪಾಲಿಕೆಯ ವ್ಯಾಪ್ತಿಯಲ್ಲಿ ಬೀದಿ ವ್ಯಾಪಾರ ಮಾಡುವವರ ಸಂಖ್ಯೆ ಸುಮಾರು 1,500ಕ್ಕೂ ಮಿಕ್ಕಿ ಇದೆ. ಬೀದಿ ವ್ಯಾಪಾರಿಗಳನ್ನು ನಗರ ಸೌಂದರ್ಯೀಕರಣದ ಹೆಸರಲ್ಲಿ ಬೀದಿ ಪಾಲು ಮಾಡಿದರೆ ಅವರು ಹೊಟ್ಟೆ ಹೊರೆಯಲು ಯಾವ ದಾರಿ ಹುಡುಕಬೇಕು?

ಬೀದಿ ವ್ಯಾಪಾರಿಗಳು ಕೇವಲ ಮಂಗಳೂರು ನಗರದಲ್ಲಿ ಮಾತ್ರ ಇರುವುದಲ್ಲ, ಭಾರತದ ಒಟ್ಟು ಜನಸಂಖ್ಯೆಯ ಎರಡೂವರೆ ಶೇಕಡಾದಷ್ಟು ಜನರ ಉದ್ಯೋಗವೇ ಬೀದಿ ವ್ಯಾಪಾರ ಎಂದು ಕೇಂದ್ರ ಸರಕಾರದ ವರದಿಯೊಂದು ಸ್ಪಷ್ಟಪಡಿಸುತ್ತದೆ. ಸುಪ್ರೀಂಕೋರ್ಟ್‌ನ ಸ್ಪಷ್ಟ ನಿರ್ದೇಶನದ ಪ್ರಕಾರ ಪ್ರತೀ ರಾಜ್ಯ ಸರಕಾರ, ಸ್ಥಳೀಯಾಡಳಿತ ಸಂಸ್ಥೆಗಳು ಬೀದಿ ವ್ಯಾಪಾರಿಗಳನ್ನು ಒಕ್ಕಲೆಬ್ಬಿಸುವುದಕ್ಕಿಂತ ಮುಂಚೆ ಅವರಿಗೆ ಸಮರ್ಪಕ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು.

ಬೀದಿ ವ್ಯಾಪಾರಿಗಳ ಗ್ರಾಹಕರೂ ಶ್ರಮಿಕ ವರ್ಗದವರೇ ಆಗಿದ್ದಾರೆ. ಬೀದಿವ್ಯಾಪಾರ ಭಾರತದಂತಹ ದೇಶದಲ್ಲಿ ಬಡವರು ಉಡಲು, ತೊಡಲು, ಬಳಸಲು ಬೇಕಾಗುವ ಸಾಮಗ್ರಿಗಳು ಸಿಗುವ ಬಡವರ ಶಾಪಿಂಗ್ ಮಾಲ್‌ಗಳು.

ಬೀದಿ ವ್ಯಾಪಾರಿಗಳು ಫುಟ್‌ಪಾತ್‌ಗಳನ್ನು ಆಶ್ರಯಿಸಿ ಜನಸಂಚಾರಕ್ಕೆ ಅಡ್ಡಿಯುಂಟುಮಾಡುತ್ತಿದ್ದಾರೆ, ನಗರದ ಸೌಂದರ್ಯ ಕೆಡಿಸುತ್ತಿದ್ದಾರೆ ಎಂದು ನಗರಪಾಲಿಕೆಯ ಆಡಳಿತ ವರ್ಗ ಮತ್ತು ಆಯುಕ್ತರು ಆರೋಪಿಸುತ್ತಿದ್ದಾರೆ. ಆದರೆ ದೊಡ್ಡವರಿಂದ ಜನಸಂಚಾರಕ್ಕೆ, ನಗರ ಸೌಂದರ್ಯಕ್ಕೆ ಅಡ್ಡಿಯಾಗುತ್ತಿರುವುದನ್ನು ನೋಡಲು ಇವರ ಕಣ್ಣಿಗೆ ಚಾಳೀಸು ಕವಿದಿದೆ.

ಮಂಗಳೂರು ನಗರಪಾಲಿಕೆಯ ಅಧಿಕಾರ ಹಿಡಿದಿರುವ ಬಿಜೆಪಿ ಪಕ್ಷದ ದಕ್ಷಿಣ ಕನ್ನಡ ಜಿಲ್ಲಾ ಕಚೇರಿ ಇರುವ ಕೊಡಿಯಾಲ್‌ಬೈಲ್ ಪಿ.ವಿ.ಎಸ್ ಸರ್ಕಲ್ ಬಳಿ ಬಿಜೆಪಿ ಕಚೇರಿಯ ವಿರುದ್ಧ ದಿಕ್ಕಿಗೆ ಇರುವ ಬೃಹತ್ ವಾಣಿಜ್ಯ ಸಂಕೀರ್ಣವೊಂದು ಫುಟ್‌ಪಾತನ್ನು ಸಂಪೂರ್ಣವಾಗಿ ಆಕ್ರಮಿಸಿಕೊಂಡಿದೆ.

ಮಂಗಳೂರು ಮಹಾನಗರ ಪಾಲಿಕೆಯ ಕಚೇರಿಯ ಬಳಿಯೇ ಇರುವ ಪ್ರತಿಷ್ಠಿತ ವಾಣಿಜ್ಯ ಸಂಕೀರ್ಣವು ಫುಟ್‌ಪಾತನ್ನು ಆಕ್ರಮಿಸಿಕೊಂಡಿದ್ದಲ್ಲದೆ, ಅಲ್ಲಿನ ವ್ಯಾಪಾರಿ ಮಳಿಗೆಗಳು ತಮ್ಮ ಅಂಗಡಿಯ ಮುಂದೆ ಹಾಕಿರುವ ಶೀಟ್‌ಗಳು ರಸ್ತೆಯವರೆಗೂ ವಿಸ್ತರಿಸಿಕೊಂಡಿವೆ.

ಮಂಗಳೂರಿನ ಅತಿ ದೊಡ್ಡ ಶಾಪಿಂಗ್ ಮಾಲ್ ಎಂದು ಗುರುತಿಸಲ್ಪಡುವ ಸಿಟಿ ಸೆಂಟರ್ ಕಟ್ಟಡವು ಎಲ್ಲಾ ನಿಯಮಗಳನ್ನೂ, ಕಾನೂನುಗಳನ್ನೂ ಮೀರಿ ಅಕ್ರಮವಾಗಿ ತಲೆಯೆತ್ತಿದ್ದಾಗಿದೆ. ಸಿಟಿ ಸೆಂಟರ್ ಬಜರಂಗಿ ಗೂಂಡಾಗಳ ಅಡ್ಡೆಯೂ ಹೌದು.

ನಗರಪಾಲಿಕೆಯ ವತಿಯಿಂದ ಇತ್ತೀಚೆಗೆ ನಗರದ ವಿವಿಧೆಡೆ ಪೇ ಪಾರ್ಕಿಂಗ್ ವ್ಯವಸ್ಥೆಗಳನ್ನು ಮಾಡಲಾಗಿದ್ದು, ಪೇ ಪಾರ್ಕಿಂಗ್ ಏರಿಯಾಗಳೆಲ್ಲವೂ ಫುಟ್‌ಪಾತ್‌ಗಳೇ ಆಗಿವೆ. ಮಂಗಳೂರು ನಗರದಲ್ಲಿ ಫುಟ್‌ಪಾತ್‌ಗಳನ್ನೇ ಆಕ್ರಮಿಸಿ ನಿರ್ಮಿಸಲ್ಪಟ್ಟ ವಾಣಿಜ್ಯ ಸಂಕೀರ್ಣಗಳು ಬಹಳಷ್ಟಿವೆ.

ಇವರ್‍ಯಾರೂ ನಗರಪಾಲಿಕೆಯ ಖೂಳ ವ್ಯಾಘ್ರರ ಕಾರ್ಯಾಚರಣೆಯ ವ್ಯಾಪ್ತಿಗೆ ಬರುವುದಿಲ್ಲ, ಯಾಕೆಂದರೆ ಅವರೆಲ್ಲಾ ಶ್ರೀಮಂತರು, ದೊಡ್ಡವರು, ಪ್ರಭಾವಿಗಳು ಅವರಿಂದ ಪೊಲೀಸರಿಗೆ, ಕಾರ್ಪೋರೇಟರ್‌ಗಳಿಗೆ, ಪಾಲಿಕೆ ಅಧಿಕಾರಿಗಳಿಗೆ ಕಾಲಕಾಲಕ್ಕೆ ಕಪ್ಪ ಸಂದಾಯವಾಗುತ್ತಿರುತ್ತದೆ.

ಒಂದು ತಿಂಗಳ ಕಾಲ ಸುನಿಲ್ ಕುಮಾರ್ ಬಜಾಲ್ ನೇತೃತ್ವದ CITU ಬೀದಿವ್ಯಾಪಾರಿಗಳ ಪರ ಹೋರಾಟ ನಡೆಸಿದ ಬಳಿಕ ಮೊನ್ನೆ ಜೂನ್ ೭ನೇ ತಾರೀಖಿನಂದು ಮೇಯರ್ ಪ್ರವೀಣ್ ಕುಮಾರ್ ಮತ್ತು ಆಯುಕ್ತ ಡಾ ಕೆ.ಎನ್ ವಿಜಯಪ್ರಕಾಶ್ ಬೀದಿ ವ್ಯಾಪಾರಿಗಳಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸುವ ಭರವಸೆ ನೀಡಿದರು. ಪರ್ಯಾಯ ವ್ಯವಸ್ಥೆಯೇನು ಗೊತ್ತೆ?

ಮಂಗಳೂರು ಕೇಂದ್ರ ಮಾರುಕಟ್ಟೆಯ ಜನಸಂಚಾರ ವಿಲ್ಲದ, ವೇಸ್ಟೇಜ್‌ಗಳನ್ನು ಎಸೆಯುವ ಜಾಗದಲ್ಲಿ 60 ಬೀದಿ ವ್ಯಾಪಾರಿಗಳಿಗೆ ಪರ್ಯಾಯ ವ್ಯವಸ್ಥೆ. ಈ ಹಿಂದೆ ರೈತ ಮಹಿಳೆಯರು ತಮ್ಮ ಬೆಳೆಗಳನ್ನು ತಂದು ಮಾರಲೆಂದು ನಿಗದಿಯಾಗಿದ್ದ ಜಾಗವನ್ನು ಬೀದಿ ವ್ಯಾಪಾರಿಗಳಿಗೆ ನೀಡಲಾಗಿದೆ. ಆದರೆ ಇನ್ನುಳಿದ ಬೀದಿ ವ್ಯಾಪಾರಿಗಳೇನು ಮಾಡಬೇಕು? ನೀವು ಬೇಕಿದ್ದರೆ ಪಿಕ್‌ಪಾಕೆಟ್ ಮಾಡಿ ಕಳ್ಳತನ ಮಾಡಿ, ಜೂಜುಕೋರರಾಗಿ, ವೇಶ್ಯಾವಾಟಿಕೆ ಮಾಡಿ ಆದರೆ ಬೀದಿವ್ಯಾಪಾರ ಮಾತ್ರ ಮಾಡಬೇಡಿ ಎಂದು ಪರೋಕ್ಷ ಸಂದೇಶವನ್ನು ಪಾಲಿಕೆ ರವಾನಿಸುತ್ತಿದೆಯೇ?

ಕೋಲ್ಕತ್ತಾದಿಂದ ವಲಸೆ ಬಂದ ಬಡಪಾಯಿ ದಂಪತಿ ಕಳೆದ ಕೆಲವು ವರ್ಷಗಳಿಂದ ನಗರದ ಪಿರೇರಾ ಲಾಡ್ಜ್ ಬಳಿ ಚೂಡಿದಾರ್ ಪೀಸ್‌ಗಳನ್ನು ಮಾರಿ ಹೊಟ್ಟೆ ಹೊರೆಯುತ್ತಿದ್ದರು. ಇತ್ತೀಚೆಗೆ ಅಂದರೆ ಒಂದು ತಿಂಗಳ ಹಿಂದೆ ಗಂಡ ದಿಢೀರನೆ ತೀರಿಕೊಂಡ. ಬಡಪಾಯಿ ವಿಧವೆಗೆ ಎರಡು ಪುಟ್ಟ ಮಕ್ಕಳೂ ಇದ್ದಾರೆ. ಗಂಡ ತೀರಿಕೊಂಡರೂ ಹೊಟ್ಟೆಯ ಹಸಿವು ತಣಿಸಬೇಕಲ್ಲ? ಆಕೆ ಒಬ್ಬಂಟಿಯಾಗಿಯೇ ತನ್ನ ವ್ಯಾಪಾರವನ್ನು ಮುಂದುವರಿಸಿದಳು. ಕೆಲವು ದಿನಗಳ ಹಿಂದೆ ಅಲ್ಲಿಗೆ ಎರಗಿದ ಖೂಳ ವ್ಯಾಘ್ರ ಆಕೆಯ ಕಣ್ಮುಂದೆಯೇ ಆಕೆಯ ಮಾಲುಗಳನ್ನು ಲಾರಿಗೆ ತುಂಬಿಸಿತು. ಎರಡು ಮಕ್ಕಳನ್ನು ಹಿಡಿದು ಆಕೆ ಖೂಳ ವ್ಯಾಘ್ರರ ಬಳಿ ದಯಮಾಡಿ ನನ್ನ ಮಾಲು ಹಿಂದಿರುಗಿಸಿ ಎಂದು ಗೋಗರೆಯುವ ದೃಶ್ಯವಂತೂ ಹೃದಯವಿದ್ರಾವಕ ವಾಗಿತ್ತು. ಆಕೆಯ ಅಳು ಖೂಳ ವ್ಯಾಘ್ರರಿಗೆ ವಿಘ್ನ ಸಂತೋಷ ನೀಡುತ್ತಿತ್ತೇನೋ? ಅಷ್ಟಕ್ಕೇ ಬಿಟ್ಟು ಬಿಡದೆ, ಆಕೆ ಮಾಲುಗಳನ್ನು ಸ್ಟಾಕ್ ಇಟ್ಟ ಕೊಠಡಿಗೆ ತೆರಳಿ ಅದರ ಬೀಗವನ್ನು ಒಡೆದು ಅಲ್ಲಿದ್ದ ಮಾಲುಗಳನ್ನೂ ಸಂಪೂರ್ಣವಾಗಿ ದೋಚಿಕೊಂಡು ಹೋದರು. ಬಡಪಾಯಿ ವಿಧವೆಯ ಅಳು ಮುಗಿಲು ಮುಟ್ಟಿದರೂ ಮಂಗಳೂರಿನ ಕಾರ್ಪೋರೇಟ್‌ಗಳಿಗೆ, ಅಧಿಕಾರಿಗಳಿಗೆ ಕಿಂಚಿತ್ತೂ ಕರುಣೆ ಬರಲಿಲ್ಲ. ಆ ಬಡಪಾಯಿ ವಿಧವೆಯಿಂದ ಲೂಟಿ ಮಾಡಿದ ಚೂಡಿದಾರ್ ಪೀಸ್‌ಗಳನ್ನು ತಮ್ಮ ಹೆಂಡತಿ ಮಕ್ಕಳಿಗೆ ಬಳಸುವ ಮಂಗಳೂರಿನ ಚಿಡ್ಡಿ ಕಾರ್ಪೋರೇಟರ್‌ಗಳನ್ನು, ಭ್ರಷ್ಟ ಅಧಿಕಾರಿಗಳನ್ನು, ಕದ್ದು ತಿನ್ನುವುದರಲ್ಲೇ ಸುಖ ಅನುಭವಿಸುವ ಪೊಲೀಸರನ್ನು ಹರಾಮಿಗಳೆನ್ನದೇ ಇನ್ನೇನನ್ನಬೇಕು?

• ಇಸ್ಮತ್ ಫಜೀರ್

ಬ್ರಾಹ್ಮಣ ಪ್ರೀತಿಯೋ, 'ಬ್ರಾಹ್ಮಣ್ಯ'ದ ಪ್ರೀತಿಯೋ?

"ನಾನು ಬ್ರಾಹ್ಮಣ ದ್ವೇಷಿಯಲ್ಲ... ಬ್ರಾಹ್ಮಣರಿಂದಲೂ ಕಲಿಯುವುದು ಬಹಳಷ್ಟಿದೆ..."

"ಇಕ್ರಲಾ ವದಿರ್ಲಾ ಎಂಬ ಬಗೆಯ ಪದ್ಯಗಳನ್ನು ನಾನೀಗ ಬರೆಯಲಾರೆ... ನನ್ನಲ್ಲಿ ಈಗ ಆ ಆಕ್ರೋಶ ಉಳಿದಿಲ್ಲ..."


- ಹೀಗೆಂದು ನಮ್ಮ ದಲಿತ ಕವಿ ಡಾ. ಸಿದ್ದಲಿಂಗಯ್ಯನವರು ಕಾರ್ಯಕ್ರಮವೊಂದರಲ್ಲಿ ತಮ್ಮ ಮನದಾಳದ ಮಾತುಗಳನ್ನು ಹೇಳಿಕೊಂಡಿದ್ದಾರೆ ಎಂದು ಗೆಳೆಯರು ಹೇಳಿದಾಗ ನನಗೆ ಆಶ್ಚರ್ಯವೇನೂ ಆಗಲಿಲ್ಲ; ಬದಲಿಗೆ ನನ್ನೊಳಗೆ ಉಳಿದಿದ್ದ ವಿಷಾದವೊಂದು ಮತ್ತಷ್ಟು ಹೆಚ್ಚಾದಂತಾಯಿತು.

ಈ ವಿಷಾದ ಸಿದ್ದಲಿಂಗಯ್ಯನವರು ತಮ್ಮ 'ಊರು-ಕೇರಿ'ಗಳನ್ನು ಮೊದಲು ರಾಮಕೃಷ್ಣ ಹೆಗಡೆಯವರಿಗೂ ನಂತರ ಕುಮಾರಸ್ವಾಮಿಯವರಿಗೂ ಅರ್ಪಿಸಿದಾಗ, ರಾಮಾ ಜೋಯಿಸರು ಅನುವಾದಿಸಿದ 'ಮನುಸ್ಮೃತಿ'ಯನ್ನು ಬಿಡುಗಡೆಗೊಳಿಸಿದಾಗ, ಜನಾರ್ದನ ರೆಡ್ಡಿಯವರಿಂದ ತಮ್ಮ 'ನನ್ನ ಜನಗಳು' ಪದ್ಯವನ್ನು ಓದಿಸಿ ಸಂಪ್ರೀತರಾದಾಗ, ಮೊನ್ನೆ ಮೊನ್ನೆ ಯಡಿಯೂರಪ್ಪನವರನ್ನು 'ಆಧುನಿಕ ಬಸವಣ್ಣ' ಎಂದು ಬಣ್ಣಿಸಿದಾಗ ಬೆಳೆಯುತ್ತಾ ಬಂದದ್ದು. ಈಗ ಮತ್ತಷ್ಟು ಹೆಚ್ಚಾದಂತಾಯಿತಷ್ಟೆ.

ಬಹುಶಃ ಕನ್ನಡದ ಸಾಂಸ್ಕೃತಿಕ ಲೋಕಕ್ಕೆ ಇಂತಹ ವಿಷಾದಗಳು ಆಗಾಗ್ಗೆ ಕಾಡದಿರುವುದರಿಂದಲೇ ನಮ್ಮೆಲ್ಲ ಸಾಹಿತ್ಯ-ಸಾಂಸ್ಕೃತಿಕ ಚಿಂತಕರು ತಮ್ಮ ಸಿದ್ಧಾಂತಗಳನ್ನು 'ಪಕ್ಷಾಂತರ' ಮಾಡಿಕೊಂಡಾಗಲೆಲ್ಲ ನಮಗೆ ಏನೂ ಅನ್ನಿಸದಿರುವುದು - ಕನಿಷ್ಠ ಇದಕ್ಕೊಂದು ಪ್ರತಿಕ್ರಿಯೆ ನೀಡಬೇಕೆಂಬ ಜವಾಬ್ದಾರಿಯೂ ಇಲ್ಲದೆ ಹೋಗಿರುವುದು. ಹಾಗಾಗಿಯೇ ಜನರನ್ನು ಇನ್ನಿಲ್ಲದಷ್ಟು ಶೋಷಿಸುತ್ತಿರುವ, ಜನವಿರೋಧಿ ನೀತಿಗಳ ವಾರಸುದಾರರಾಗಿರುವ ಜನಾರ್ದನ ರೆಡ್ಡಿಯಂತಹವರ ಕೈಗೆ 'ಭಕ್ತರಪ್ಪ ಭಕ್ತರೋ ನನ್ನ ಜನಗಳು' ಪದ್ಯವನ್ನು ಕೊಟ್ಟು, ಅದೇ ಶೋಷಿತ ಜನರ ಎದುರು ವಾಚಿಸಬಯಸುವ ಕವಿಗಳ ಲಜ್ಜೆಹೀನ ನಡವಳಿಕೆ ನಮ್ಮಲ್ಲಿ ಲಜ್ಜೆ ಹುಟ್ಟಿಸದೆ ಇರುವುದು ಅಥವಾ ಈ ಎಲ್ಲವನ್ನೂ ಮುಗುಮ್ಮಾಗಿ ನೋಡುತ್ತಾ ಕುಳಿತಿರುವ ನಮ್ಮ ಸಾಂಸ್ಕೃತಿಕ ಲೋಕ ಜಾಣಕುರುಡು ಪ್ರದರ್ಶಿಸುತ್ತಿದೆಯೆ?

'ಮನುಸ್ಮೃತಿ' ಎಂಬುದು 'ಮನುಷ್ಯವಿರೋಧಿ ಸಂವಿಧಾನ'ವೆಂಬ ಕಾರಣಕ್ಕೆ ಅಂದು ಅಂಬೇಡ್ಕರ್ ಅವರು ಸಾರ್ವಜನಿಕವಾಗಿ ಅದನ್ನು ಸುಟ್ಟರು. ಇಂದು ಸಿದ್ದಲಿಂಗಯ್ಯನವರು ಅದನ್ನು ಸಾರ್ವಜನಿಕವಾಗಿ ಅನಾವರಣಗೊಳಿಸಿದರು. ಅಂದು ಬಸವಣ್ಣ ನಾಡಿನ ಸರ್ವಜಾತಿಯ ಜನರನ್ನೂ ಸಮಾನವಾಗಿ ಕಂಡು, ಅವರನ್ನೆಲ್ಲ ಸಮಾಜದ ಮುಖ್ಯವಾಹಿನಿಗೆ ತರಲು ದುಡಿದ. ಇಂದು ಯಡಿಯೂರಪ್ಪನವರು 'ವೀರಶೈವ ಮಹಾಸಭಾ'ದ ಬ್ಯಾನರ್‌ನಡಿಯಲ್ಲಿ ತಮ್ಮ ಜಾತೀಯ ಪ್ರಾಬಲ್ಯವನ್ನು ಗಟ್ಟಿಗೊಳಿಸಿಕೊಳ್ಳಲು, ತಮ್ಮ ಕುರ್ಚಿಯನ್ನು ಭದ್ರಪಡಿಸಿಕೊಳ್ಳಲು ದುಡಿದರು. ಹೀಗೆ ಅಂಬೇಡ್ಕರ್ ಅವರ ಆಶಯಗಳನ್ನು ಹಿಂದಕ್ಕೆಳೆಯುವ,

> ಸಿದ್ದಲಿಂಗಯ್ಯನವರು ಬ್ರಾಹ್ಮಣರ ದ್ವೇಷಿಯಾಗಬೇಕಾದದ್ದೇನೂ ಇಲ್ಲ. ಯಾರೂ ಯಾರನ್ನೂ ದ್ವೇಷಿಸುವಷ್ಟು ಅಮಾನವೀಯರೂ ಆಗಬೇಕಾಗಿಲ್ಲ. ಬ್ರಾಹ್ಮಣರಿಂದಷ್ಟೇ ಅಲ್ಲ, ಎಲ್ಲಾ ಜಾತಿ, ಜನಾಂಗಗಳಿಂದ ನಾವು ಜಾತ್ಯತೀತವಾಗಿ ಕಲಿಯಬೇಕಾಗಿರುವುದು ಬಹಳಷ್ಟಿದೆ- ಇದು ಎಲ್ಲರಿಗೂ ಗೊತ್ತಿರುವ, ಎಲ್ಲರಿಗೂ ಒಪ್ಪಿತವಾಗಿರುವ ಒಂದು ಸಾಮಾಜಿಕ ಮೌಲ್ಯ. ಆದರೆ ಸಿದ್ದಲಿಂಗಯ್ಯನವರು ಹೇಳಿದ 'ಬ್ರಾಹ್ಮಣ' ಎನ್ನುವ ಶಬ್ದ 'ಬ್ರಾಹ್ಮಣ್ಯ' ಎಂಬುದನ್ನು ತನ್ನ ಒಳಾರ್ಥದಲ್ಲಿ ಸೂಚಿಸುತ್ತಿರಬಹುದೆ?



ಬಸವಣ್ಣನ ಸಮಾಜವಾದಿ ಚಿಂತನೆಗಳಿಗೆ ವ್ಯತಿರಿಕ್ತವಾದ ಬಲಪಂಥೀಯ ನಿಲುವಿಗೆ ಸಿದ್ದಲಿಂಗಯ್ಯ ಬರುವುದಾದರೆ ಅವರು 'ಬ್ರಾಹ್ಮಣ್ಯ'ದ ಆರಾಧನೆಗೆ ನಿಂತಿದ್ದಾರೆಂದೇ ಅರ್ಥೈಸಿಕೊಳ್ಳಬೇಕಾಗುತ್ತದೆ. ಹಾಗಾಗಿಯೇ ಅವರು ಹೇಳಿದ 'ನಾನು ಬ್ರಾಹ್ಮಣರ ದ್ವೇಷಿಯಲ್ಲ' ಎಂಬ ಹೇಳಿಕೆಯನ್ನು 'ಬ್ರಾಹ್ಮಣ್ಯದ ದ್ವೇಷಿಯಲ್ಲ' ಎಂದೇ ತಿಳಿದುಕೊಳ್ಳಬೇಕಾಗುತ್ತದೆ. 'ಮನುಸ್ಮೃತಿ'ಯ ಅನಾವರಣದಿಂದಲೇ ಆರಂಭವಾದ ಅವರ 'ಬ್ರಾಹ್ಮಣ್ಯ'ದ ಪ್ರೀತಿ ನಿನ್ನೆ ನೀಡಿದ ಹೇಳಿಕೆಯ ಬಹಿರಂಗ ಶರಣಾಗತಿಯಷ್ಟೆ.

ಹೀಗೆ ವ್ಯಕ್ತಿಯೊಬ್ಬ ತನಗೆ ಅನ್ನಿಸಿದ ಸಿದ್ಧಾಂತಕ್ಕೆ ವಾಲುವುದಕ್ಕೆ ಯಾರ ಅಪ್ಪಣೆಯನ್ನೇನೂ ಕೇಳಬೇಕಾಗಿಲ್ಲ. ಅದು ಅವರ ವೈಯಕ್ತಿಕ ಆಸಕ್ತಿಗೆ ಸಂಬಂಧಿಸಿದ್ದಷ್ಟೆ. ಆದರೆ ಸಿದ್ದಲಿಂಗಯ್ಯನಂತಹ ಸಾರ್ವಜನಿಕ ಬದುಕಿನ ದೊಡ್ಡ ವ್ಯಕ್ತಿತ್ವವೊಂದು ಹೀಗೆ ತನ್ನದೇ ಮೂಲಚಿಂತನೆಗಳಿಗೆ ವಿರುದ್ಧವಾದ ನಿಲುವಿಗೆ ಬರುವುದಾದರೆ ಅದನ್ನು ಅನುಮಾನಿಸಲೇಬೇಕಾಗುತ್ತದೆ; ಪ್ರಶ್ನಿಸಲೇಬೇಕಾಗುತ್ತದೆ. ಹೇಗೆಂದರೆ ಸಿದ್ದಲಿಂಗಯ್ಯನವರು ಒಂದು ಕಾಲದ ಸಮಾಜವನ್ನು ತಮ್ಮ ಹೋರಾಟ, ಬರಹ, ಚಿಂತನೆಗಳಿಂದ ಪ್ರಭಾವಿಸಿದವರು, ಸಮಸಮಾಜದ ಆಶಯಗಳನ್ನು ಎತ್ತಿ ಹಿಡಿದವರು, ಬ್ರಾಹ್ಮಣ್ಯದ, ಪುರೋಹಿತಶಾಹಿಯ ಮುಖಗಳನ್ನು ತಮ್ಮ ಬರಹ, ಚಿಂತನೆ, ಹೋರಾಟಗಳ ಮೂಲಕ ಛಿದ್ರಗೊಳಿಸಲು ಯತ್ನಿಸಿದವರು, ಕನ್ನಡನಾಡಿನಲ್ಲಿ ದಲಿತ ಚಳವಳಿಯನ್ನು ಕಟ್ಟಿ ಬೆಳೆಸಿದವರು - ಈ ಎಲ್ಲಾ ಕಾರಣಗಳಿಗೆ ಸಿದ್ದಲಿಂಗಯ್ಯನವರ ವ್ಯಕ್ತಿತ್ವವನ್ನು ಸಮಾಜ ಸದಾ ತನ್ನ ಎಚ್ಚರದ ಕಣ್ಣುಗಳಿಂದ ನೋಡುತ್ತಿರುತ್ತದೆ. ತನ್ನ ನಿಲುವುಗಳನ್ನು ಚಿಂತಕನೊಬ್ಬ ಕಾವುಗೆಡದಂತೆ ಕಾಪಿಟ್ಟುಕೊಳ್ಳಬೇಕೆಂದು ಬಯಸುತ್ತಿರುತ್ತದೆ. ಹಾಗೆಂದು ಸಮಾಜ ವ್ಯಕ್ತಿಯೊಬ್ಬನನ್ನು ತನ್ನ ಚಾರಿತ್ಯದ ಪರಿಕಲ್ಪನೆಯ ಚೌಕಟ್ಟಿನೊಳಗೇ ಬದುಕಬೇಕೆಂದು ಕತ್ತಿನ ಪಟ್ಟಿ ಹಿಡಿದು ಕೇಳಬೇಕೆಂದೇನೂ ಇಲ್ಲ. ಆದರೆ ತನ್ನ ಚಿಂತನೆಗಳನ್ನು ಸಾರ್ವಜನಿಕ ಬದುಕಿನೊಂದಿಗೆ ಹಂಚಿಕೊಂಡ ಜವಾಬ್ದಾರಿಯುತ ಚಿಂತಕನೊಬ್ಬ ಅದಕ್ಕೆ ಬಾಧ್ಯಸ್ಥನಾಗಿರಬೇಕಾಗುತ್ತದೆ. ಹಾಗೆ ಇಲ್ಲವೆಂದಾದರೆ ಅಂದು ಸಿದ್ದಲಿಂಗಯ್ಯನವರು ಮಾಡಿದ ಹೋರಾಟಗಳು, ಅವರ ಚಿಂತನೆಗಳು, ಅವರ ಬರಹಗಳು ಎಲ್ಲವೂ ಸುಳ್ಳು ಎಂದಾಗುತ್ತದೆಯಲ್ಲವೆ?

ಹಾಗೆ ಸುಳ್ಳು ಎನ್ನುವುದಾದರೆ ಅವರ ಬರಹಗಳನ್ನು, ಬಂಡಾಯ ಮನೋಭಾವವನ್ನು ಅವರ ಬರಹಗಳ ಮೂಲಕ ಓದಿ ಅವರನ್ನು ತಮ್ಮ 'ರೋಲ್ ಮಾಡೆಲ್' ಮಾಡಿಕೊಂಡ ತಲೆಮಾರೊಂದು ಸಿದ್ದಲಿಂಗಯ್ಯನವರ ಈ ಪ್ರತಿಕ್ಷಣದ ಸಮಾಜವಿಮುಖಿ ನಡೆಯನ್ನು ಏನೆಂದು ಪರಿಗಣಿಸಬೇಕು?

ಅಂದು ಕಿ.ರಂ. ಅವರು ವಿಚಾರ ಸಂಕಿರಣದಲ್ಲಿ ಹೇಳಿದ ಇನ್ನೊಂದು ವಿಚಾರವೂ ನೆನಪಾಗುತ್ತಿದೆ. 'ಬರಹಗಾರರಲ್ಲಿ ನೀವು ಸಿದ್ದಲಿಂಗಯ್ಯನವರನ್ನು ಮಾತ್ರ ಯಾಕೆ ಟಾರ್ಗೆಟ್ ಮಾಡಿಕೊಂಡಿದ್ದೀರಿ? ಚಂಪಾ ಅವರಿಲ್ಲವೆ? ಅವರನ್ನು ಯಾಕೆ ಅಧಿಕಾರಕ್ಕಾಗಿ ತಮ್ಮ ಚಿಂತನೆಗಳನ್ನು, ಹೋರಾಟಗಳನ್ನು ರಾಜಿ ಮಾಡಿಕೊಂಡವರೆಂದು ನೀವು ಟೀಕಿಸುವುದಿಲ್ಲ?' ಎಂಬುದು ಕಿ.ರಂ. ಅವರ ಪ್ರಶ್ನೆಯಾಗಿತ್ತು.

ಆದರೆ ಚಂಪಾ ಅವರು ಸಾಹಿತ್ಯ ಪರಿಷತ್‌ನ ಅಧ್ಯಕ್ಷರಾಗಿದ್ದ ಸಂದರ್ಭದಲ್ಲೇ ಆಗಲೀ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿಯೇ ಆಗಲಿ ವ್ಯವಸ್ಥೆಯ ಲೋಪಗಳನ್ನು, ಸರ್ಕಾರದ ಜನವಿರೋಧಿ ನೀತಿಗಳನ್ನು ಸಾರ್ವಜನಿಕವಾಗಿ ಖಂಡಿಸುವಲ್ಲಿ ಹಿಂಜರಿಯಲಿಲ್ಲ. ಹಾಗೆಯೇ ತಮ್ಮ ಎಂದಿನ ಕೋಮುವಿರೋಧಿ ಚಿಂತನೆಗಳಿಂದ ಹಿಂದೆ ಸರಿಯಲಿಲ್ಲ. ಆದರೆ ಅವರ ಸಮಕಾಲೀನರಾಗಿ ದಲಿತ-ಬಂಡಾಯ ಚಳವಳಿಯ ಸಕ್ರಿಯ ಹೋರಾಟಗಾರರಲ್ಲೊಬ್ಬರಾಗಿದ್ದ ಸಿದ್ದಲಿಂಗಯ್ಯನವರು ಸರ್ಕಾರದ ಪರವಾದ ನಿಲುವುಗಳನ್ನು ಮಂಡಿಸುತ್ತಾ, ಇನ್ನೂ ಮುಂದುವರೆದು ಬಲಪಂಥೀಯ ಚಿಂತನೆಗಳ ಸಮರ್ಥನೆಗೆ ಇಳಿದಿರುವುದು ಅವರು ನೈತಿಕವಾಗಿ ಎಷ್ಟು ಕುಸಿದಿದ್ದಾರೆಂಬುದನ್ನು ತೋರಿಸುತ್ತಿದೆ.

ಒಟ್ಟು ಹನ್ನೆರಡು ವರ್ಷಗಳ ಕಾಲ ವಿಧಾನಪರಿಷತ್‌ನ ಸದಸ್ಯರಾಗಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ, ಈಗ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿ ಅಧಿಕಾರದಲ್ಲೇ ಉಳಿಯುವ ನಿರಂತರ ಪಯಣದಲ್ಲಿ ತೊಡಗಿರುವ ಸಿದ್ದಲಿಂಗಯ್ಯನವರ ಈ ಬಲಪಂಥೀಯ ನಿಲುವಿನ ನಡೆ ಏನನ್ನು ಸೂಚಿಸುತ್ತಿದೆ? ಕೋಮುವಾದಿ ಬಿಜೆಪಿ ಸರ್ಕಾರದಲ್ಲಿ ಮುಂದೆಯೂ ಇನ್ನೊಂದು ಅಧಿಕಾರದ ಕುರ್ಚಿಗಾಗಿ ಉಳಿಯಬೇಕೆಂಬ ಕ್ಷುಲ್ಲಕ ವಾಂಛೆಯೆ? ಅಥವಾ ಸಿದ್ಧಾಂತಗಳೆಲ್ಲ ಪೊಳ್ಳಾಗುತ್ತಿರುವ ಸಾಮಾಜಿಕ ಸತ್ಯವನ್ನೆ?

***

ಸಿದ್ದಲಿಂಗಯ್ಯನವರು ಈಗಲೂ ಹಾಗೆಯೇ ಇದ್ದಾರೆ. ಅದೇ ಮೆಲುದನಿಯ ಮಾತು, ಹಾಸ್ಯ ಚಟಾಕಿ, ವಿನಯಶೀಲತೆ - ಎಲ್ಲವೂ ಹಾಗೆಯೇ ಇವೆ. ಅವೆಲ್ಲವೂ ಇಂದಿಗೂ ಸಾರ್ವಜನಿಕ ವೇದಿಕೆಗಳಲ್ಲಿ ಹಾಗೆಯೇ ವ್ಯಕ್ತವಾಗುತ್ತಿವೆ. ಅವರು ಯಾವ ಸಾಹಿತ್ಯಕ-ಸಾಂಸ್ಕೃತಿಕ ವೇದಿಕೆಗಳಲ್ಲೂ ಎಂದೂ ಅಬ್ಬರದಿಂದ ಮಾತನಾಡುವುದಿಲ್ಲ; 'ಇಕ್ರಲಾ ವದಿರ್ಲಾ!' ಎಂಬ ಆಕ್ರೋಶದ ಧ್ವನಿಗಳೂ ಅವರ ಮಾತುಗಳಲ್ಲಿ ಕಂಡುಬರುವುದಿಲ್ಲ, 'ಸಾವಿರಾರು ನದಿಗಳು' ಕವಿತೆಯ ವಿಷಾದದ ಛಾಯೆಯೂ ಅವರ ಮಾತುಗಳಲ್ಲಿ ಸುಳಿಯುವುದಿಲ್ಲ.

ಕರ್ನಾಟಕದಲ್ಲಿ ಬಿ.ಎಸ್.ಪಿ ಚಳವಳಿ ಉಗ್ರಸ್ವರೂಪದಲ್ಲಿ ಪ್ರವರ್ಧಮಾನಕ್ಕೆ ಬರುತ್ತಿದ್ದ ದಿನಗಳಲ್ಲಿ ಮೈಸೂರಿನ ಮಾನಸಗಂಗೋತ್ರಿಯಲ್ಲಿ ಬಹುಜನ ವಿದ್ಯಾರ್ಥಿ ಚಳವಳಿಯ ಹುಡುಗರು 'ಅಭಿನವ ಅಂಬೇಡ್ಕರ್'ಗಳ ಹಾಗೆ ಸಿದ್ದಲಿಂಗಯ್ಯ ದೇವನೂರ ಮಹಾದೇವರಂತಹ ಹಿರಿಯ ಹೋರಾಟಗಾರರಿಗೆ ಎಸೆಯುತ್ತಿದ್ದ ನಿಷ್ಠುರದ ಪ್ರಶ್ನೆಗಳಿಗೆ ಅವರು ಅಂದೂ ನೇರವಾಗಿ ಉತ್ತರಿಸಲಿಲ್ಲ; ಇಂದೂ ಕೂಡ ಉತ್ತರಿಸಲಾರರೇನೋ?

ಇರಲಿ; ಅವರೀಗ ಹಿರಿಯರಾಗಿರುವುದರಿಂದ ಅಂದಿನ 'ಆಸ್ಫೋಟಕ' ಚಿಂತನೆಗಳನ್ನು ಅವರಿಂದ ನಾವು ನಿರೀಕ್ಷಿಸಲೂ ಬಾರದು; ಹಾಗೆಂದು ಅವರು ಒಂದು ಕಾಲದಲ್ಲಿ ತೀಕ್ಷ್ಣವಾಗಿ ವಿರೋಧಿಸಿದ ಬಲಪಂಥೀಯ, ಮಾನವವಿರೋಧಿ ಚಿಂತನೆಗಳತ್ತ ತುಡಿಯುತ್ತಿರುವುದನ್ನು ನೋಡುತ್ತಾ ಜಾಣಕುರುಡು, ಜಾಣಕಿವುಡನ್ನು ಪ್ರದರ್ಶಿಸಲೂಬಾರದು.

ಕೊನೆಯದಾಗಿ:

ಅಂದು ಕ್ರೈಸ್ಟ್ ಕಾಲೇಜಿನ ವಿಚಾರಸಂಕಿರಣದಲ್ಲಿ ಸಿದ್ದಲಿಂಗಯ್ಯನವರ ಕುರಿತು ಪರ-ವಿರೋಧದ ಚರ್ಚೆಗಳು ಕಾವೇರಿದ್ದಾಗ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಅಗಲಿದ ಕವಿ ಗೆಳೆಯ ಎನ್.ಕೆ. ಹನುಮಂತಯ್ಯನ ತಣ್ಣನೆಯ ಮಾತುಗಳು ನನಗೆ ಈಗಲೂ ನೆನಪಾಗುತ್ತಿವೆ:

"ಗೆಳೆಯ ಪೀರ್ ಬಾಷಾ 'ಸಿದ್ದಲಿಂಗಯ್ಯನವರು ಕವಿಯಾಗಿ ತೀರಿಕೊಂಡಿದ್ದಾರೆ' ಎಂದು ಹೇಳಿರುವುದರ ಹಿಂದೆ ನನಗೆ ಕಾಣುತ್ತಿರುವುದು ನಾವೆಲ್ಲ ಪ್ರೀತಿಸಿದ, ನಮ್ಮ ಲೋಕದೃಷ್ಟಿಯನ್ನು ಆರೋಗ್ಯಕರವಾಗಿಡಲು ಕಣ್ಣುಗಳನ್ನು ನೀಡಿದ ಕವಿಯೊಬ್ಬರು ತಮ್ಮ ಕಣ್ಣುಗಳನ್ನೇ ಕಳೆದುಕೊಂಡಿದ್ದಾರೆಂಬ ತೀವ್ರ ವಿಷಾದವೊಂದೇ. ಈ ವಿಷಾದದ ಹಿಂದೆ ನಮ್ಮ ಸಮಾಜದ ಕಹಿಸತ್ಯವೊಂದಿದೆ. ಈ ಕಹಿ ವಿಷವಾಗಿ ನಮ್ಮನ್ನೆಲ್ಲ ಬಲಿ ತೆಗೆದುಕೊಳ್ಳದಿರಲಿ ಎಂಬುದೇ ನಮ್ಮೆಲ್ಲರ ಒಳ ಆಸೆ..."

ಹಾಗೆಯೇ,

ಸಿದ್ದಲಿಂಗಯ್ಯನವರ ಪದ್ಯದ

ಹಸಿವಿನಿಂದ ಸತ್ತೋರು
ಸೈಜುಗಲ್ಲು ಹೊತ್ತೋರು
ಒದೆಸಿಕೊಂಡು ಒರಗಿದೋರು
ನನ್ನ ಜನಗಳು

***

ಕಾಲು ಕೈ ಹಿಡಿಯೋರು
ಕೈ ಮಡಗಿಸಿಕೊಳ್ಳೋರು
ಭಕ್ತರಪ್ಪ ಭಕ್ತರೋ
ನನ್ನ ಜನಗಳು

ಎಂಬ ಸಾಲುಗಳನ್ನು ಬಳ್ಳಾರಿಯ ಹಸಿದ ಬಡಜನರ ಮುಂದೆ ಓದಿದ ಜನಾರ್ದನ ರೆಡ್ಡಿಯವರ ಫ್ಯೂಡಲ್ ವೈಖರಿ, ಇದಕ್ಕೆ ಸಾಕ್ಷಿಯಾಗಿದ್ದ ಕವಿ ಸಿದ್ದಲಿಂಗಯ್ಯನವರ ಜಾಣನಗೆ ಈ ನಾಡಿನ ಈ ಹೊತ್ತಿನ ಸಾಂಸ್ಕೃತಿಕ-ಸಾಮಾಜಿಕ ತಳಮಳಗಳ ರೂಪಕದಂತೆ ನನಗೆ ಕಾಣುತ್ತಿದೆ.

• ಮಂಜುನಾಥ್‌ಲತಾ


ಪುಸ್ತಕ ಪರಿಚಯ



• ಚಂದ್ರಶೇಖರ್ ಐಜೂರ್

ಅಪರಿಮಿತದ ಕತ್ತಲೆ

'ನಾವು ಕೊಳಕು ಬಟ್ಟೆಗಳ ಮತ್ತು ಕೊಳಕು ಪೀಠೋಪಕರಣಗಳ ಬಗ್ಗೆ ನಾಚಿಕೆ ಪಟ್ಟುಕೊಳ್ಳುವುದಾದರೆ ಕೊಳಕು ವಿಚಾರಗಳು ಮತ್ತು ಕೊಳಕು ತತ್ವಗಳ ಬಗ್ಗೆಯೂ ಹೆಚ್ಚು ನಾಚಿಕೆ ಪಟ್ಟುಕೊಳ್ಳಬೇಕಾಗುತ್ತದೆ. ಒಳಗಿರುವ ಮಾಂಸಕ್ಕಿಂತ ಅದನ್ನು ಮುಚ್ಚಿದ ಹೊದಿಕೆಯೇ ಚೆನ್ನಾಗಿ ಕಾಣುವುದು ದುಃಖದ ವಿಷಯ.' ಇದು ಆಲ್ಬರ್ಟ್ ಐನ್‌ಸ್ಟೀನ್ ಹೇಳಿದ ಮಾತು. ಜಾತಿ ಸಮಾಜದ ಎದುರು ಲೇಖಕನೊಬ್ಬ ಅನುಭವಿಸಿದ ತಲ್ಲಣಗಳು, ಮತಾಂತರವನ್ನು ಒಳಗಣ್ಣಿನಿಂದ ನೋಡುತ್ತಿರುವ ದಲಿತರ ಸ್ವಾಭಿಮಾನ ಹಾಗೂ ಆಪಾಥಭೂತಿ ಸಮಾಜಕ್ಕೆ ಲೇಖಕರು ನೀಡಿರುವ ಪ್ರತಿಕ್ರಿಯೆಗಳನ್ನು ಒಂದೆಡೆ ಒಟ್ಟುಮಾಡಿರುವ ಕೃತಿಯಿದು. ಕವಿ ಮೂಡ್ನಾಕೂಡು ಚಿನ್ನಸ್ವಾಮಿಯವರ ಈ ವೈಚಾರಿಕ ಬರಹಗಳು ಬುದ್ಧನ ಧ್ಯಾನದಲ್ಲಿ, ಅಂಬೇಡ್ಕರರ ಹೋರಾಟದ ಕಿಚ್ಚಿನ ಭಗ್ನ ಕನಸುಗಳಲ್ಲಿ, ಸ್ಥಿತ್ಯಂತರದ ಗಳಿಗೆಯ ಬದಲಾವಣೆಯ ಗಾಳಿಗಾಗಿ ತಹತಹಿಸುತ್ತವೆ. ಜಾತಿ ಪದ್ಧತಿ ಎಂಬುದು ಭಾರತದ ಅಲಿಖಿತ ಸಂವಿಧಾನ, ಇದು ಅಂಬೇಡ್ಕರರು ರಚಿಸಿದ ಸಂವಿಧಾನಕ್ಕಿಂತಲೂ ಶಕ್ತಿಶಾಲಿ ಎಂಬುದನ್ನು ಲೇಖಕರು ಇಂಡಿಯಾದ ಮಾನವ ಹಕ್ಕುಗಳ ಉಲ್ಲಂಘನೆಯೆಂಬ ಸೀಳು ಕನ್ನಡಿಯೆದುರು ನಿಂತು ತಮ್ಮ ವಾದ ಮಂಡಿಸುತ್ತಾರೆ. ವರ್ತಮಾನದ ತಲ್ಲಣಗಳಿಗೆ ಕಣ್ಣು ಕಿವಿಯಾಗಿರುವ ಇಲ್ಲಿನ ಅನೇಕ ಬರಹಗಳು ಜಾತಿ ಮತ್ತು ಅಸ್ಪೃಶ್ಯತೆ, ಧರ್ಮ ಮತ್ತು ಮತಾಂತರಗಳ ಅಪರಿಮಿತ ಕತ್ತಲೆಯ ಎದುರು ಸಂಘರ್ಷಕ್ಕಿಳಿಯದೆ ಬುದ್ಧನ ದಿವ್ಯ ಬೆಳಕಿನ ಹೊಸ ಹಾದಿಗಾಗಿ ಹಂಬಲಿಸುತ್ತವೆ. ಇದನ್ನು ಅವರ 'ಪೇಜಾವರರಿಗೊಂದು ಪತ್ರ'ದಲ್ಲಿ ಸ್ಪಷ್ಟವಾಗಿ ಗಮನಿಸಬಹುದು: 'ಭಗವದ್ಗೀತೆ ಬೌದ್ಧದ್ರವ್ಯವಿಲ್ಲದಿದ್ದರೆ ಶುಷ್ಕ ಯುದ್ಧ ಪ್ರಲಾಪವಾಗಿರುತ್ತಿತ್ತು, ಹಿಂದನ್ನು ಮತ್ತು ಮುಂದನ್ನು ಬದಿಗಿರಿಸಿ ಇಂದನ್ನು ಇಲ್ಲಿಯೆ ಮತ್ತು ಈಗಲೇ ವಿಶ್ಲೇಷಿಸುವ ಧರ್ಮ ಬೌದ್ಧ ಧರ್ಮ. ಪೇಜಾವರರಿಗೆ ಬ್ರಾಹ್ಮಣರು ಮತಾಂತರವಾಗಬೇಡಿ ಎಂದು ಹೇಳುವ ಹಕ್ಕಿದೆಯೆ ಹೊರತು ದಲಿತರು ಮತಾಂತರವಾಗಬಾರದು ಎಂದು ಹೇಳುವ ಹಕ್ಕಿಲ್ಲ, ಅದು ತೋಳ ಕುರಿಮರಿಗೆ ಸಾಂತ್ವನ ಹೇಳಿದಂತಾಗುತ್ತದೆ.'




ಡಾ. ಮೂಡ್ನಾಕೂಡು ಚಿನ್ನಸ್ವಾಮಿ

ಲೇಖಕರು: ಡಾ. ಮೂಡ್ನಾಕೂಡು ಚಿನ್ನಸ್ವಾಮಿ
ಪ್ರಕಾಶಕರು: ಸುಮೇಧ ಪ್ರಕಾಶನ
ಪುಟಗಳು: 132, ಬೆಲೆ: ರೂ.80, ಪ್ರಕಟಣೆ: 2010

ವ್ಯಂಗ್ಯ (ವಿ)ಚಿತ್ರ

ದಿನೇಶ್ ಅಮಿನ್‌ಮಟ್ಟು ಅವರ ಲೇಖನ ಮತ್ತು ಪಿ.ಮಹಮ್ಮದ್ ಅವರ ಕಾರ್ಟೂನ್ ನೋಡಲಿಕ್ಕೆಂದೇ ಅನೇಕರು ಪ್ರಜಾವಾಣಿ ಕೊಳ್ಳುವುದನ್ನು ತೀರಾ ಹತ್ತಿರದಂತೆ ಕಂಡಿದ್ದೇನೆ. ಒಮ್ಮೊಮ್ಮೆ ನಮ್ಮ ಅಕಾಡೆಮಿಕ್ ಚರ್ಚೆಯಾಚೆಗೂ ದಾಟಿ ಗೆಳೆಯರ ವಲಯಗಳಲ್ಲಿ ಇನ್ನೇನೂ ಮಾತುಗಳೆಲ್ಲ ತೀರಿಕೊಂಡವು ಎಂಬ ಹೊತ್ತಿನಲ್ಲಿ ಹಠಾತ್ ದಿನೇಶರ ಬರಹಗಳು, ಮಹಮ್ಮದ್ ಅವರ ಕಾರ್ಟೂನ್ ವಿಷಾದ ತುಂಬಿಕೊಂಡ ಗಳಿಗೆಗಳಲ್ಲಿ ವಿಶ್ವಾಸ ತುಂಬಲು ಯತ್ನಿಸಿವೆ. ಬರೀ ತೌಡು ಕುಟ್ಟುವ ಸಭೆ ಸೆಮಿನಾರುಗಳು ಬೇಸರ ತರಿಸುವ ಹೊತ್ತಿನಲ್ಲಿ ಆ ದಿನ ಬೆಳಗ್ಗೆ ಕಂಡ ಮಹಮ್ಮದರ ಕಾರ್ಟೂನ್ ನೆನಪಾಗಿ ನಗೆ ತರಿಸುವುದು ಉಂಟು. ಡಾ.ಬಿ.ಎಸ್.ಯಡಿಯೂರಪ್ಪನವರ ಚೂಪು ಮೀಸೆ, ಚದುರಿದ ಹುಬ್ಬು ನಡುವೆ ಕೇಸರಿ ತಿಲಕ, ಬಿಳಿಬಣ್ಣದ ಡ್ರೆಸ್‌ಕೋಡ್, ಸಿಟ್ಟುಮಾಡಿಕೊಂಡಾಗ ಕಾಣುವ ಹಣೆಯ ಮೇಲಿನ ಗೆರೆಗಳು... ಕಳೆದ ನಾಲ್ಕು ವರ್ಷಗಳಲ್ಲಿ ಮಹಮ್ಮದ್ ಅವರ ಕೈಗೆ ಕನಿಷ್ಠ ಮುನ್ನೂರಕ್ಕೂ ಹೆಚ್ಚು ಸಲವಾದರೂ ಸಿಕ್ಕಿವೆ. ಯಡಿಯೂರಪ್ಪನವರು ಮಹಮ್ಮದ್ ಅವರ ಕೈಯಲ್ಲಿ ಸಿಕ್ಕಿ ನಕ್ಕಿದ್ದು ಕಮ್ಮಿ.



ಶಾಸಕರನ್ನು ಗಣಿ ಲಾರಿಯಲ್ಲಿ ತುಂಬಿಕೊಂಡು ಬಂದು 'ಸ್ಥಿರ ಸರ್ಕಾರಕ್ಕೆ ಇನ್ನೊಂದು ಲೋಡ್ ತರ್‍ಲಾ ಸಾರ್' ಎನ್ನುತ್ತಿರುವ ಬಳ್ಳಾರಿ ದೇಶದ ಡ್ರೈವರ್, ಮತ್ತೊಂದು ವ್ಯಂಗ್ಯ ಚಿತ್ರದಲ್ಲಿ 1992ರ ದುರಂತದ ನಂತರ 'ಶಿಕ್ಷಣ, ಉದ್ಯೋಗ ಮತ್ತು ರಕ್ಷಣೆ ಕೊಡಿ' ಎಂದು ಅಂಗಲಾಚುತ್ತಿರುವ ಒಬ್ಬ ನಿರ್ಗತಿಕ ಮುಸ್ಲಿಮ್ ಯುವಕನಿಗೆ ವಾಜಪೇಯಿ 'ದುಃಖಿಸಬೇಡ ಮಸೀದಿಯನ್ನು ಮತ್ತೆ ನಿರ್ಮಿಸಿ ಕೊಡುತ್ತೇವೆ' ಎಂದು ಹೇಳುವ ಭಂಗಿಯಲ್ಲಿ ನಿಂತಿದ್ದರೆ ಪಕ್ಕದಲ್ಲಿ 'ಎಲ್ಲರೂ ನೋಡಿ ಸರಕಾರ ಮತ್ತೆ ಮುಸ್ಲಿಮರನ್ನು ಸಂತುಷ್ಟಿಗೊಳಿಸುವ ತಂತ್ರ ನಡೆಸಿದೆ...' ಎಂದು ಮತ್ತೊಬ್ಬ ರಾಜಕಾರಣಿ ಜೋರು ದನಿ ತೆಗೆದು ಕೂಗುತ್ತಿದ್ದಾನೆ. ಜೆಡಿಎಸ್-ಬಿಜೆಪಿ ಮೈತ್ರಿ ಸರ್ಕಾರವಿದ್ದ ದಿನಗಳಲ್ಲಿ ದೇವೇಗೌಡರಿಗೆ ಪ್ರಚಂಡ ಐಡಿಯಾಗಳನ್ನು ಕೊಟ್ಟು ಸರ್ಕಾರ ಉರುಳಿಸಲು ನೆರವಾದ ಮಹಮ್ಮದರ ಕಾರ್ಟೂನ್‌ಗಳನ್ನು ಪ್ರಜಾವಾಣಿ ಓದುಗರು ಮರೆತಿರಲಿಕ್ಕಿಲ್ಲ, ಮಹಮ್ಮದ್ ಅವರ ಪೆನ್ನು ಗೆರೆಗಳಾಗಿ, ವ್ಯಂಗ್ಯ ಚಿತ್ರಗಳಾಗಿ ದುಡಿದಿರುವುದನ್ನು ಕಾಣಲು ಓದುಗರು 'ವ್ಯಂಗ್ಯ (ವಿ)ಚಿತ್ರ'ವನ್ನು ನೋಡಲೇ ಬೇಕು.

'ಮಹಮ್ಮದ್ ಪ್ರಾಯಶಃ ಇವತ್ತು ಕರ್ನಾಟಕದ ಶ್ರೇಷ್ಠ ವ್ಯಂಗ್ಯಚಿತ್ರಕಾರ ಎನ್ನುವುದರಲ್ಲಿ ಯಾರಿಗೂ ಹೆಚ್ಚಿನ ಅನುಮಾನವಿರಲಾರದು. ವಿರೋಧ ಪಕ್ಷಗಳು ತಮಗೆ ಅನುಕೂಲವಾದಾಗ ಮಾತ್ರ ವಿರೋಧ ಪಕ್ಷಗಳಾಗುವ ಈ ಕೆಟ್ಟ ಕಾಲದಲ್ಲಿ ಮಹಮ್ಮದ್ ಕರ್ನಾಟಕದ ಸಮರ್ಥ ವಿರೋಧಪಕ್ಷವಾಗಿದ್ದಾರೆ. ಖಚಿತ ಪ್ರಗತಿಪರ ದೃಷ್ಟಿಕೋನವುಳ್ಳ ವ್ಯಾಖ್ಯಾನಕಾರರಾಗಿ ಹಾಗೂ ಏಕಕಾಲಕ್ಕೆ ಮೂಲಭೂತವಾದಿಗಳನ್ನೂ ಪ್ರಗತಿಪರರನ್ನೂ ಛೇಡಿಸಬಲ್ಲ ಸ್ವಾತಂತ್ರ್ಯವನ್ನು ಉಳಿಸಿಕೊಂಡಿರುವ ಸ್ವತಂತ್ರ ಬುದ್ಧಿಜೀವಿಯಾಗಿಯೂ ಮಹಮ್ಮದ್ ರೂಪುಗೊಂಡಿದ್ದಾರೆ' ಎಂಬ ಡಾ.ನಟರಾಜ್ ಹುಳಿಯಾರರ ಪ್ರಸ್ತಾವನೆಯ ಮಾತುಗಳು ಮಹಮ್ಮದರ ಕಾರ್ಟೂನ್ ಶಕ್ತಿಯ ಹೆಚ್ಚುಗಾರಿಕೆಯನ್ನು ತೋರಿಸುತ್ತವೆ.

ಲೇಖಕರು: ಪಿ.ಮಹಮ್ಮದ್
ಪ್ರಕಾಶಕರು: ಚಿಂತನ ಪುಸ್ತಕ
ಪುಟಗಳು: 140, ಬೆಲೆ: ರೂ.140, ಪ್ರಕಟಣೆ: 2010



ಬದುಕು ಬಡಿಗನ ಸಾಲೆ,
ಬಡಿಯುತ್ತದೆ ಅದು
ತನ್ನದೇ ಕುಲುಮೆಯಲಿ
ಕಾಯಿಸಿ ಕೆಂಪಾಗಿಸಿ
ಕ್ಷಣವೂ ಬಿಡುವಿಲ್ಲದ ಬಡಿಗನಂತೆ
ಯಾವುದನ್ನೋ ಸುತ್ತಿಗೆ ಮಾಡಿ

ಪ್ರತಿ ಪೆಟ್ಟುಗಳು
ಕೊಟ್ಟ ನೋವಿನಲಿ
ನಲಿವಿನ ನೂರು ನಿರೀಕ್ಷೆಗಳು,
ಬೋಧಿಸುತ್ತದೆ ಬಡಿವ ಸುತ್ತಿಗೆ
ಕತ್ತಿಯಾಗು ಕೋವಿಯಾಗು
ನೇಗಿಲಾಗು ಗುದ್ದಲಿಯಾಗು
ಖುರ್ಚಿಯಾಗು ಭರ್ಜಿಯಾಗು
ಅಂತಾಗು ಇಂತಾಗು.....

ಕರುಣೆಯಿಲ್ಲದ ಸಂತೆಯಲಿ
ಕೊಂಡವರ ಕೈಯ್ಯೊಳಗೆ
ಕರಗದ ದುಃಖದ ಹೊತ್ತು
ದುಡಿವ ದೇಹ ಕಬ್ಬಿಣವಾಗಿ
ಜೀವ ಮರುಗುವುದು
ಬಡಿದು ಮೂಡಿದ ಆಕಾರದೊಳಗೆ

ಸಾಲೆ-ಸಂತೆಗಳ ಗದ್ದಲದಲ್ಲಿ
ಕಂಬನಿಯ ಸದ್ದು ಕೇಳಿಸದು,
ನೋವುಗಳ ಕಾಪಿಟ್ಟು
ಜೀವ ಕಾಯುವುದು,
ಒಮ್ಮೆಯಾದರೂ ಚೆಲ್ಲಬಹುದಲ್ಲ
ಕರುಣೆಯ ಹನಿನೀರು
ಬಡಿಗನ ಕಣ್ಣಿನಲ್ಲು!

• ಗಣೇಶ್ ಹೊಸ್ಮನೆ

ಬಿನಾಯಕ್ ಸೇನ್ ಸಂದರ್ಶನ



(2ನೇ ಪುಟದಿಂದ)

ಅಷ್ಟೆ. ಆದ್ದರಿಂದ ನನ್ನ ಬಂಧನದಿಂದ ಪಿ.ಯು.ಸಿ.ಎಲ್‌ನ ಮೇಲೆ ಯಾವುದೇ ಪರಿಣಾಮ ಉಂಟಾಗುವುದಿಲ್ಲ.

ನಿಮ್ಮ ಪರವಾಗಿ ನಡೆದ 'ಬಿನಾಯಕ್ ಸೇನ್ ರಕ್ಷಿಸಿ' ಆಂದೋಲನದ ಕುರಿತಾಗಿ ಹೇಳುವುದಾದರೆ ಇಂತಹ ಅಭೂತಪೂರ್ವ ಬೆಂಬಲ ವ್ಯಕ್ತವಾಗಿದ್ದು ನಿಮಗೆ ಅಚ್ಚರಿ ಉಂಟುಮಾಡಿದೆಯೆ?

ಇದು ನನ್ನ ವೈಯಕ್ತಿಕ ಪ್ರಾಮುಖ್ಯತೆಯನ್ನು ಪ್ರತಿನಿಧಿಸುವುದಿಲ್ಲ, ಒಂದು ದೇಶವಾಗಿ ಸದ್ಯದ ನಮ್ಮ ರಾಜಕೀಯ ಜೀವನದ ಸಂಯೋಗದ ಬಗ್ಗೆ ದೇಶವ್ಯಾಪಿ ಜನರಿಗೆ ಮುತುವರ್ಜಿ ಇದೆ ಎಂಬುದನ್ನು ಪ್ರತಿನಿಧಿಸುತ್ತದೆ.

ಮೊನ್ನೆ ಕೊಲ್ಕತ್ತಾದ ಯುನಿವರ್ಸಿಟಿ ಇನ್‌ಸ್ಟಿಟ್ಯೂಟ್‌ನ ಸಮಾರಂಭವೊಂದನ್ನು ಉದ್ದೇಶಿಸಿ ನಾನು ಮಾತನಾಡಿದೆ. ಸುಮಾರು 900 ಜನರ ಆಸನ ಸಾಮರ್ಥ್ಯ ಹೊಂದಿದ್ದ ಸಭಾಂಗಣ ನಿಲ್ಲಲಿಕ್ಕೂ ಜಾಗವಿಲ್ಲದಂತೆ ತುಂಬಿಹೋಗಿತ್ತು. ಇದರರ್ಥ ಬಿನಾಯಕ್ ಸೇನ್ ಎಂತಹ ಗ್ರೇಟ್ ವ್ಯಕ್ತಿ ಎಂದಲ್ಲ, ಬದಲಾಗಿ ನಮ್ಮ ದೇಶ ಸದ್ಯ ಇರುವ ಸ್ಥಿತಿಯ ಬಗ್ಗೆ ಜನ ಚಿಂತಿತರಾಗಿದ್ದಾರೆ ಎಂಬುದಾಗಿದೆ.

ರಾಜ್ಯ ಸರ್ಕಾರವು ತಮ್ಮ ವಿರುದ್ಧ ನಾರಾಯಣ ಸನ್ಯಾಲ್‌ನ ತಮ್ಮ ಭೇಟಿಯ ಆರೋಪವನ್ನು ಹೊರಿಸಿದೆ. ಈ ಆಪಾದನೆಗಳು ಸುಪ್ರೀಂಕೋರ್ಟ್‌ನಲ್ಲಿ ನಿಲ್ಲದೆ ಇದ್ದುದರ ಬಗ್ಗೆ ನಿಮ್ಮ ಅಭಿಪ್ರಾಯವೇನು?

95 ಸಾಕ್ಷಿದಾರರ ಪುರಾವೆಗಳನ್ನು ಪರೀಕ್ಷಿಸಲು ರಾಜ್ಯವು ಮೂರು ವರ್ಷಗಳ ಕಾಲ ತೆಗೆದುಕೊಂಡಿತು. ನ್ಯಾಯಾಲಯ ಪ್ರಕ್ರಿಯೆಯ ಭಾಗವಾಗಿ ನಾನು ಎರಡು ವರ್ಷ ಜೈಲಿನಲ್ಲಿ ಇರಬೇಕಾಯಿತು. ರಾಜ್ಯದ ದುಬಾರಿ ಮೊಕದ್ದಮೆಯಲ್ಲಿ ನಡೆದ ಈ ವಿಚಾರಣೆಯ ನಿಜವಾದ ತೀರ್ಪಿನಲ್ಲಿ ಯಾವುದೇ ಒಂದೇ ಒಂದು ಉಲ್ಲೇಖ/ಪುರಾವೆಯ ಕ್ರಾಸ್ ಎಕ್ಸಾಮಿನೇಷನ್ ನಡೆದಿರಲಿಲ್ಲ, ಈ ಕೇಸ್‌ನಲ್ಲಿ ರಾಷ್ಟ್ರ ದ್ರೋಹದ ಪುರಾವೆ ಇಲ್ಲ ಎಂದು ನಾವು ತೀರ್ಪಿನ ವಿರುದ್ಧ ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್‌ಗೆ ಅಪೀಲ್ ಹೋಗಿದ್ದೆವು. ಮೊದಲು ಇಲ್ಲಿ ನನಗೆ ಈ ಆಪಾದನೆಗಾಗಿ ಜೀವಾವಧಿ ಶಿಕ್ಷೆ ವಿಧಿಸಲಾಗಿತ್ತು, ಆದರೆ ಸುಪ್ರೀಂ ಕೋರ್ಟ್‌ನಲ್ಲಿ ಇದಕ್ಕೆ ಸೂಕ್ತ ಸಾಕ್ಷ್ಯಾಧಾರಗಳಿಲ್ಲ ಎಂದು ವಜಾ ಮಾಡಲಾಗಿದೆ.

ರಾಜ್ಯ ಉಲ್ಲೇಖಿಸುತ್ತಿರುವ ಆಪಾದಿತ ದಾಖಲೆಗಳು ಯಾವುವು?

ರಾಜ್ಯವು ನ್ಯಾಯಸಮ್ಮತವಾಗಿ ವಶಪಡಿಸಿಕೊಂಡಿರುವ ದಾಖಲೆಗಳು ಇದಕ್ಕೆ ಸಂಬಂಧಿಸಿದಂತೆ ಯಾವುದೇ ಸಂಬಂಧವನ್ನು ಪುಷ್ಟೀಕರಿಸಿಲ್ಲ, ಈ ಎಲ್ಲಾ ದಾಖಲೆಗಳ ಮೇಲೆ ನನ್ನ ಸಹಿ ಇದೆ. ಆದರೆ ನನ್ನ ಸಂಬಂಧವನ್ನು ತಿಳಿಸುವ ಉದ್ದೇಶವಿರುವ ಮುಖ್ಯವಾದ ದಾಖಲೆಯ ಮೇಲೆಯೆ ನನ್ನ ಸಹಿ ಇಲ್ಲ, ಪ್ರಾಸಿಕ್ಯೂಟರ್ ರವರು ಇದಕ್ಕೆ ಕೊಡುವ ಕಾರಣವೆಂದರೆ 'ಅದೇಗೊ ಇದರ ಸಹಿ ಬೇರೆ ದಾಖಲಾತಿಗಳ ನಡುವೆ ಹೋಗಿ ಸೇರಿಕೊಂಡಿದೆಯಂತೆ!'. ತುಂಬಾ ಗಂಭೀರವೆನಿಸಿದ ಪ್ರಕರಣದಲ್ಲಿ ಪ್ರಾಸಿಕ್ಯೂಟರ್‌ರ ಇಂತಹ ಹೇಳಿಕೆ ನಿಜಕ್ಕೂ ಹಾಸ್ಯಾಸ್ಪದ.

ಇಷ್ಟು ಮಾತ್ರವಲ್ಲ ಈ ಕೇಸ್‌ನ ಮುಖ್ಯ ಹಿರಿಯ ತನಿಖಾಧಿಕಾರಿಯಾದ ಮಿಸ್ಟರ್ . ರಜಪೂತ್‌ರವರ ಹೇಳಿಕೆಯನ್ನು ಗಮನಿಸಿ. ನನ್ನ ಬೇಲ್‌ನ ವಿಚಾರಣೆ ಬಂದಾಗ ಸುಪ್ರೀಂಕೋರ್ಟ್‌ಗೆ ಇವರು ಸಲ್ಲಿಸಿದ ಅಫಿಡವಿಟ್‌ನಲ್ಲಿ ಸಹ-ಆರೋಪಿಯನ್ನು ಮಹೀಂದ್ರ ಹೋಟೆಲ್‌ನಿಂದ ಬಂಧಿಸಲಾಯಿತು ಎಂದು ಹೇಳಿದ್ದಾರೆ. ಆದರೆ ಮುಖ್ಯ ಪ್ರಾಸಿಕ್ಯೂಷನ್ ಹೇಳುವಂತೆ ಆತನನ್ನು ಸ್ಟೇಷನ್ ರೋಡ್‌ನಲ್ಲಿ ಬಂಧಿಸಲಾಗಿದೆ. ಈ ವ್ಯತ್ಯಾಸದ ಕುರಿತಾಗಿ ಕೇಳಿದಾಗ 'ಮಹೀಂದ್ರ ಹೋಟೆಲ್' ಎಂದು ನಮೂದಾಗಿರುವುದು ಮುದ್ರಣದ ದೋಷದಿಂದಾಗಿ ಎಂಬ ಸಬೂಬು ನೀಡುತ್ತಾರೆ! ಈ ಜನರು ತಮ್ಮ ಹೇಳಿಕೆಗಳ ಬಗ್ಗೆಯೇ ಈ ರೀತಿಯ ಗೊಂದಲ ಹೊಂದಿರಬೇಕಾದರೆ ಇವರ ವಾದಮಂಡನೆಯನ್ನು ನ್ಯಾಯಾಲಯ ಗಂಭೀರವಾಗಿ ಪರಿಗಣಿಸುವುದಾದರೂ ಹೇಗೆ?

ಭಾರತದಲ್ಲಿ ನಕ್ಸಲ್ ಚಟುವಟಿಕೆಗಳ ದಮನಕ್ಕಾಗಿ ರಾಜ್ಯಗಳು ಅನುಸರಿಸುತ್ತಿರುವ ಮಾರ್ಗದ ಕುರಿತು ನೀವು ಸದಾ ಧ್ವನಿಯಾಗುತ್ತಲೇ ಬಂದಿದ್ದೀರಿ. ನಿಮ್ಮ ಅಭಿಪ್ರಾಯದ ಪ್ರಕಾರ ಇದರ ನಿವಾರಣೆಗಾಗಿ ಇರುವ ಉತ್ತಮ ಮಾರ್ಗ ಯಾವುದು?

ನಕ್ಸಲಿಸಂ ಕುರಿತು ನಾನೇನು ಪರಿಣಿತನಲ್ಲ. ಎಲ್ಲ ಬಗೆಯ ಹಿಂಸೆಗಳನ್ನು ವಿರೋಧಿಸುವುದಷ್ಟೆ ನಮ್ಮ ಕಾಯಕ. ಸರ್ಕಾರದ ಹಿಂಸೆ ಇರಬಹುದು ಅಥವಾ ಸರ್ಕಾರೇತರರ ಹಿಂಸೆ ಇರಬಹುದು ಎಲ್ಲವನ್ನು ನಾವು ವಿರೋಧಿಸುತ್ತೇವೆ. ಹಿಂಸೆಯ ವಿರುದ್ಧದ ನಮ್ಮ ವಾದವನ್ನು ಅನೇಕ ಸಂದರ್ಭಗಳಲ್ಲಿ ನಾವು ಸ್ಪಷ್ಟವಾಗಿ ಉಲ್ಲೇಖಿಸಿದ್ದೇವೆ.

ಹಿಂಸೆಯ ಸಂಪೂರ್ಣ ಸ್ವರೂಪವನ್ನು ಉದ್ದೇಶಿಸುವುದಾದರೆ ವ್ಯಾಪಕವಾಗಿ ಹರಡಿರುವ ಅಪೌಷ್ಟಿಕತೆ ಅಸಮಾನತೆ ಮತ್ತು ತಮ್ಮ ಸೌಕರ್ಯಗಳ ಮೂಲಗಳಿಂದ ಇಂತಹ ಶೋಷಿತ ಸಮುದಾಯವನ್ನು ಪ್ರತ್ಯೇಕಿಸಿರುವುದರ ಮೂಲಕ ಅವರ ಅಸ್ತಿತ್ವವನ್ನು ಅಪಾಯಕಾರಿಗೊಳಿಸಿರುವುದೇ ಇದಕ್ಕೆಲ್ಲ ಕಾರಣವಾಗಿದೆ. ಇಂತಹ ಸ್ಥಿತಿ ಆ ಸಮುದಾಯದ ಅಸ್ತಿತ್ವದ ಪ್ರಶ್ನೆಯನ್ನು ಹುಟ್ಟುಹಾಕುತ್ತಿದೆ. ಇದಕ್ಕೆಲ್ಲ ಸರ್ಕಾರ ಉತ್ತರಿಸಬೇಕು. ನಿಖರವಾಗಿ ಹೇಳಬೇಕೆಂದರೆ ಮಾತುಕತೆ ಮಾತ್ರ ಇದಕ್ಕೆ ಸೂಕ್ತ ಮಾರ್ಗ. ಇದನ್ನು ಸರಿಪಡಿಸಲು ನಾವೀಗ ಅನುಸರಿಸುತ್ತಿರುವುದೂ ಮಾತುಕತೆಯ ಮಾರ್ಗವನ್ನೆ.

ಅನುವಾದ: ಗಿರೀಶ್ ತಾಳೀಕಟ್ಟೆ

ಕೃಪೆ: rediff.com

ರಾಮದೇವ ರೋಗಗ್ರಸ್ತರಿಗ್ಯಲ್ಲ ಸ್ವಾಮಿ ಕಣ್ರೋ

ರಾಮ್‌ದೇವನ ವಿಷಯ ಕೇಳಿದ ಕಾಳ ಮಾವ ಗಂಭೀರವಾಗಿ,

"ಯಾರು ಯಾವ ಕ್ಯಲಸ ಮಾಡಬೇಕೋ ಅವುರೇ ಅದ ಮಾಡಬೇಕು ಕಂಡ್ಯ. ಅದು ಬುಟ್ಟೊ ಇನ್ನೇನೊ ಮಾಡ್ತಿನಿ ಅಂತ ಹೋದ್ರೆ ಇಂಗೆ ಆಗದು" ಎಂದ.

"ನೀನೇಳೋ ಮಾತು ಸರಿಕಣ ಮಾವ. ಆದ್ರೆ ನಿನ್ನ ಮಾತ್ನ ಬಿಜೆಪಿ, ಆರೆಸ್ಸೆಸ್‌ನೋರು ಕಾಲದಿಂದ ಮಾತಾಡಿಕಂಡು ಬತ್ತಾ ಅವುರೆ. ಆದ್ರೆ ಈಚಿಗೆ ಬಾಯಿಬುಡದಿಲ್ಲ, ಒಳಗಿರದ್ಯಲ್ಲ ನೀನೇಳಿದ ಮಾತೆಯಾ" ಎಂದ ಉಗ್ರಿ.

"ಅದೇನವುರ್ವಳಗಿದ್ದತ್ಲ?" ಎಂದಳು ಜುಮ್ಮಿ.

"ಅದೇ ಕಣೇ ನಮ್ಮ ಜಾತಿಗಳು ಕಾಲಾದಿಂದ ತಮ್ಮ

ಬಯಲುಸೀಮೆ ಕಟ್ಟೆಪುರಾಣ

ಬಿ. ಚಂದ್ರೇಗೌಡ

ಕಸುಬು ಮಾಡಿಕಂಡು ತಮ್ಮ ಜಾತಿ ಆವರಣದಲ್ಲಿ ಇದ್ರು. ಆಗ ಸ್ವರ್ಗವೇ ಭೂಮಿ ಮ್ಯಾಲಿತ್ತು, ಯಾವತ್ತು ನಮ್ಮ ಕಸುಬ ಬುಟ್ಟು ಬ್ಯಾರೆ ಕ್ಯಲಸಕ್ಕೆ ಕೈ ಹಾಕಿದವ್ರೊ ಅವತ್ತೇ ದೇಸ ಹದಗೆಟ್ಟೋಯ್ತು. ಆದ್ರಿಂದ ಇನ್ನ ಮುಂದಾದ್ರೂ ನಮ್ಮ ಕಸುಬ ನಾವೇ ಮಾಡನ. ಅಂದ್ರೆ ಬ್ರಾಂಬ್ರು ಪೂಜೆ ಮಾಡ್ಲಿ, ಒಕ್ಕಲಿಗರು ವಲ ಉಳ್ಳಿ, ಕುರುಬ್ರು ಕುರಿಕಾಯ್ಲಿ, ಈಡಿಗರು ಹ್ಯಂಡ ಇಳುಸ್ಲಿ ಅನ್ನದು ಅವುರ ಅಜೆಂಡ. ಅದ ಎಲ್ಲೂ ಬಾಯಿಬುಟ್ಟು ಹೇಳದಿಲ್ಲ, ಯಲ್ಲಾ ಹೊಕುಪ್ಪಿನಲ್ಲೇ ಇರತದೆ. ಅಂತ ಜನಗಳ ತೀರಕೆದಕಿದ್ರೆ ಯಾವ ಮಾತು ಬತ್ತದೊ ಅದೇ ಮಾತು ಕಾಳಮಾವನ ಬಾಯಿಂದ ಬತ್ತು. ಅದಕಂಗಂದೆ" ಎಂದ ಉಗ್ರಿ.

"ರಾಮದೇವ ಅಂದ್ಯಾರ್ಲ ಇದ್ದಕ್ಕಿದ್ದಂಗೆ ಬಂದವು ನಲ್ಲಾ?"

"ಸರಿಯಾಯ್ತು ಕಣೆ ನೀನು ಕೇಳೋ ಪ್ರಶ್ನೆ. ಬ್ಯಳಗಾನ ರಾಮಾಯಣದ ಕತೆ ಕೇಳಿ ಕಡಿಗೆ ರಾಮನಿಗೆ ಸೀತೇ ನಾಗಬೇಕು ಅಂದ್ರಂತೆ ಯಾರೊ ನಿನ್ನಂಥೋಳು. ಆ ರಾಮದೇವ ಯಾರೂ ಅಂದ್ರೇನೇಳ್ಳಿ" ಎಂದು ಉಗ್ರಿ ಕೇಳುವಾಗ ಇಣುಕಿದ ವಾಟಿಸ್ಸೆ,

"ರಾಮದೇವ ಯಾರು ಗೊತ್ತೇನಕ್ಕ? ಅವುನು ರೋಗಗ್ರಸ್ತರಿಗ್ಯಲ್ಲ ಸ್ವಾಮಿ ಕಣಕ್ಕ" ಎಂದ.

"ರೋಗಗ್ರಸ್ತರು ಅಂದ್ರ ಅವುರ್‍ಯಾರೂ?"

"ಈ ನಮ್ಮ ಸಮಾಜದಲ್ಲಿ ಮಧ್ಯಮವರ್ಗ ಮತ್ತು ಮೇಲ್ವರ್ಗದ ಜನ ಅಂತ ಅವುರೆ. ಅವುರ್‍ಯಾರು ಬಿಸಿಲಿಗೆ ಬರದಿಲ್ಲ. ತಿಂದಿದ್ದು ಅರಗಬೇಕಾದ್ರೆ ನಿನ್ನಂಗೆ, ಈ ಕಾಳದೊಡ್ಡಪ್ಪನಂಗೆ ವರುಕು ಮಾಡಬೇಕು. ಆಗ ಶರೀರ ಸಮತೂಕವಾಗಿರತದೆ. ಆದ್ರೆ ಈ ವರ್ಗ ಕಳ್ಳು ತುಂಬ ತಿಂದು ಏನ್ನ ಮಾಡದಿಲ್ಲ, ಮನೇಲೆ ಕುಂತಿರತದೆ ಟಿವಿ ಮುಂದೆ. ಇವುರಿಗೆ ಟಿ.ಎನ್.ಸೀತಾರಾಮನ ಟಿವಿ ಅಂದ್ರೆ ಭಾರಿ ಇಷ್ಟ. ಅದಿರ್ಲಿ ಅದು ಸಪರೇಟ್ ಮ್ಯಾಟ್ರು. ತಿಂದು ಕುಂತ ಜನಕ್ಕೆ ಅಂದ್ರೆ ಹಸಿವೇಯಿಲ್ದೆ ಊಟ ಮಾಡೋ ಜನಕ್ಕೆ ಬಿಪಿ, ಸುಗರ್ರು, ಕೈಕಾಲು ನೋವು ಜಾಸ್ತಿ, ಇವ್ರಿಗೆ ಕತ್ತು ನೋವು ಬಂದಿರತದೆ. ಇಂತವುರು ಗಾತ್ರದ ಕಾರಣಕ್ಕೆ ವಾಕ್ ಹೋಗಕ್ಕೆ ಆಗದಿಲ್ಲ, ಹೋದ್ರು ಎರಡೆಜ್ಜೆ ಬತ್ತರೆ. ಜಾಗವೇ ಇರದಿಲ್ಲ."

"ಸಿಟಿಲೆಲ್ಲಿ ಜಾಗಿದ್ದತ್ಲ ಎಲ್ಲಿ ನೋಡಿದ್ರು ಮನೆ, ಜನ."

"ಅಲ್ಲಿಗೆ ವಾಕಿಲ್ಲ ಅಂದಂಗಾಯ್ತು. ಅಂತ ಜನಗಳ್ಯಲ್ಲ ಕುಂತಿರೊ ಜಾಗದಲ್ಲೇ ಸರ್ಕಸ್ ಮಾಡಿ ಕಾಯ್ಲ ಉಸಾರು ಮಾಡಿಕಬವುದು ಅನ್ನದ ಈ ರಾಮದೇವ ತೋರಿಸಿ ಕೊಟ್ಟ."

"ಅದ್ಯಂಗೆ ತೋರಿದ?" ಎಂದು ಜುಮ್ಮಿ ಹೇಳಿದ ಕೂಡಲೇ ವಾಟಿಸ್ಸೆ ಅಲ್ಲೇ ಕುಳಿತು,

"ಇಗೋ ನೋಡಿಲ್ಲಿ" ಎಂದು ರಾಮದೇವನ ಹಲವಾರು ಆಸನಗಳನ್ನ ತೋರಿಸಿ ಕಡೆಗೆ ಹೊಟ್ಟೆಯಿಂದ ಉಸಿರು ಚುಮ್ಮಿಸಿ ಬುಸುಗರಿದ. ನಗಾಡಿದ ಜುಮ್ಮಿ,

"ಹಿಂಗೆ ಮಾಡಿದ್ರೆ ಕಾಯ್ಲ ಹೋದವುಲ?" ಎಂದಳು.

"ಹೋಗಕ್ಕೆ ಮೆಡಿಸನ್ ಬ್ಯಾರೆ ಕೊಡ್ತನೆ ಕಣಕ್ಕ ಅದರಲ್ಲೇ ನೂರಾರು ಕೋಟಿ ದುಡುದವ್ರುನಂತೆ. ನನ್ನಂಥ ನಾನೇ ಇಷ್ಟು ದುಡ್ಡ ದುಡಿಬೇಕಾದ್ರೆ ಇನ್ನ ಭಾಳ ವರ್ಷದಿಂದ ರಾಜಕಾರಣ ಮಾಡಿರೊ ರಾಜಕಾರಣಿಗಳು ಎಷ್ಟು ದುಡಿದಿರಬೇಕು? ಆ ದುಡ್ಡನ್ಯಲ್ಲ ಎಲ್ಲಿ ಮಡಗಿರಬೇಕು? ಅಂತ ಯೋಚನೆ ಮಾಡುವಾಗ ಯಾವ್ನೊ ಆರೆಸ್ಸೆಸ್‌ನವು 'ನಮ್ಮ ರಾಜಕಾರಣಿಗಳು ಆ ದುಡ್ಡನ್ಯಲ್ಲ ಫಾರಿನ್ನಲ್ಲಿರೊ ಬ್ಯಾಂಕಲ್ಲಿ ಮಡಗ್ಯವುರೆ. ಅದನ್ಯಲ್ಲ ಇಂಡಿಯಾ ದೇಸಕ್ಕೆ ತರಿಸಿ ಅಂತ ಸರಕಾರದ ವಿರುದ್ಧ ಉಪವಾಸ ಕುಂತಗಳಿ' ಅಂದವಂತೆ. ಇವುನು ಆರೆಸ್ಸೆಸ್ ಮಾತ ಕೇಳಿ ಅರ್ಜಿಬಿದ್ದ ಅತ್ತಗೆ."

"ಸ್ವಂತ ಬುದ್ದಿ ಇಲ್ದೋನು ಅನ್ನು" ಎಂದ ಕಾಳಮಾವ.

"ಅದರ ಜ್ವತಿಗೆ ಪುಕ್ಕಲ ದ್ವಡಪ್ಪ. ಉಪವಾಸ ಕುಂತಿದ್ದೋನು ಪೋಲೀಸ್ನೋರು ಕಂಡೇಟಿಗೆ ವೇದಿಕೆ ಮ್ಯಾಲಿಂದ ಹಾರಿ, ಹೆಂಗಸರ ಕಡಿಗೋಗಿ, ಕಾವಿ ಬಟ್ಟೆನ್ಯಲ್ಲ ಬಿಚ್ಚಿ, ಅದ್ಯಾವುದೊ ಮಾರವಾಡಿ ಹೆಂಗಸಿನ ಚೂಡಿದಾರ ಹಿಕ್ಕಂಡು, ಚಪ್ಪಾಳೆ ವಡದ ಅಂದ್ರೆ, ಅವುನ್ನ ಏನನ್ನಬೇಕು ನೀನೇ ಹೇಳು ದ್ವಡಪ್ಪ."

"ಅದ್ಯಾಕಂಗೆ ಮಾಡಿದಾ?"



"ಅವುನು ಸ್ವಲುಪ ಸುಳ್ಳಪ್ಪ. ಸರ್ಕಾರಕ್ಕೆ ಸುಳ್ಳೇಳಿ ನಾನು ಸಂದಿಗಂಟ ಉಪಾಸ ಕುಂತಿದ್ದು ಎದ್ದೋಯ್ತಿನಿ ಅಂದನಂತೆ. ಆಯ್ತು ಅಂದ ಸರಕಾರ ಅಂಗೇ ನೋಡ್ತು, ಅವುನ ಸುತ್ತ ಮಸೀದಿ ಕೆಡವಿದೋರು, ಮನೆ ಮುರುದೋರು, ಕೋಮುಗಲಭೆ ಹಬ್ಬಿಸಿದೋರು ಯಲ್ಲಾ ಜಾಮಾಗಿದ್ರಂತೆ. ಒಹೋ, ಈ ಬಿಜೆಪಿ ನನಮಕ್ಕಳು ರಾಮದೇವನ ಮರೆಲಿ ಹ್ವಂಟವುರೆ ಅನ್ನದು ಯಾವಾಗ ಕಾಂಗ್ರೆಸ್‌ನೋರಿಗೆ ಗೊತ್ತಾಯ್ತೊ ಆ ಕೂಡ್ಲೆ ಪೋಲೀಸ್‌ನೋರ ಕಳಿಸಿ 'ಅವುನ್ನ ಹಿಡಕಂಡೋಗಿ ಅವುನೂರಿಗೆ ಬುಡಿ' ಅಂದ್ರು. ಅದ್ಕೆ ಪೋಲೀಸ್ನೋರು ಬಂದ್ರೆ ಈ ಗಿರಾಕಿ ಕಾಯಿಕಳ್ಳ ಮರದ ಮ್ಯಾಲಿಂದ ನ್ಯಗದಂಗೆ ಹಾರಿಬಿಡದೇ!"

"ಪೋಲೀಸ್ನೋರು ಏನು ಮಾಡತಿದ್ರೂ, ಅವುನ್ನ ಅರೆಸ್ಟು ಮಾಡಿ ತಗಂಡೋಗಿ ಬುಡೋರಪ್ಪ."

"ಅದವುನಿಗೆ ಗೊತ್ತಿರಬೇಕಲ್ಲ ದ್ವಡಪ್ಪ, ಪೋಲೀಸ್ನೋರು ಹಿಡಕಂಡೋಗಿ ಚಚ್ಚುತರೆ, ಕಾಲು ಮುರಿತರೆ, ಕೈ ಮುರಿತರೆ ಅನ್ನೋ ಸುದ್ದಿ ಕೇಳಿದ್ದು ಬುಟ್ರೆ ಇನ್ನೇನು ಗೊತ್ತಿಲ್ಲ ಅವುನಿಗೆ. ಅದ್ಕೆ ಹಾರಿದ ಅತ್ತಗೆ."

"ಇದ್ವಳ್ಳೆ ತಮಾಸ್ಯಾಗ್ಯದಪ್ಪ."

"ತಮಾಸಿನೆ ದ್ವಡಪ್ಪ ಇದು. ಅಣ್ಣಾ ಹಜಾರೆ ಅಡ್ತನೆ ಅಂತ ತಾನೂ ಆಡಕ್ಕೋಗಿ ಕಿಸಗಂಡು ಬಿದ್ದ. ಇನ್ನುಮುಂದೆ ಅವುನು ಯೋಗದ ಸಿಬಿರ ಮಾಡಕ್ಕೋದ್ರೆ, ಕಾಂಗ್ರೆಸ್ ಬೈತನೆ, ಆಗ ರೋಗಿಗಳಿಗೆ ಬೇಜಾರಾಯ್ತದೆ, ಕೆಲುವಕೆ ಹಿಂಸೆ ಆದ್ರು ಆಗಬವುದು. ಕಾಗೆ ಸಂಗ ಮಾಡಿ ಗರುಡ ಪಕ್ಷಿ ಹಾಳಾದಂಗೆ ಈ ಬಿಜೆಪಿಗಳ ಬೆನ್ನಿಗೆ ಕೂರಿಸಿಗಂಡ ತಪ್ಪಿಗೆ ರಾಮದೇವ ವನವಾಸ ಸೇರಿದ."

"ಅದ್ಕೆ ಕಂಡ್ಯ ನಾನು ಮದ್ಲೆ ಈ ಉಗ್ರಿಗೇಳಿದೆ. ಯಾರು ಯಾವ ಕ್ಯಲಸ ಮಾಡಬೇಕು ಅದವುರು ಮಾಡಿಕಂಡೋಗಬೇಕು. ಇವುನ್ಯಾಕೆ ರಾಜಕಾರಣ ಕ್ವಸಿಯಕ್ಕೆ ಬರಬೇಕು ಅಂತ."

"ನೀನೇಳಿದ್ದು ಹಂಡ್ರೆಡ್ ಪರ್ಸೆಂಟ್ ಸರಿ ದ್ವಡಪ್ಪ. ಹಿಂದಿನಿಂದ್ಲೂ ಈ ಬಿಜೆಪಿಗಳು ನಿನ್ನತ್ರ ಇರೋ ಡಿಪಾಜಿಟ್ ಮ್ಯಾಲೆ ಕಣ್ಣು ಮಡಗಿರತರೆ. ಅದ ಕಿತಗಂಡು ಖಾಲಿ ಮಾಡಿ ಕಳುಸ್ತರೆ. ಈ ರಾಮದೇವುನಿಗೂ ಅದೇ ಆಗದು. ಇನ್ನು ಮುಂದವುನು ರೋಗಗ್ರಸ್ತರಿಗೆ ಡ್ರಿಲ್ ಕಲಸದು ವಳ್ಳೆದು. ಅದು ಬುಟ್ಟು ಸಿನುಮ ಆಗುಟ್ರು ಕ್ರಿಕೆಟ್ ಆಡಕ್ಕೆ ಬಂದಂಗೆ ಬಂದ್ರೆ ಸರಿಯಿರದಿಲ್ಲ."

"ಸಿನುಮಾದೋರು ಕ್ರಿಕೆಟಿಗೆ ಬಂದ್ರ?"

"ಬರಕ್ಯಾಗದಿಲ್ಲ, ಟ್ವಂಟಿ ಟ್ವಂಟಿ ಮ್ಯಾಚ್‌ಗಳಿಗೆ ದೇಸದ ಜನ ಬೆಂಬಲ ಕೊಟ್ಟು ಕೂಗಿದ್ದ ನೋಡೀ ಅವು ಆಡಕ್ಕೆ ಅಂತ ಬಂದಿದ್ರೊ. ಅವು ಬೌಲ್ ಮಾಡದ, ಬ್ಯಾಟ್ ಬೀಸದ ಮತ್ತೆ ಬಾಲಿನಿಂದೆ ಓಡದ ನೋಡಿ ಜನ ಬಿದ್ದು ಬಿದ್ದು ನಕ್ಕರು. ಅವುಕೆ ಕಾಮನ್‌ಸೆನ್ಸಿದ್ರೆ ಆಕ್ಟಿಂಗ್ ಬಗ್ಗೆ ಯೋಚನೆ ಮಾಡಬವುದಿತ್ತು, ಅಂತೂ ವಳ್ಳೆ ಎಂಟರ್‌ಟೈನ್‌ಮೆಂಟ್ ಕಣ್ರೊ. ರಿಯಲಿ ದಿಸೀಸ್ ರೋಗಗ್ರಸ್ತರ ದೇಸ" ಎನ್ನುತ್ತ ವಾಟಿಸ್ಸೆ ಮಾಯವಾದ.

✽

ಬಂಡಾಯ ಮತ್ತು ದುರಂತ



'ಜಾಕ್ ಲಂಡನ್' ಪುಸ್ತಕದಲ್ಲಿ ಒಂದು ಪ್ಯಾರಾ ನೋಡಿ ಕುತೂಹಲಗೊಂಡೆ:

1904. ನ್ಯೂಯಾರ್ಕ್. ಜಾಕ್ ಲಂಡನ್ ಎಂಬ ಕ್ರಾಂತಿಕಾರಿ ಸಾಹಿತಿ ಬರುವುದಿತ್ತು, ರೈಲ್ವೆ ಸ್ಟೇಷನ್‌ನಲ್ಲಿ ಘೇರಾಯಿಸಿದ ಹಿಂಡು ಹಿಂಡು ಜನ. ಜಾಕ್ ಲಂಡನ್ ಬಂದ. ಮಾತಾಡಿದ:

"......... ಎಪ್ಪತ್ತು ಲಕ್ಷ ಜನರ ಈ ಕ್ರಾಂತಿಸೇನೆ ನೆಲದೊಡೆಯರ ಎದೆಯನ್ನು ತಲ್ಲಣಿಸುತ್ತದೆ. ಈ ಸೇನೆಯ ನುಡಿಯಿಷ್ಟು: ಯಾರಿಗೂ ದಯೆ ತೋರಲಾರೆವು. ಆಳುವ ವರ್ಗದವರೆ, ನಿಮ್ಮ ಸ್ವತ್ತೆಲ್ಲ ನಮಗೆ ಬೇಕು. ಎಲ್ಲವೂ ನಮಗೆ ಬೇಕು. ಮಾನವ ಜನಾಂಗದ ಜೀವನವನ್ನು ನಡೆಸಬಲ್ಲ ಸೂತ್ರ ನಮ್ಮ ಕೈಯಲ್ಲಿರಬೇಕು. ಇಗೋ ನಮ್ಮ ಕೈಗಳು-ಅವು ಬಲವಾದ ಕೈಗಳು. ನಿಮ್ಮ ಸರ್ಕಾರ, ನಿಮ್ಮ ಅರಮನೆ ನಿಮ್ಮೆಲ್ಲ ಸುಖಗಳನ್ನು ನಿಮ್ಮಿಂದ ಕೀಳುತ್ತೇವೆ. ಉಳುವ ಬಡರೈತನಂತೆ, ಅರೆಹೊಟ್ಟೆಯ ನಗರದ ಗುಮಾಸ್ತನಂತೆ, ನೀವೂ ನಿಮ್ಮ ಅನ್ನಕ್ಕಾಗಿ ಅಂದು ಶ್ರಮಿಸಬೇಕಾಗುತ್ತದೆ. ಇದೋ ನಮ್ಮ ಕೈಗಳು.... ಅವು ಬಲವಾದ ಕೈಗಳು...."

ಮಹತ್ತರ ಜಯಘೋಷ ಈ ಮಾತುಗಳನ್ನು ಸ್ವಾಗತಿಸಿತು.

ತನ್ನ ಭಾಷಣವನ್ನು ಮುಗಿಸುತ್ತ ಜಾಕ್ ಲಂಡನ್ ಹೀಗೆ ಒದಿದ:

"........ಕ್ರಾಂತಿಯೆಂದರೆ ವಾದ, ತರ್ಕ, ಕನಸುಗಳ ಗಣಿಯಲ್ಲ, ಕ್ರಾಂತಿ ಇಂದು ವಾಸ್ತವ ಸಂಗತಿಯಾಗಿದೆ. ಸುವ್ಯವಸ್ಥಿತರಾದ ಎಪ್ಪತ್ತು ಲಕ್ಷ ಕ್ರಾಂತಿಕಾರರು ಅಹರ್ನಿಶಿಯೂ ಕ್ರಾಂತಿ ಪ್ರಸಾರ ಮಾಡುತ್ತಿದ್ದಾರೆ. ಮಾನವ ಭ್ರಾತೃತ್ವದ ಆ ಬೋಧನೆ ಎಲ್ಲೆಲ್ಲೂ ಹಬ್ಬುತ್ತಿದೆ."

ಇದನ್ನು ಕೇಳಿದವರು ಮಂತ್ರಮುಗ್ಧರಾದರು. ಕ್ರಾಂತಿ ಆ ಸಾಹಿತಿಯ ಜೇಬಿನಲ್ಲಿ ಇದ್ದಂತಿತ್ತು, ಆದರ್ಶ ರಾಜ್ಯ ಒಂದು ಗೇಣು ದೂರ ಇತ್ತು, ಆದರೆ ಏನಾಯಿತೆಂದರೆ, ಅದು ಬರಲೇ ಇಲ್ಲ, ಜಾಕ್ ಲಂಡನ್, ಮಯಕೋವ್‌ಸ್ಕಿ, ಮಾಕ್ಸಿಂ ಗಾರ್ಕಿ ತರಹದವರು ಹಾಸ್ಯಾಸ್ಪದರಾದರು. ಕನಸು ಒಡೆಯಿತು. ಅಗ್ನಿಭಕ್ಷಕರ ಬಾಯಿಂದ ಉದುರಿದ್ದು ಬರೀ ಬೂದಿ....

ಮನುಷ್ಯನ ಕ್ಲಿಷ್ಟ ಬದುಕನ್ನು ಬಲ್ಲವರು ಈಗ ಅರಿತಿದ್ದಾರೆ.


ಹದಿನೇಳನೇ ಶತಮಾನದ ವಿಚಾರಕ್ರಾಂತಿಯಾಗಲಿ, ಹದಿನೆಂಟನೇ ಶತಮಾನದ ಫ್ರೆಂಚ್ ಕ್ರಾಂತಿಯಾಗಲಿ, ಇಪ್ಪತ್ತನೆ ಶತಮಾನದ ಕಮ್ಯುನಿಸ್ಟ್ ಕ್ರಾಂತಿಯಾಗಲಿ ಮನುಷ್ಯನ ನೀಚತನವನ್ನು ಮುಚ್ಚಿಡಲಾಗಲಿಲ್ಲ. ಇಪ್ಪತ್ತನೆ ಶತಮಾನದಲ್ಲಿ ಒಂದು ಕಡೆ ಲೆನಿನ್, ಸ್ಟಾಲಿನ್ ಬಣ್ಣಬಣ್ಣದ ಮಾತಾಡುತ್ತಿದ್ದಾಗ ಫ್ರಾನ್ಸ್‌ನ ಆಲ್ಬರ್ಟ್ ಕ್ಯಾಮು ಹೇಳಿದ: ಮನುಷ್ಯ ಅತ್ಯಂತ ಸುಂದರವಾಗಿ ಅಲಂಕಾರ ಮಾಡಿಕೊಂಡಷ್ಟೂ ನೀನು ಅವನ ಬಗ್ಗೆ ತಿಳಿದುಕೊಳ್ಳಬಹುದು- ಆತ ತನ್ನ ಚರ್ಮರೋಗ ಎಗ್ಸಿಮಾ ಮುಚ್ಚಿಕೊಳ್ಳುವುದಕ್ಕೆ ಹೀಗೆ ಅಲಂಕಾರ ಮಾಡಿಕೊಂಡಿದ್ದಾನೆ. ಆತನ ಪ್ರತಿಭಟನೆ ಕೇವಲ ನಾಟಕ ಕೂಡ ಅನ್ನಿಸುತ್ತದೆ. ಪ್ರತಿಭಟನೆಯ ಬೆಂಕಿ ಸ್ವಲ್ಪ ದಿನ ಉರುಳಿದ ಮೇಲೆ ಕೇವಲ ಪ್ರಹಸನವಾಗಿ ಕಾಣುತ್ತದೆ. ಇವತ್ತಿನ ಬಂಡಾಯ ನಾಳೆಯ ಸಂಪ್ರದಾಯ, ಆಮೇಲಿನ ಕಂದಾಚಾರ, ಇದೆಲ್ಲ ನಿನ್ನನ್ನ ದ್ವಂದ್ವದಲ್ಲಿ ಸಿಕ್ಕಿಹಾಕಿಸಿ ನೀನು ಆತ್ಮಹತ್ಯೆ ಮಾಡಿಕೊಳ್ಳಲು ತೀರ್ಮಾನಿಸುತ್ತೀ. ಅದರಿಂದ ಏನಾಗುತ್ತದೆ-ನೀನು ಸತ್ತೊಡನೆ ಎಲ್ಲರೂ ಆಘಾತಕ್ಕೊಳಗಾಗುತ್ತಾರೆ, ದುಃಖಿಸುತ್ತಾರೆ ಎಂದು ಊಹಿಸುತ್ತೀ. ಅದು ನಿನ್ನ ಭ್ರಮೆ ಮಾತ್ರ. ಯಾರಿಗೂ ನಿನ್ನ ಆತ್ಮಹತ್ಯೆ ಮುಖ್ಯ ಅನ್ನಿಸುವುದಿಲ್ಲ, ಹಾಗೆಯೇ ನಿನ್ನ ಮಹಾನ್ ತ್ಯಾಗ ಕೂಡ.

ಆತ್ಮಹತ್ಯೆಯ ತರುವಾಯ ನೀನೇ ಇಲ್ಲದಿದ್ದರೆ ಅದರ ಪರಿಣಾಮವನ್ನು ಅಳೆಯುವವರು ಯಾರು? ಇದೊಂದು ವಿಚಿತ್ರ ಪರಿಸ್ಥಿತಿ.

ಬಂಡಾಯ, ಆತ್ಮಹತ್ಯೆ, ತ್ಯಾಗ. ಕೇವಲ ತಣ್ಣನೆಯ ಸಾವು ಕೂಡ.

ಹೀಗೆಲ್ಲ ಯೋಚಿಸಿದ ಕ್ಯಾಮು ಕಾರಿನಲ್ಲಿ ಪ್ಯಾರಿಸ್‌ಗೆ ಹೊರಟ. ಅಲ್ಲಿಯವರೆಗೆ ಆತ್ಮಹತ್ಯೆ, ನೈಸರ್ಗಿಕ ಸಾವು, ಬಂಡಾಯ, ಸಿಸಿಫಸ್ ಪುರಾಣದ ಬಗ್ಗೆ ಹೇಳಿದ್ದವನು ಪ್ಯಾರಿಸ್‌ಗೆ ಕಾರಿನಲ್ಲಿ ವೇಗವಾಗಿ ಹೊರಟ. ಕಾರು ಅಪಘಾತಕ್ಕೆ ಸಿಕ್ಕಿತು. ಕ್ಯಾಮು ತೀರಿಕೊಂಡ. ಸಹಜ ಸಾವು ಮತ್ತು ಆತ್ಮಹತ್ಯೆಯಿಂದ ತಪ್ಪಿಸಿಕೊಂಡ ಆತ ಅಪಘಾತದಲ್ಲಿ ಸತ್ತಿದ್ದ. ಆತ ತೀರಿಕೊಂಡ ಮೇಲೆ ಶೋಕತಪ್ತರಾದ ಜನ ಅವನ ಜೇಬುಗಳಲ್ಲಿ ನೋಡಿದರೆ-ಆತ ರೈಲಿನಲ್ಲಿ ಹೋಗಲು ರಿಸರ್ವ್ ಮಾಡಿಸಿದ ಟಿಕೆಟ್ ಇತ್ತು.

ಅವತ್ತು ಆತ ರೈಲಿನಲ್ಲಿ ಹೋಗಿದ್ದರೆ? ಇದು ಅಸಂಗತ ಪ್ರಶ್ನೆ. ಕ್ಯಾಮು ಜೀವನದ ಯಶಸ್ಸು ಮತ್ತು ಪತನದಂತೆಯೇ ಇದು ಅಸಂಗತ-absurd.... ಇಂಥ ಯೋಚನೆಗಳು ಜೇಬಿನಲ್ಲಿ ಕ್ರಾಂತಿ ಇಟ್ಟುಕೊಂಡಂತಿರುವ ಮೂರ್ಖ ಜಾಕ್ ಲಂಡನ್ ತರಹದವರಿಗೆ ಹೊಳೆಯುವುದೇ ಇಲ್ಲ!



✽



ಟಾಲ್‌ಸ್ಟಾಯ್ ಗೊಂಬೆ

ನಾನು ಸ್ನಾನ ಮಾಡಿರಲಿಲ್ಲ, ನೀರು ಇನ್ನೂ ಕಾಯಬೇಕಾಗಿತ್ತು, ಅಡಿಗೆ ಕೂಡ ಆಗಿರಲಿಲ್ಲ. ಆದರೆ ಬೇಗ ಮಾಡಬೇಕೆಂದು ನಾನು ಎಂದೂ ಒತ್ತಾಯ ಮಾಡುವುದಿಲ್ಲ. 'ಎಲ್ಲ ನಿಧಾನಕ್ಕೆ ಆಗಲಿ' ಎಂದು ಒಂದು ಪುಸ್ತಕ ತೆಗೆದುಕೊಂಡು ಕೂತೆ. ಅದು ಕತೆಗಳ ಪುಸ್ತಕ. ಅವತ್ತು ಭಾನುವಾರ. ನಮಗೆ ಭಾನುವಾರ ರಜಾ ಇಲ್ಲ, ಮಂಗಳವಾರ, ಬುಧವಾರ ರಜಾ.

ಟಾಲ್‌ಸ್ಟಾಯ್ ತನ್ನ ನಾದಿನಿಗೆ ಬರೆದ ಕಾಗದದ ರೂಪದ ಕತೆ ಅದು. ಕತೆಯಲ್ಲಿ ತನ್ನ ಹೆಂಡತಿಯ ಬಗ್ಗೆ ಬರೆಯುತ್ತಿದ್ದಾನೆ.

'ಮೊನ್ನೆ ಏನಾಯಿತು ಗೊತ್ತಾ. ನಾನು ಮಲಗಿದ್ದೆ. ನನ್ನವಳು ಬಂದಳು. ಮಧ್ಯರಾತ್ರಿ. ನೋಡುತ್ತೇನೆ, ಆಕೆ ದಂತದ ಗೊಂಬೆಯಾಗಿದ್ದಾಳೆ! ಮುಟ್ಟಿ ನೋಡಿದೆ. ಮಾತಾಡಿಸಿದೆ. ಮಾತಾಡಲಿಲ್ಲ. ಸ್ವಲ್ಪ ಭಯವಾಗಿ ಎದ್ದು ಅವಳ ಮೈ ಮನುಷ್ಯರ ಮೈನಂತೆ ಬೆಚ್ಚಗಿದೆಯಾ ಅಂತ ನೋಡಿದೆ. ಇಲ್ಲ, ತಣ್ಣಗಿತ್ತು. ಗಾಜಿನ ಅಥವಾ ದಂತದ ಗೊಂಬೆಯಂತೆ ಬಂದು ಮಲಗಿಕೊಂಡಳು. ಮರುದಿನ ಬೇಗ ಎದ್ದು ಪರೀಕ್ಷಿಸಿದೆ ಎಂದಿನಂತೆ ಇದ್ದಳು. ಮೈ ಬೆಚ್ಚಗಿತ್ತು. ಮರುದಿನ ಮತ್ತೆ ಗೊಂಬೆಯಾಗಿದ್ದಳು. ನಿಜಕ್ಕೂ ಕಸಿವಿಸಿಕೊಂಡೆ. ಈ ಬಗ್ಗೆ ಆಕೆಯನ್ನು ಕೇಳಲು ಹೆದರಿಕೆಯಾಗುತ್ತಿದೆ. ನೀನಿರುವ ಮಾಸ್ಕೋ ನಗರದಲ್ಲಿ ಇದಕ್ಕೆ ಏನಾದರೂ ಮದ್ದು ಇದೆಯಾ ನೋಡು.... ಆದಷ್ಟು ಬೇಗ!'

ಕತೆಯ ಸಾರಾಂಶ ಮೇಲಿನಂತಿದೆ. ಆ ಕತೆ ಮನಸ್ಸನ್ನು ತುಂಬಿದ್ದಾಗ ಸ್ನಾನದ ಮನೆಗೆ ಹೋಗಿ ಟಬ್‌ನಲ್ಲಿ ಕೂತೆ. ಬೆಚ್ಚನೆಯ ನೀರು.....

-ಜೂನ್ 7, 1995

ರಾಜ್ಯಾಂಗ ಬಿಡಿ ಸಾಧುಸಂತಾಂಗ ಕೊಡಿ




ಎಚ್.ಎಲ್. ಕೇಶವಮೂರ್ತಿ

ಅಣಕ

ಆರ ಈ ಕಾಂಗ್ರೆಸ್ಸಿನವರ ಕತೇನೆ ಅರ್ಥವಾಗವಲ್ಲು. ಬಾಬಾ ರಾಮ್‌ದೇವ್ ದೆಹಲಿಗೆ ಬರ್‍ತಾರೆ ಅನ್ನೊ ಸುದ್ದಿ ಕಿವಿಗೆ ಬಿದ್ದ ತಕ್ಷಣ ಬಾರಿಬಾರಿ ಮಂತ್ರಿಗಳೇ ವಿಮಾನ ನಿಲ್ದಾಣಕ್ಕೆ ಹೋಗಿ ಅದ್ದೂರಿಯಾಗಿ ಸ್ವಾಗತ ಮಾಡ್ತಾರೆ. ಮಾರನೆ ದಿನ ಅವರಿಗೆ ದುಬ್ಬ ದೆಹಲಿಯಿಂದ ಹೊರಕ್ಕೆ ದೂಡ್ತಾರೆ. 'ಯಾಕ್ರಯ್ಯ ಹಿಂಗ್ಮಾಡಿದ್ರಿ' ಅಂತ ಕೇಳಿದ್ರೆ ಅವನೊಬ್ಬ ಕಳ್ಳ, ಖದೀಮ, ಠಕ್ಕ ಅಂತ ಏನೇನೋ ಒದರ್‍ತಾರೆ. ಅವ್ನ ಅವರು ಹೇಳಿದಂತವನೇ ಆಗಿದ್ರೆ ಅವ್ನನ್ನ ಯಾಕೆ ಇಷ್ಟು ದಿನ ಬೆಳೆಯೋಕೆ ಬಿಟ್ಟರು? ಮೊದಲೇ ತದುಕಿ ಜೈಲಿಗೆ ತಳ್ಳಾಕೆ ಆಗ್ತಿರಲಿಲ್ವಾ? ಇಂತಹ ಪ್ರಶ್ನೆ ಎಲ್ಲಾ ಬರ್‍ತವೆ. ಅದಕ್ಕೆ ಕಾರಣ ಹೀಗೆ ಇರಬಹುದು. ಅದು ಹೇಳಿಕೇಳಿ ಒಂದು ನೂರ ಇಪ್ಪತ್ತೈದು ವರ್ಷಗಳ ಮುದಿ ಪಕ್ಷ. 'ಅರವತ್ತಕ್ಕೆ ಅರುಳು ಮರುಳು' ಅಂದಂಗೆ ಅದು 'ನೂರ ಇಪ್ಪತ್ತೈದಕ್ಕೆ ಅರುಳುಮರುಳು' ಆಗಿರಬಹುದು ಅಂದು ಕೊಂಡರೆ ಅದು ಹಂಗಲ್ಲವಂತೆ. ಅದರ ಜಾಯಮಾನವೇ ಹಂಗಿದ್ದತಂತೆ. ಒಂದು ಸಾವಿರದ ಒಂಬೈನೂರ ಐವತ್ತನೆ ಇಸವಿಯಲ್ಲಿ ಕರ್ನಾಟಕ ಏಕೀಕರಣ ಆಂದೋಲನ ನಡೀತಿತ್ತಲ್ಲ, ಆಗ ಹುಬ್ಬಳ್ಳಿಯ ನೆಹರು ಮೈದಾನ ಸಭೆ ಸೇರಿತ್ತಂತೆ. ಹೊಸಮನೆ ಸಿದ್ದಪ್ಪನವರಿಂದ ಭಾಷಣ ಇತ್ತಂತೆ. ಅವರು ಟೈಡು ವ್ಯಕ್ತಿಯಂತೆ. ಒಂದು ಸಲ ಹಾವೇರಿಗೆ ನೆಹರು ಬಂದಿದ್ದರಂತೆ. ವೇಳೆಯ ಪರಿವೆಯಿಲ್ಲದೆ ತಡವಾಗಿ ಬಂದ ನೆಹರು ಅವರನ್ನು ಹೊಸಮನೆ ಸಿದ್ದಪ್ಪ **`Do you think that you are the grand moghal of India'** ಅಂತ ತರಟಾಗೆ ತೆಗೆದುಕೊಂಡಿದ್ದೂ ಉಂಟಂತೆ. ಅಂತಹ ಮಹನೀಯರ ಮಾತು ಅಂದ್ರೆ ಕಡ್ಡಿ ಎರಡು ತುಂಡು ಮಾಡಿದ ಹಾಗೆ ತಾನೆ. ಅವರು ತಮ್ಮ ಭಾಷಣದಲ್ಲಿ ಕಾಂಗ್ರೆಸ್ ಕತೆಯ ಬಿಚ್ಚಿಟ್ಟರಂತೆ. ಕಾಂಗ್ರೆಸ್‌ನವರು ಹೇಗೆ ಅಂದರೆ......

ಒಂದು ಊರಲಿ ಗಂಡಹೆಂಡಿರು ಇದ್ದರಂತೆ. ಗಂಡ ಅನ್ನಿಸಿಕೊಂಡವನಿಗೆ ಗಡದ್ದು ನಿದ್ದೆ. ಉಂಡ ಅಂದ್ರೆ ಮುಗೀತು. ದಿಂಬಿಗೆ ತಲೆ ಕೊಟ್ರೆ ಅಂತಾನೆ ಲೆಕ್ಕ. ಹಿಂಗೆ ಮಲಗಿದ್ದವನ್ನ ಬೆಳಗ್ಗೆ ಆ ಸೂರ್ಯ ಪರಮಾತ್ಮನೇ ಬಂದು ಎಬ್ಬಿಸಬೇಕಾಗಿತ್ತು. ದಾಂಪತ್ಯ ಕರ್ತವ್ಯ ನಿಭಾಯಿಸಿದೋನೆ ಅಲ್ಲ. ಹೆಂಡತಿಗೆ ಅದು ಕನಸಿನ ಮಾತಾಗಿತ್ತು. ಒಂದು ದಿನ ರಾತ್ರಿ ಇದ್ದಕ್ಕಿದ್ದಂತೆ ಹಿಂಗೆ ಮಲಗಿದ್ದ ಗಂಡ ಎದ್ದು ಕೂತನಂತೆ. ಹೆಂಡತಿ ಇವತ್ತಾದರೂ ಸುಖ ಅನ್ನೋದು ಸಿಗ್ತದಲ್ಲ ಅಂತ ಸಿಗೋ ಸುಖವ ನೆನಸಿಕೊಂಡೇ ಖುಷಿ ಆದಳಂತೆ. ಮೊಕಮರದಗಲ ಮಾಡಿಕೊಂಡು ಗಂಡನಿಗೆ ಆಹ್ವಾನದ ದೃಷ್ಟಿ ಬೀರಿದಳಂತೆ. ಗಂಡ ಇದ್ದವನು 'ಯಾಕಮ್ಮಿ ಹಂಗೆ ನೋಡೀಯೆ. ನಾನು ಎದ್ದದ್ದು ಅದ್ಕಲ್ಲ ಒಂದ ಮಾಡಕ್ಕೆ' ಅಂದವನೇ ಹೊರಕ್ಕೆ ಹೋಗಿಬಂದು ಕೊರಡಿನಂಗೆ ಬಿದ್ದುಕೊಂಡನಂತೆ. ಈ ಕಾಂಗ್ರೆಸ್ಸಿನವರ ಕತೆಯೂ ಹಂಗೇಯ ಅಂದರಂತೆ.

'ನಾನು ಪಾಟೀಲ ಪುಟ್ಟಪ್ಪ' ಪುಸ್ತಕದಲ್ಲಿ ಸರಜೂ ಕಾಟ್ಕರ್ ಅವರು ನಿರೂಪಿಸಿರುವ ಕತೆಯ ಸಾರಾಂಶ ಓದಿದಾಗ ಕರ್ನಾಟಕ ಕಾಂಗ್ರೆಸ್ಸು ಇನ್ನೂ ಹಂಗೇ ಇದೆಯಲ್ವಾ ಅನ್ನಿಸುತ್ತೆ. ಯಾವುದಾದರೂ ವಿಷಯ ಬಂದಾಗ ಬಾಳೆ ಕಡಿಯಲು ಹೊರಟ ಶೂರ ಗಂಡಂದಿರಂತೆಯೇ ವೀರಾವೇಶದಿಂದ ಟಿವಿ ಕ್ಯಾಮೆರಾಗಳ ಮುಂದೆ ಎಗರಿಎಗರಿ ಬೀಳ್ತಾರೆ; ಸುದ್ದಿ ಮಾಡ್ತಾರೆ; ರಾಜ್ಯಪಾಲರಿಗೆ ಮನವಿಪತ್ರ ಸಲ್ಲಿಸ್ತಾರೆ. ಆಮೇಲೆ ಠುಸ್! ಇವರ ವೀರಾವೇಶದ ನುಡಿಗೆ ಮತ್ತೊಂದು ಸಮಸ್ಯೆ ಎದುರಾಗಬೇಕು!



ಇಂತಹ ಕಾಂಗ್ರೆಸ್ಸು ಆಡಳಿತ ನಡೆಸುತ್ತಾ ಇರುವುದಕ್ಕೇ ಇರಬಹುದು. ಆಡಳಿತದ ಪ್ರತಿ ಹಂತದಲ್ಲೂ ಸುಪ್ರೀಂಕೋರ್ಟು ತಲೆ ಹಾಕಲೇಬೇಕು ಅನ್ನುವ ಪರಿಸ್ಥಿತಿ ಉದ್ಭವಿಸಿದೆ. ರಾಮಲೀಲಾ ಮೈದಾನವನ್ನು ರಾವಣಲೀಲಾ ಮೈದಾನ ಮಾಡ್ಕಂಡಿದೀಯ ಅಂತಾವ ಬಾಬಾ ರಾಮದೇವ್‌ರನ್ನ ಅಲ್ಲಿಂದ ಒದ್ದೋಡಿಸಿದರಲ್ಲಾ ಆಗ ಆಕ್ರೋಶಗೊಂಡ ಭಕ್ತರ ನಿಯಂತ್ರಿಸಲು ಪೊಲೀಸ್ನೋರು ಹೆಂಗಸರು ಮಕ್ಕಳು ಅನ್ನೊ ಮುಖ ಮುಸುಡಿ ನೋಡದೆ ಚಚ್ಚಿ ಬಿಸಾಕಿದರು. ಹಿಂಗ್ಮಾಡೀದರಲ್ಲ ಇದು ನ್ಯಾಯವಾ, ಕಾರಣ ಕೊಡಿ ಅಂತ ಸುಪ್ರೀಂಕೋರ್ಟು ಕೇಳಿಕೊಂಡು ಕುಂತದೆ. ಅವರು ಕೇಳಿರೋದು ನ್ಯಾಯವೇಯ ಅಂದ್ಕಳಾನ. ಕಾವಿ ಹಾಕಿದ ಪುಂಡುಪೋಕರಿಗಳೂ ರಾಜ್ಯಾಂಗ ಅಳ್ಳಾಡುಸ್ತಾ ಕುಂತವೆ. ಯಡ್ಯೂರಪ್ಪನ್ನೋರು ಮಠಾಧೀಶರ ಮುಂದೆ 'ಬುದ್ಧಿ ನೀವು ಹೇಳಿದಂಗೆ ಆಡಳಿತ ನಡುಸ್ತೀನಿ' ಅಂತಾವ ಹೇಳಿ ಕಾಲಿಗೆ ಬೀಳ್ತಾ ಅವ್ರೆ. ಭ್ರಷ್ಟಾಚಾರ ವಿರೋಧ ಅನ್ನೋದು **Fashion of the day** ಆಗದೆ. ಕಾವಿ ತೊಟ್ಟೋರೆಲ್ಲ ನಾಮುಂದು ತಾಮುಂದು ಅಂತ ನಾಯಕತ್ವ ವಹಿಸಿಕೊಳ್ಳೋಕೆ ಮುಗಿಬೀಳ್ತಾ ಅವ್ರೆ. ಬಾಬಾ ರಾಮದೇವ್ ನಾನು ಲೀಡು ಅಂದ್ರೆ ಸಾಧ್ವಿ ರೀತಾಂಬರಿ ಸಾತ್ ನೀಡ್ತೀನಿ ಅಂತ ಮೇಲೆ ಬಿದ್ದು ಬರ್‍ತಾ ಅವ್ರೆ. ಭ್ರಷ್ಟಾಚಾರ ಅಂದ್ರೇನು ಅನ್ನೋದೆ ಜನರಿಗೆ ಗೊಂದಲಮಯ ಆಗದೆ. ಅನ್ಯಾಯವಾಗಿ ಹಣ ಮಾಡೋದೊಂದೇನ, ಅದು ಬಿಟ್ರೆ ಬೇರೆ ಏನೂ ಇಲ್ವ ಅನ್ನೊದೆ ತಿಳಿವಲ್ದು. ಅದ್ನೆಲ್ಲ ಮುಚ್ಚಾಕೋಕೆ ಹಿಂಗೆ ಕುಣೀತಾ ಬಿದ್ದವ್ರೋ ಏನೋಪ. ನೀವು ಮಾಡ್ತಿರೋದೆ ಸರಿ ಅನ್ನೊ ರೀತೀಲಿ ಸರ್ಕಾರಾನೂ ನಡಕೊಳ್ತಾ ಇದೆ. ಅವರ ಆಶಯಗಳಿಗೆ ತಕ್ಕಂತೆ ಕುಣೀತಾ ಹೋದ್ರೆ ರಾಜ್ಯಾಂಗದ ಬದಲು 'ಸಾಧು ಸಂತಾಂಗ' ಬರಲಿ ಅನ್ನೊ ದಿನ ದೂರ ಇಲ್ಲ ಅನ್ಸುತ್ತೆ. ಈ ಸುಖಕ್ಕೆ ಪ್ರಜಾಪ್ರಭುತ್ವ, ಚುನಾವಣೆ, ಸಂವಿಧಾನ ಅನ್ನೊ ದೊಡ್ಡದೊಡ್ಡ ಮಾತುಗಳೆಲ್ಲ ಯಾಕೆ ಬೇಕು? ಆಡಳಿತಾನ ಸುಪ್ರೀಂಕೋರ್ಟಿಗೊ, ಕಾವಿಧಾರಿಗಳಿಗೋ ವಹಿಸಿ ಕೊಡೋದೆ ಸಲೀಸು ಅನ್ನಿಸುತ್ತೆ.

ಹೇ ಹಂಗ್ಮಾಡ್ಬಾರ್ದು. ಪ್ರಜಾತಂತ್ರ ವ್ಯವಸ್ಥೆ ಅನ್ನುವುದು ಇರಲೇಬೇಕು ಅನ್ನುವವರೂ ಇದ್ದಾರೆ. ಅಂತಹವರಲ್ಲಿ ಒಂದು ಮನವಿ. ಪ್ರಸ್ತುತ ಕರ್ನಾಟಕದ ರಾಜಕೀಯವನ್ನೇ ಗಮನಿಸಿ. ವಿಪಕ್ಷಗಳಲ್ಲಿ ಒಂದಾದ ಜಾತ್ಯತೀತ ಜನತಾದಳ ಮೊದಲೇ ವಿಧಾನಸಭೆ ಅಧಿವೇಶನವನ್ನು ಬಹಿಷ್ಕರಿಸುತ್ತೇವೆ ಎಂದು ಸಾರಿತು. ಕಾಂಗ್ರೆಸ್ಸಿನೋರು 'ಅದ್ಕಲ್ಲ ಇದ್ಕೆ' ಅನ್ನೊ ಗಂಡನ ತರಹ ಆಡಿದ್ರು. ಮೊದಲನೆ ದಿವಸ ವಿಧಾನಸಭೆಗೆ ಹಾಜರಾಗಿ ನಿಲುವಳಿ ಸೂಚನೆ ಮಂಡಿಸಿದ್ರು. ಸುಪ್ರೀಂಕೋರ್ಟು ವಿಧಾನಸಭೆ ಅಧ್ಯಕ್ಷರಿಗೆ ಛೀಮಾರಿ ಹಾಕಿರೋದ್ರಿಂದ ಅವರು ಆ ಸ್ಥಾನದಲ್ಲಿರಬಾರದು ಅನ್ನುವುದು ಅವರ ತಕರಾರು. ಇದು ಆಗೋ ಹೋಗೋ ಮಾತಲ್ಲ ಅನ್ನೋದು ಅವರಿಗೆ ತಿಳಿದಿತ್ತು. ಯಾಕೆಂದರೆ ಛೀಮಾರಿ ಹಾಕಿದ್ದು ಅಧ್ಯಕ್ಷರಿಗೆ ಮಾತ್ರ ಅಲ್ಲ; ಯಡ್ಯೂರಪ್ನೋರಿಗೂ ಕೂಡ. ಬುದ್ಧಿಜೀವಿ ಸುರೇಶ್ ಕುಮಾರ್ ಅವರು ಸುಪ್ರೀಂಕೋರ್ಟ್ ಕ್ಯಾಕರಿಸಿ ಮಕ್ಕುಗ್ದಿಲ್ಲ ಕಣ್ರಿ ಗಂಟಲ ಕೆರೆತ ಅಂತ ಕ್ಯಾಕರಿಸಿದರು ಅಷ್ಟೇಯ. ಮಕ್ಕುಗಿದಿಲ್ಲ; ಒಂದು ಚೂರು ಉಗುಳೂ ನಮ್ಮ ಮೈಮೇಲೆ ಬಿದ್ದಿಲ್ಲ ಅನ್ನೋ ರೀತೀಲಿ 'ಛೀಮಾರಿ ಅಲ್ಲ ಅವರ ಅಭಿಪ್ರಾಯ' ಅಂತ ಹೇಳ್ತವೆ. ಹೈಕೋರ್ಟಲಿ ನಂ ಪರವಾಗೇ ತೀರ್ಪು ಬಂದಿತ್ತಲ್ಲ ಅವರೂ ಜಡ್ಜುಗಳೇ ಅಲ್ವಾ ಅಂತ ಹೇಳಿ ಕೋರ್ಟುಗಳಲ್ಲಿ ಹೈಕೋರ್ಟು ಮೇಲೊ, ಸುಪ್ರೀಂಕೋರ್ಟ್ ಮೇಲೊ ಎಂಬ ಜಿಜ್ಞಾಸೆ ಮೂಡಿಸುವುದರಲ್ಲಿ ಯಶಸ್ವಿಯಾಗಿದ್ದಾರೆ. ಅವರ ಮೇಧಾವಿತನಕ್ಕೆ ವಂದಿಸಲೇಬೇಕು. ಅದು ಹಾಳಾಗಲಿ. ಕಾಂಗ್ರೆಸ್ 'ಛೀಮಾರಿ' ವಿಷಯಕ್ಕೆ ಬರೋಣ. ಅಧ್ಯಕ್ಷರನ್ನ ತಗೀರಿ ಅಂದ್ರೆ ಯಡ್ಯೂರಪ್ನೋರ್‍ನೂ ತೆಗೀರಿ ಅಂತಲ್ವ. ಅವರು ಅದ ಉಳಿಸಿಕೊಳ್ಳೋಕೆ ಅಂತ ಎಷ್ಟು ಕೆರೆ ನೀರು ಕುಡಿದಿದ್ದಾರೋ ಏನೋ. ಅವರೇ ಅನೇಕ ಬಾರಿ ಹೇಳಿರುವುದರಿಂದ ಅಗ್ನಿಪರೀಕ್ಷೆಗೆ ಹಲವು ಬಾರಿ ಒಳಗಾಗಿದ್ದರು ಅನ್ನುವುದಂತೂ ಸತ್ಯ. ಅಗ್ನಿಯಲ್ಲಿ ಬೆಂಕಿಯ ಕಾವೇ ಇರಲಿಲ್ಲ ಎಂಬುದು ಅಲಾಯಿದ. ಇಂತಹ ಯಡ್ಯೂರಪ್ನೋರು ಯಾವ ಕಾರಣಕ್ಕೂ ಇದಕ್ಕೆ ಒಪ್ಪಲ್ಲ ಅಂತ ಮೊದಲೇ ಅಂಗೈ ಹುಣ್ಣಿನಂತೆ ಸ್ಪಷ್ಟ ಇತ್ತು. ಕಾಂಗ್ರೆಸ್‌ನೋರ್‍ಗೂ ಗೊತ್ತಿತ್ತು. ಅದಕ್ಕೇ ಅವ್ರು 'ಅದ್ಕೇ ಎದ್ದಂಗೆ' ತೋರಿಸಿದ್ರು ಅಷ್ಟೇಯ!

ವಿಧಾನಸಭೆಯಲ್ಲಿ ಹಲವು ಮಸೂದೆಗಳು ಚರ್ಚೆಗೆ ಬರುತ್ತವೆ. ಅವುಗಳ ಮೇಲೆ ಬೆಳಕು ಚೆಲ್ಲುವುದು ಚರ್ಚೆಯ ಉದ್ದೇಶ. ಅದೇ ಆಗದಿದ್ದರೆ ಹೇಗೆ ಅಂತ ಹಲುಬುವವರೂ ಇದ್ದಾರೆ. ಸ್ವಾಮಿ ವಿಧಾನಸಭೇಲಿ ಯಾವುದೇ ಮಸೂದೆಯ ಮೇಲೂ ಚರ್ಚೆ ಆಗುವುದಿಲ್ಲ. ಕೇಂದ್ರದಲ್ಲಾಗಲಿ, ರಾಜ್ಯದಲ್ಲಾಗಲಿ ಕೂಗಾಟ ಕಿರುಚಾಟ ನಡುವೆಯೇ 'ಧ್ವನಿಮತ'ದಿಂದ ಅನುಮೋದನೆ ಪಡೆಯುತ್ತವೆ. ಪ್ರಸ್ತುತ ವಿಧಾನಸಭೆಯಲ್ಲಿ ವಿರೋಧಪಕ್ಷಗಳ ಸದಸ್ಯರೇ ಇರಲಿಲ್ಲ. ಆದರೂ ಮಸೂದೆಗಳು ಅನುಮೋದನೆ ಪಡೆದಿವೆ. ವಿಪಕ್ಷಗಳು ಇದ್ದರೂ ಆಗುತ್ತಿದ್ದುದು ಇದೇ!

ಅದಕ್ಕೆ ನಮ್ಮ ಸೂತ್ರ
'ರಾಜ್ಯಾಂಗದ ಬದಲು
ಪಂಚಾಂಗ ಬರಲಿ
ದೇಶದ ಆಡಳಿತ
ಕಾವಿಧಾರಿಗಳ ಕೈ ಸೇರಲಿ'
ಸರಿ ಅಲ್ಲವಾ....

ಹಿಜ್ರಾ ರೇವತಿಯ ಕತೆ ಹೃದಯ ಕಲಕಿತು



ಪ್ರಳಯಾಂತಕರ ಪ್ರಳಯ ವೃತ್ತಾಂತ ಬಗ್ಗೆ ತಾವು ಹೇಳಿದ್ದು ಸರಿ. ಧಾರ್ಮಿಕ ಮೌಢ್ಯ ಹರಡಿ ತಮ್ಮ ಬೇಳೆ ಬೇಯಿಸಿಕೊಳ್ಳುವ ಜನರು ಕೇವಲ ಭಾರತದಂತಹ ಹಿಂದುಳಿದ ಅರೆ-ಸಾಕ್ಷರ ದೇಶದಲ್ಲಿ ಮಾತ್ರವಲ್ಲ, ಅತಿ ವಿದ್ಯಾವಂತರಿರುವ ಮುಂದುವರಿದ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲೂ ಇದ್ದಾರೆ.

ವೇದ, ಬೈಬಲ್, ಖುರಾನ್ ಸಹಿತ ಜಗತ್ತಿನ ಎಲ್ಲಾ ಧರ್ಮದ ಪವಿತ್ರ ಗ್ರಂಥಗಳಲ್ಲೂ ಭೂಮಿ ಕಾವಲಿಯಂತೆ ಚಪ್ಪಟೆಯಾಗಿದೆ ಎಂಬ ಘೋರ ತಪ್ಪನ್ನು ಆಡಿಗಡಿಗೆ ಮಾಡಲಾಗಿದೆ. ದಿಗಂತ, ಪ್ರಪಾತ, ಪಾತಾಳ ಮುಂತಾದ ಇಲ್ಲದೇ ಇರುವ ಆಯಾಮಗಳು ಇವೆಯೆಂಬಂತೆ ಚಿತ್ರಿಸಿ ಜಗತ್ತಿನ ಎಲ್ಲಾ ಧಾರ್ಮಿಕ ಗ್ರಂಥಗಳೂ ತಪ್ಪೆಸಗಿವೆ. ಸ್ವತಃ ತಾವು ನಿಂತಿರುವ ಭೂಮಿಯ ಸ್ವರೂಪದ ಬಗ್ಗೆ ಮತ್ತೂ ಕಣ್ಣಿಗೆ ದಿನಾ ಕಾಣುವ ಸೂರ್ಯ ಚಂದ್ರರ ಸ್ವರೂಪದ ಬಗ್ಗೆ ತಮ್ಮ ಅಂತರ್‌ಜ್ಞಾನದಿಂದ ಒಂದಿಷ್ಟೂ ತಿಳಿದುಕೊಳ್ಳಲಾಗದ ಋಷಿಮುನಿಗಳು, ಪ್ರವಾದಿಗಳು, ಸಂತರು ತಮ್ಮ ಕಣ್ಣಿಗೆ ಕಾಣದ ದೇವರ ಸ್ವರೂಪದ ಬಗ್ಗೆ ಹಾಗೂ ಮುಂದೆ ಆಗಬಹುದಾದ ಘಟನೆಗಳ ಬಗ್ಗೆ ಅಂತರಜ್ಞಾನದಿಂದ ಏನು ತಾನೇ ಹೇಳಬಲ್ಲರು?

ಎಲ್ಲಾ ಧಾರ್ಮಿಕ ಗ್ರಂಥಗಳಲ್ಲಿ ಭೂಮಿ ಚಪ್ಪಟೆಯಾಗಿದೆ ಎಂಬ ಘೋರ ತಪ್ಪು ಇರುವಾಗ, ಈ ಗ್ರಂಥಗಳಲ್ಲಿ ಬರೆದಿರುವ ಇತರ ವಿಷಯಗಳು ಎಷ್ಟು ಸರಿಯಾಗಿರಬಲ್ಲವು? ಎಂಬ ಜಿಜ್ಞಾಸೆ ಪ್ರಜ್ಞಾವಂತರದ್ದು.

-ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

ಮೊನ್ನೆ ಶನಿವಾರ **4.6.2011** ನಡೆದ ಸಮಾರಂಭ ವಿಶಿಷ್ಟವಾಗಿತ್ತು, ಹಿಜಡಾ ರೇವತಿಯ ಆತ್ಮಕಥೆ ಪುಸ್ತಕ ಬಿಡುಗಡೆಗೆ ಬಂದಿದ್ದೆ. ಬಹುದಿನಗಳ ನಂತರ ಸುಂದರ ಕನ್ನಡ ಭಾಷಣಗಳನ್ನು ಕೇಳಿ ಮನಸ್ಸು ಮುದಗೊಂಡಿತು.

ನಿಜ ಹೇಳಬೇಕೆಂದರೆ, ಸಭೆಯ ಶುರುವಾತಿನಲ್ಲಿ ಪ್ರೇಕ್ಷಕರಲ್ಲಿ ಹೆಚ್ಚಿನವರು ಹಿಜಡಾಗಳಾಗಿದ್ದರು. ಅವರ ವಿಚಿತ್ರ ಹಾವಭಾವ ನೋಡಿ ನನಗೆ ಒಂಥರಾ ಮುಜುಗರವಾಯ್ತು, ಎದ್ದು ಇನ್ನೊಂದೆಡೆ ಕುಳಿತೆ. ಆದರೆ ಪುಸ್ತಕವನ್ನು ಬಿಡುಗಡೆ ಮಾಡಿದ ಡಾ. ಸಿ.ಎಸ್. ದ್ವಾರಕಾನಾಥ್, ಬಿ.ಟಿ. ವೆಂಕಟೇಶ್, ದು. ಸರಸ್ವತಿ ಮತ್ತು ಪರೀಘಾರ ಮಾತು ಕೇಳಿ ನನ್ನ ಕಣ್ಣು ತೆರೆಯಿತು.


ಈ ಸಮುದಾಯವೂ ದೈವಸೃಷ್ಟಿಯಲ್ಲವೇ? ಅವರಲ್ಲೂ ಹಸಿವು, ನೀರಡಿಕೆ ಮತ್ತು ಕೆಂಪು ರಕ್ತಗಳಿಲ್ಲವೆ? ಎಲ್ಲೋ ಒಂದು ಕಡೆ, ಟ್ರಾಫಿಕ್ ಸಿಗ್ನಲ್ ಬಳಿ ಒಂದಿಬ್ಬರು ಭಿಕ್ಷೆ ಬೇಡಿದ ಮಾತ್ರಕ್ಕೆ ಇಡೀ ಸಮುದಾಯವನ್ನು ಹೀಗಳೆಯುವುದು ಎಷ್ಟು ಸರಿ?

ರೇವತಿ ಕಷ್ಟಪಟ್ಟು, ತಮಿಳ್ಗನ್ನಡದಲ್ಲಿ ತನ್ನ ಕಥೆಯನ್ನು ಹೇಳಿದ್ದು ಯಾರ ಹೃದಯವನ್ನಾದರೂ ಕಲಕುತ್ತಿತ್ತು.

ನನ್ನ ಒಂದು ಅಂದಾಜಿನ ಪ್ರಕಾರ ಪ್ರತೀ ಸಣ್ಣ ಊರಿನಲ್ಲೂ ಈ ತರಹದವರು ಮೂರ್‍ನಾಲ್ಕು ಜನ ಸಿಕ್ಕುತ್ತಾರೆ.

ನಮ್ಮ ಪುರಾಣಗಳಲ್ಲಿ ಅರ್ಧನಾರೀಶ್ವರನ ಪ್ರಸ್ತಾಪ ಬರುತ್ತದೆ. ಅದರ ಬಗ್ಗೆ ಯಾರಾದರೂ ತುಚ್ಛವಾಗಿ ಮಾತನಾಡುತ್ತಾರೆಯೇ? ಹಾಗಿದ್ದ ಮೇಲೆ ಈ ನತದೃಷ್ಟರ ಬಗ್ಗೆ ಯಾಕೆ ಕಟುಕತನ?

-ಪ್ರಕಾಶ ಬಿಸ್ನಾಗರ, ಬೆಂಗಳೂರು



ಕಳೆದ ವಾರದ 'ಲಂಕೇಶ್'ನ ಸಿನಿಮಾ ಕಾಲಂ ನೋಡಿ ಶಾಕ್ ಆಯಿತು. ಇದಕ್ಕೆ ಕಾರಣ ನಟಿ ಶಿಲ್ಪಾ ಶೆಟ್ಟಿ ಕುರಿತಾದ ಪುಟ್ಟ ಬರಹ ಮತ್ತು ಅದಕ್ಕಿಟ್ಟ ತಲೆಬರಹ. ಮಹಿಳೆಯೊಬ್ಬರ ಸಂಪಾದಕತ್ವದಲ್ಲಿ, ಮಹಿಳಾಪರ ವಿಚಾರ ಮೈದುಂಬಿಕೊಂಡು ಬರುತ್ತಿರುವ ಪತ್ರಿಕೆಯೊಂದರಲ್ಲಿ 'ಗರ್ಭಿಣಿಯಲ್ಲಾರೀ ಗುಂಡುಬೀರಿ' ಎಂಬಂಥ ಬರಹ ಪ್ರಕಟವಾದರೆ ಸಹಜವಾಗೇ ಶಾಕ್ ಆಗುತ್ತೆ. ಅಷ್ಟಕ್ಕೂ ಆಕೆ ಗರ್ಭಿಣಿಯಾಗಬೇಕೆಂದು ಯಾಕೆ ಬಯಸುತ್ತೀರಿ? ಇಂಥಾ ಬರಹಗಳು ಮಹಿಳೆಯರ ಮೇಲೆ ಗೌರವ ಉಡುಗಿದಂಥಾ ಸಮಾಜ ನಿರ್ಮಾಣವಾಗಲು ಪ್ರೇರೇಪಿಸುತ್ತದೆಂಬುದು ನನ್ನ ಭಾವನೆ. ಇನ್ನು ಮುಂದೆ ಇಂಥಾ ಅವಘಡ ಸಂಭವಿಸುವುದಿಲ್ಲವೆಂದು ಆಶಿಸುತ್ತೇನೆ.

-ಅನಿರುದ್ಧ ನಾಗರಾಜ್, ಇ-ಮೇಲ್ ಮೂಲಕ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು **lankesh70@rediffmail.com** ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.

ಸಿಸಿಎಲ್ ಚಾಂಪಿಯನ್ ಸುದೀಪ್ ತಂಡ



ಸೆಲೆಬ್ರಿಟಿ ಕ್ರಿಕೆಟ್ ಲೀಗ್ ಟೂರ್ನಮೆಂಟ್‌ನಲ್ಲಿ ಕರ್ನಾಟಕ ತಂಡ ಫೈನಲ್ಸ್ ತಲುಪಿದೆ. ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆದ ಮೊದಲ ಹೊನಲು ಬೆಳಕಿನ ಪಂದ್ಯದಲ್ಲಿ ಸುನೀಲ್ ಶೆಟ್ಟಿ ನಾಯಕತ್ವದ ಬಾಲಿವುಡ್ ತಂಡವನ್ನು ಮಣಿಸಿದ ಸುದೀಪ್ ನಾಯಕತ್ವದ ಕರ್ನಾಟಕ ತಂಡ, ಮದ್ರಾಸ್‌ನ ಚೆಪಾಕ್ ಸ್ಟೇಡಿಯಂನಲ್ಲಿ ನಡೆದ ದ್ವಿತೀಯ ಪಂದ್ಯದಲ್ಲಿ ತಮಿಳುನಾಡು ತಂಡವನ್ನು ಸೋಲಿಸುವ ಮೂಲಕ ಫೈನಲ್ಸ್ ತಲುಪಿತು. ಮುಂದಿನ ಶನಿವಾರ ವಿಶಾಖಪಟ್ಟಣದಲ್ಲಿ ಸುದೀಪ್ ತಂಡ ವೆಂಕಟೇಶ್ ನಾಯಕತ್ವದ ಆಂಧ್ರ ತಂಡವನ್ನು ಎದುರಿಸಲಿದೆ. ಈ ಪಂಧ್ಯ ಆಂಧ್ರ ತಂಡಕ್ಕಷ್ಟೇ ಮುಖ್ಯ ವಿನಃ ಕರ್ನಾಟಕ ತಂಡಕ್ಕಲ್ಲ. ಈಗ ಉಳಿದಿರುವ ಕುತೂಹಲವೆಂದರೆ ಆಂಧ್ರ-ತಮಿಳುನಾಡು ಮತ್ತು ಬಾಲಿವುಡ್ ಈ ಮೂರು ತಂಡಗಳಲ್ಲಿ ಯಾವ ತಂಡ ಫೈನಲ್‌ಗೆ ಪ್ರವೇಶ ಪಡೆಯುತ್ತದೆ ಎಂಬುದು.

ಕ್ರಿಕೆಟ್ ಆಟದಲ್ಲಿ ಕನ್ನಡ ಚಿತ್ರರಂಗದ ಈ ಸಾಧನೆ ಒಂದು ರೀತಿಯಲ್ಲಿ ಪರಭಾಷಾ ಚಿತ್ರರಂಗದ ವಿರುದ್ಧ ಮತ್ಸರವನ್ನು ತೀರಿಸಿಕೊಂಡಂತೆ ಕಾಣಿಸುತ್ತಿದೆ. ಕಳೆದ ಹಲವಾರು ವರ್ಷಗಳಿಂದ ತಮಿಳು, ತೆಲುಗು ಮತ್ತು ಹಿಂದಿ ಚಿತ್ರಗಳು ಕನ್ನಡ ಚಿತ್ರರಂಗದ ಮೇಲೆ ಸವಾರಿ ಮಾಡಿ ಇಲ್ಲಿಯ ಉದ್ಯಮವನ್ನು ದುಃಸ್ವಪ್ನದಂತೆ ಕಾಡಿದ್ದು ಸುಳ್ಳಲ್ಲ! ಚಿತ್ರ ನಿರ್ಮಾಣ, ತಾಂತ್ರಿಕತೆ, ಚಿತ್ರಕಥೆ, ಸಂಗೀತ, ಮಾರುಕಟ್ಟೆ ಈ ಎಲ್ಲಾ ವಿಭಾಗಗಳಲ್ಲಿ ಕನ್ನಡಿಗರಿಗಿಂತ ಅನ್ಯಭಾಷೆಯವರದೇ ಒಂದು ಕೈ ಮೇಲು ಎಂಬುದೂ ಸುಳ್ಳಲ್ಲ. ಇಂತಹ ಸಂದರ್ಭದಲ್ಲಿ ಕಂಗೆಟ್ಟುಹೋಗಿರುವ ಕನ್ನಡ ಚಿತ್ರರಂಗಕ್ಕೆ ಸುದೀಪ್ ನಾಯಕತ್ವದ ಕ್ರಿಕೆಟ್ ತಂಡ ಬಾಲಿವುಡ್ ಮತ್ತು ಕಾಲಿವುಡ್ ತಂಡವನ್ನು ಭಾರೀ ಅಂತರದಿಂದ ಸೋಲಿಸಿದ್ದು ಗಾಂಧಿನಗರದಲ್ಲಿ ಎಲ್ಲರ ಮುಖದಲ್ಲಿ ನಗು ತಂದುಕೊಟ್ಟಿದೆ. ಒಂದು ರೀತಿಯಲ್ಲಿ ಕನ್ನಡ ಕಲಾವಿದರ ಮನೋಸ್ಥೈರ್ಯವನ್ನು ರಾಷ್ಟ್ರೀಯ ಸಿನಿಮಾ ಕ್ಷೇತ್ರದಲ್ಲಿ ಎತ್ತಿ ಹಿಡಿದಿದೆ ಎಂದರೂ ತಪ್ಪಾಗಲಾರದು. ಅದಕ್ಕಾಗಿ ಸುದೀಪ್ ತಂಡಕ್ಕೆ ಮೊದಲಿಗೆ ಅಭಿನಂದನೆಗಳು.


ಮೊದಲ ಪಂದ್ಯದಲ್ಲಿ ಶೂನ್ಯಕ್ಕೆ ಔಟಾದ ಬಾಲಿವುಡ್ ತಂಡದ ಸೊಹೆಲ್ ಖಾನ್ ಟಿವಿಗೆ ನೀಡಿದ ಪ್ರತಿಕ್ರಿಯೆ ಒಂದು ರೀತಿಯಲ್ಲಿ ಅವರ ಹಪಾಹಪಿಯನ್ನು ತೋರಿಸುತ್ತಿತ್ತು. "ಕನ್ನಡ ತಂಡದಲ್ಲಿ ಸ್ಟಾರ್ಸ್‌ಗಳೇ ಇಲ್ಲ, ಬರೀ ಕ್ರಿಕೆಟ್ ಆಟಗಾರರೇ ತುಂಬಿದ್ದಾರೆ. ಯೂನಿವರ್ಸಿಟಿಯಲ್ಲಿ ಆಡಿದ ಆಟಗಾರರೆಲ್ಲ ಅಲ್ಲಿದ್ದಾರೆ..." ಎಂದೆಲ್ಲಾ ಹೇಳಿದರು. ಅದೊಂದು ಸಣ್ಣ ವಿವಾದಕ್ಕೂ ಎಡೆಮಾಡಿಕೊಟ್ಟಿತ್ತು.

ಆದರೆ ಇದಕ್ಕೆ ಸಂಬಂಧಪಟ್ಟಂತೆ ಸುದೀಪ್ "ಅವರು ನಮ್ಮ ತಂಡ 'ಎ' ಗ್ರೇಡ್ ಲೀಗ್ ಮ್ಯಾಚ್‌ನಲ್ಲಿ ಆಡುವ ತಂಡದಂತಿದೆ ಎಂದು ಹುರಿದುಂಬಿಸಿದ್ದೇ ವಿನಃ ಅದನ್ನು ವಿವಾದ ಮಾಡುವ ಅಗತ್ಯವಿಲ್ಲ" ಎಂದರು. ಅದಕ್ಕೆ ಪೂರಕವೆಂಬಂತೆ ಸೊಹೆಲ್ ಖಾನ್ ನೀಡಿದ ಸ್ಪಷ್ಟೀಕರಣ ಎಸ್ಸೆಮ್ಮೆಸ್ ಅನ್ನು ತೋರಿಸಿದರು.

ಈ ಬಗ್ಗೆ ಸುದೀಪ್ ಹೇಳಿದ್ದು ಇಷ್ಟೇ: "ನಾವು ಮೂಲತಃ ಸಿನಿಮಾ ಕಲಾವಿದರು. ಹವ್ಯಾಸಕ್ಕಾಗಿ ಕ್ರಿಕೆಟ್ ಆಡಿದ್ದೇವೆ ಅಷ್ಟೇ. ಅವರೆಲ್ಲ ನಮ್ಮ ಸ್ನೇಹಿತರು. ಕ್ರಿಕೆಟ್‌ನಲ್ಲಿ ಗೆದ್ದಾಕ್ಷಣ ನಾವು ಅವರನ್ನು ಸೋಲಿಸಿದ್ದೇವೆ ಎಂಬ ಗರ್ವ ನಮಗಿಲ್ಲ, ಆ ಕಾರಣಕ್ಕಾಗಿಯೇ ಮದ್ರಾಸ್‌ನಲ್ಲಿ ನಮ್ಮ ತಂಡ ತಮಿಳುನಾಡು ತಂಡವನ್ನು ಸೋಲಿಸಿದ ಬಳಿಕ, ನಾವೇನೂ ಆವೇಶಭರಿತರಾಗಿ ಮೈದಾನಕ್ಕೆ ನುಗ್ಗಲಿಲ್ಲ, ಬದಲಿಗೆ ನಿಧಾನವಾಗಿ ಬೌಂಡರಿ ಲೈನ್‌ನೊಳಗೇ ನಡೆಯುತ್ತ ನಮ್ಮ ಆಟಗಾರರು ಬರುವುದನ್ನು ಕಾದು ಅಭಿನಂದಿಸಿದೆವು. ಕ್ರಿಕೆಟ್ ಮೈದಾನದಲ್ಲಿ ನಮ್ಮ ವರ್ತನೆ ಪರಭಾಷಾ ಚಿತ್ರದೊಂದಿಗೆ ನಮ್ಮ ಸಂಬಂಧವನ್ನು ಇನ್ನಷ್ಟು ಗಟ್ಟಿಗೊಳಿಸಬೇಕೇ ವಿನಃ ಅದರಿಂದಾಗಿ ಕೆಡಬಾರದೆಂಬ ಜವಾಬ್ದಾರಿ ನನಗೆ ಗೊತ್ತು....

"ನಮ್ಮ ತಂಡದ ಎಲ್ಲಾ ಸದಸ್ಯರು ನಟಿಸಿರುವ ಚಿತ್ರಗಳ ತುಣುಕುಗಳನ್ನು ನಾನು ಮೊದಲೇ ಸಿಸಿಎಲ್‌ಗೆ ಕಳುಹಿಸಿಕೊಟ್ಟಿದ್ದೆ. ನಮ್ಮಲ್ಲಿ ಯಾರೂ ಡೂಪ್ಲಿಕೇಟ್ ಪ್ಲೇಯರ್ಸ್ ಇಲ್ಲವೇ ಇಲ್ಲ. ಇದನ್ನು ಯಾವ ತಂಡದ ನಾಯಕ ಬೇಕಾದರೂ ಪರಿಶೀಲಿಸಬಹುದು. ಇನ್ನೊಂದು ವಿಶೇಷವೆಂದರೆ ನಾವು ಬಿಟ್ಟರೆ ಬೇರೆ ಯಾವುದೇ ತಂಡದ ಕ್ಯಾಪ್ಟನ್ ಈ ತರಹ ಕ್ಲಿಪಿಂಗ್ಸ್ ನೀಡಿಲ್ಲ" ಎಂದರು ಸುದೀಪ್.

ಅದೇನೇ ಇರಲಿ, ಸುದೀಪ್ ತಂಡದ ಎಲ್ಲಾ ಸದಸ್ಯರು ಕಳೆದ ಹಲವಾರು ತಿಂಗಳುಗಳಿಂದ ಕಠಿಣವಾದ ಅಭ್ಯಾಸವನ್ನು ಮಾಡಿದ್ದಾರೆಂಬುದು ಬಹುತೇಕ ಜನರಿಗೆ ಗೊತ್ತಿಲ್ಲ. ಬಳ್ಳಾರಿ ರಸ್ತೆಯಲ್ಲಿರುವ ಫನ್‌ವರ್ಲ್ಡ್ ಪಕ್ಕದ ಎನ್‌ಆರ್‌ಐ ಗ್ರೌಂಡ್‌ನಲ್ಲಿ ಕಳೆದ ಮೂರು ತಿಂಗಳಿನಿಂದ ಬೆಳಗಿನ ಜಾವ ಆರು ಗಂಟೆಗೆ ತಂಡದ ಸದಸ್ಯರು ಅಭ್ಯಾಸಕ್ಕಾಗಿ ಸೇರುತ್ತಿದ್ದರು. ಒಂಭತ್ತು ಗಂಟೆಯತನಕ ಅಭ್ಯಾಸ ಮಾಡಿದ ನಂತರ ಅವರೆಲ್ಲ ಅಲ್ಲಿಂದ ನೇರವಾಗಿ ಶೂಟಿಂಗ್‌ಗೆ ತೆರಳಿದ್ದೂ ಉಂಟು. ಆರು ಗಂಟೆಯ ನಂತರ ಬಂದವರನ್ನು ಸುದೀಪ್ ಅಭ್ಯಾಸಕ್ಕೆ



ಸೇರಿಸಿಕೊಳ್ಳುತ್ತಿರಲಿಲ್ಲ, ಅದರ ಬದಲಿಗೆ ಶಿಕ್ಷೆಯ ರೂಪದಲ್ಲಿ ಆತ ಕ್ರೀಡಾಂಗಣದ ಸುತ್ತ ಹತ್ತು ಬಾರಿ ಓಡಬೇಕಿತ್ತು, ಆ ನಂತರ ಆತ ಬಂದದಾರಿಗೆ ಸುಂಕವಿಲ್ಲವೆಂಬಂತೆ ಮನೆಗೆ ವಾಪಸ್ಸಾಗಬೇಕಿತ್ತು!

ಅಷ್ಟೇ ಅಲ್ಲ, ಹೀಗೆ ಪ್ರಾಕ್ಟೀಸ್ ಮಾಡುತ್ತಿದ್ದ ಸಂದರ್ಭಗಳಲ್ಲಿ ತಂಡದ ಆಟಗಾರರು ಒಟ್ಟು ಸೇರಿ ಪಾರ್ಟಿ ಮಾಡಿದ್ದಿಲ್ಲ, ಧಮ್ ಹೊಡೆದದ್ದೂ ಇಲ್ಲ! ಈ ತರಹದ ಕಟ್ಟುನಿಟ್ಟಿನ ಶಿಸ್ತು ಮತ್ತು ತರಬೇತಿಯಿಂದ ಇವತ್ತು ಕನ್ನಡ ಚಿತ್ರರಂಗದ ತಂಡ ಕ್ರಿಕೆಟ್ ಕ್ರೀಡಾಂಗಣದಲ್ಲಿ ದೊಡ್ಡ ಸಾಧನೆ ಮಾಡಲು ಸಾಧ್ಯವಾಗಿದೆ.

"ಫೈನಲ್ಸ್‌ನಲ್ಲಿ ನಿಮ್ಮ ತಂಡ ಗೆಲ್ಲುವ ಸಾಧ್ಯತೆ ಇದೆಯೇ?" ಎಂದು ಸುದೀಪ್ ಅವರನ್ನು ಕೇಳಿದರೆ "ಪರಭಾಷೆಯವರು ಎಲ್ಲಾ ಆ್ಯಂಗಲ್‌ನಿಂದಲೂ ನಮ್ಮ ಚಿತ್ರರಂಗಕ್ಕೆ ಹೊಡೆಯುತ್ತಲೇ ಇದ್ದಾರೆ. ಆದರೆ ಕರ್ನಾಟಕದ ಕೀರ್ತಿ ಪತಾಕೆಯನ್ನು ಚಿತ್ರರಂಗದಲ್ಲಿ ಹಾರಿಸಲು ನಮಗಿದೊಂದು ಅವಕಾಶ ಎಂಬುದು ನಮ್ಮ ತಂಡದ ಸದಸ್ಯರೆಲ್ಲರ ಭಾವನೆ. ಈ ಕ್ರಿಕೆಟ್ ಕಪ್ ಅನ್ನು ಗೆದ್ದುಕೊಡುತ್ತೇವೆ ಎಂದು ಉದ್ಯಮದವರಿಗೆ ಭರವಸೆ ನೀಡಿದ್ದೇನೆ. ಹೀಗಾಗಿ ಮೊದಲ ಸಿಸಿಎಲ್ ಕಪ್ ಅನ್ನು ಗೆಲ್ಲುವ ತನಕ ನಾವು ವಿರಮಿಸುವುದಿಲ್ಲ..." ಎಂದರು ಸುದೀಪ್.

ಅಂದಹಾಗೆ ಈ ಕಪ್ ಗೆದ್ದರೆ ಉದ್ಯಮದವರು ಏನಾದರೂ ಬಹುಮಾನದ ಆಮಿಷ ನೀಡಿದ್ದಾರೆಯೇ? ಎಂದಾಗ ಸುದೀಪ್ "ನಾವು ಬಹುಮಾನಕ್ಕಾಗಿ ಆಡುತ್ತಿಲ್ಲ; ಈ ಹಿಂದೆ ಆದ ಅವಮಾನಗಳನ್ನು ಹೋಗಲಾಡಿಸಲು ಆಡುತ್ತಿದ್ದೇವೆ" ಎಂದರು.

ಆದರೆ ಅವರ ಪಕ್ಕದಲ್ಲಿದ್ದ ಶಂಕರೇಗೌಡರು "ನಮ್ಮ ತಂಡ ಮಾಲೀಕರಾದ ಅಶೋಕ್ ಖೇಣಿಯವರು ಈ ಕಪ್ ಗೆದ್ದರೆ ಇಡೀ ತಂಡವನ್ನು ಅಮೆರಿಕಾ ಪ್ರವಾಸಕ್ಕೆ ಕರೆದುಕೊಂಡು ಹೋಗುತ್ತಾರೆ" ಎಂಬ ವಿಷಯವನ್ನು ಹೊರಗೆಡವಿದರು.

ಈ ಕ್ರಿಕೆಟ್ ಆಟದಿಂದ ಕನ್ನಡ ಚಿತ್ರರಂಗ ಕಲಿಯಬೇಕಾದದ್ದು ಬೇಕಾದಷ್ಟಿದೆ. ಅನಗತ್ಯವಾಗಿ ಕನ್ನಡ ಚಿತ್ರಗಳ ಸೋಲಿಗೆ ಪರಭಾಷೆಯನ್ನು ದೂಷಿಸುವ ಬದಲು ಸುದೀಪ್ ತಂಡದಂತೆ ಪ್ರತಿ ನಿರ್ದೇಶಕನೂ ಸಿನಿಮಾ ಮಾಡುವ ಸಂದರ್ಭದಲ್ಲಿ ಕಠಿಣ ಪರಿಶ್ರಮವನ್ನು ಹಾಕಿ ಪರಭಾಷ ಚಿತ್ರಗಳಿಗಿಂತ ಶ್ರೇಷ್ಠ ಚಿತ್ರ ನೀಡಲು ಪ್ರಯತ್ನ ಪಡಬೇಕಾಗಿದೆ.


ಕ್ರಿಕೆಟ್‌ನಲ್ಲಿ ಗೆದ್ದವರು ಸಿನಿಮಾದಲ್ಲಿ ಯಾಕೆ ಗೆಲ್ಲಲು ಸಾಧ್ಯವಿಲ್ಲ?

• ಶೆಣೈ

ಹಸಿವಿನ ಹರಿವಾಣಕ್ಕೆ ಪ್ರಶಸ್ತಿಯ ಫಲತಾಂಬೂಲ

'ನಾಲ್ಕನೇ ಕ್ಲಾಸು ಓದಿರೋ ಅಣ್ಣಾವ್ರು ಸಿನಿಮಾ ನಟರಾಗಿರೋವಾಗ ಅವರಷ್ಟೇ ಓದಿರುವ ನಾನ್ಯಾಕೆ ಸಿನಿಮಾ ಸೇರ್ಬಾರ್ದು?' ಹೀಗೊಂದು ವಿಚಿತ್ರವಾದ ಆಲೋಚನೆ ಆ ಯುವಕನನ್ನು ಸಿನಿಮಾ, ರಂಗಭೂಮಿಯತ್ತ ಆಕರ್ಷಿಸಿತು.


ಅದು 1978. ಆ ವರ್ಷ ಉತ್ತರ ಕರ್ನಾಟಕದಲ್ಲಿ ಅನಂತ್ ನಾಗ್ ಅಭಿನಯದ 'ಬರ' ಸಿನಿಮಾದ ಚಿತ್ರೀಕರಣ ನಡೆಯುತ್ತಿತ್ತು. ಮೈಗೆ ತೂತಿಕ್ಕುವಂಥ ಸೆಖೆ, ರಣರಣ ಬಿಸಿಲು. ಅನಂತ್ ಆ ಬಿಸಿಲಿನಿಂದ ಬಸವಳಿದು ಬಿಸಿಲನ್ನು ಬೈಯುತ್ತಾ ಕುಳಿತಿದ್ದರು. ಅಲ್ಲೇ ಇದ್ದ ಆ ಯುವಕ ತಕ್ಷಣ ತನ್ನ ಅಜ್ಜಿ ಬಳಿ ಹೋಗಿ ಭರ್ತಿ ಒಂದು ಕ್ಯಾನ್ ಮೊಸರು ತಂದು ಅನಂತ್ ಸೇರಿದಂತೆ ಚಿತ್ರೀಕರಣದಲ್ಲಿದ್ದವರೆಲ್ಲರಿಗೂ ನೀಡಿದ. ಕೆನೆ ಮೊಸರಿಗೆ ಮಾರುಹೋದ ಅನಂತ್ ಆ ಹುಡುಗನನ್ನು ಕರೆದು ಮಾತಾಡಿಸಿದರು. ಆತನ ಆಶಯದಂತೆ ನಿರ್ದೇಶಕ ಎಂ.ಎಸ್. ಸತ್ಯು ಅವರ ಬಳಿ ಶಿಫಾರಸು ಮಾಡಿ ಆತನಿಗೆ ಆ ಸಿನಿಮಾದಲ್ಲಿ ಸಣ್ಣದೊಂದು ಪಾತ್ರವನ್ನೂ ಕೊಡಿಸಿದರು.



ಡಾ. ರಾಜ್‌ಕುಮಾರರಂತೆ ನಟನಾಗಬೇಕು ಎಂದು ಕನಸು ಕಂಡಿದ್ದ ಹುಡುಗನಿಗೆ ಅವತ್ತು ಇದಕ್ಕಿಂತ ದೊಡ್ಡ ಸಂತಸವಿರಲಿಲ್ಲ.

ಈಗ ಅದೇ ವ್ಯಕ್ತಿ ತನ್ನ ನಟನೆಗೆ ಮೊಟ್ಟಮೊದಲ ಅಂತರರಾಷ್ಟ್ರೀಯ ಪ್ರಶಸ್ತಿ ಪಡೆದ ಕನ್ನಡದ ನಟ ಎನಿಸಿಕೊಂಡಿದ್ದಾರೆ.

ಆ ವ್ಯಕ್ತಿಯ ಹೆಸರು ವೈಜನಾಥ್ ಬಿರಾದಾರ್!



ಅಂದು ಅನಂತ್ ನಾಗ್ ಅವರ ಕೃಪೆಯಿಂದ ಸಿನಿಮಾದಲ್ಲಿ ಛಾನ್ಸ್ ಪಡೆದ ಬಿರಾದಾರ್ ನಂತರ ಬೆಂಗಳೂರಿಗೆ ಬಂದಮೇಲೆ ಅನುಭವಿಸಿದ ಯಾತನೆಯಿದೆಯಲ್ಲಾ? ಅದು ಅಕ್ಷರಶಃ ನರಕ. ಬಿರಾದಾರ್‌ರ ಏಕಪಾತ್ರಾಭಿನಯವನ್ನು ಕಂಡು ಇಷ್ಟಪಟ್ಟಿದ್ದ ಕುಂದಾಪುರದ ತೆಕ್ಕಟ್ಟೆ ಗೋಪಾಲ ರಾಯ ಎಂಬುವರೊಬ್ಬರು ಚಾಮರಾಜಪೇಟೆ ನಾಲ್ಕನೇ ಮುಖ್ಯರಸ್ತೆಯಲ್ಲಿ ಅವರ ಸಣ್ಣದೊಂದು ಕಚೇರಿಯಲ್ಲಿ ಬಿರಾದಾರ್‌ಗೆ ಉಳಿದುಕೊಳ್ಳಲು ಒಂದಿಷ್ಟು ಜಾಗ ಕೊಟ್ಟಿದ್ದರಂತೆ. ಆದರೆ ರಾತ್ರಿ ಹತ್ತರಿಂದ ಬೆಳಿಗ್ಗೆ ಐದು ಗಂಟೆಯ ತನಕ ಮಾತ್ರ! ಬೆಳಗ್ಗೆ ಎದ್ದು ಐದೂವರೆ ಹೊತ್ತಿಗೆ ಅಲ್ಲೇ ತಣ್ಣೀರು ಸ್ನಾನ ಮಾಡಿ ಜಾಗ ಖಾಲಿ ಮಾಡಬೇಕಿತ್ತಂತೆ. ಆನಂತರ ಅವರು ಚಿಕ್ಕಲಾಲ್‌ಬಾಗ್‌ಗೆ ಹೋಗಿ ತಮ್ಮ ಬಳಿ ಇದ್ದ ಎರಡು ಜೊತೆ ಬಟ್ಟೆಯಲ್ಲಿ ಒಂದನ್ನು ತೊಟ್ಟು ಇನ್ನೊಂದನ್ನು ಬೋರ್‌ವೆಲ್‌ನಲ್ಲಿ ತೊಳೆದು ಮರದ ಕೊಂಬೆ, ಕಾಂಪೌಂಡಿನ ಮೇಲೆ ಹರವಿ ಒಣಗಿಸಿಕೊಳ್ಳುತ್ತಿದ್ದರಂತೆ. ಕೈಲಿ ಕಾಸಿಲ್ಲ, ಮಾಡೋಕೆ ಕೆಲಸವಿಲ್ಲ. ಇದ್ದ ಪುಡಿಗಾಸಲ್ಲಿ ಸೌತೆಕಾಯಿಯೂ ಸಿಗುತ್ತಿರಲಿಲ್ಲ.

ಇಂಥ ದಾರುಣ ಸಂದರ್ಭದಲ್ಲಿ ಬಿರಾದಾರ್‌ಗೆ ಆಸರೆಯಾಗಿದ್ದು ಗುರುರಾಜ ಹೊಸಕೋಟೆ ಅವರ ಆರ್ಕೆಸ್ಟ್ರಾ. 'ಜಮಖಂಡಿ ಬ್ರದರ್ಸ್' ಹೆಸರಿನಲ್ಲಿ ಹೊಸಕೋಟೆಯವರು ನಡೆಸುತ್ತಿದ್ದ ಆರ್ಕೆಸ್ಟ್ರಾದಲ್ಲಿ ಬಿರಾದಾರ್ ಕೂಡಾ ಕಲಾವಿದರಾದರು. ಆನಂತರ ಅವರು ನಾಟಕರಂಗದಲ್ಲಿ ಮತ್ತು ಸಿನಿಮಾಗಳಲ್ಲಿ ನಟಿಸಲಾರಂಭಿಸಿದರು.

ಅಜಗಜಾಂತರ, ಓ ಮಲ್ಲಿಗೆ, ಅಕ್ಕ, ಅಳಿಯ ಅಲ್ಲ ಮಗಳ ಗಂಡ, ಅಕ್ಕ ತಂಗಿ, ಲವ್‌ಟ್ರೈನಿಂಗ್ ಸ್ಕೂಲ್, ಹುಲಿಯಾ, ಮಠ, ಜಾಕಿ ಹಾಗೂ ಈಗ ಉತ್ತಮ ನಟ ಎಂಬ ಪ್ರಶಸ್ತಿ ಪಡೆದಿರುವ, ಗಿರೀಶ್ ಕಾಸರವಳ್ಳಿ ನಿರ್ದೇಶನದ 'ಕನಸೆಂಬ ಕುದುರೆಯನೇರಿ' ಬಿರಾದಾರ್ ಅವರು ನಟಿಸಿರುವ ಪ್ರಮುಖ ಚಿತ್ರಗಳು. ಗುರುಪ್ರಸಾದ್ ನಿರ್ದೇಶನದ 'ಮಠ' ಬಿರಾದಾರ್ ಅಭಿನಯದ 200ನೇ ಸಿನಿಮಾ. 'ದೇವರು ಕೊಟ್ಟ ತಂಗಿ' 300ನೇ ಚಿತ್ರ. ವೃತ್ತಿ ರಂಗಭೂಮಿಯಲ್ಲೂ ಸಕ್ರಿಯರಾಗಿರುವ ಬಿರಾದಾರ್ ದಿನಕ್ಕೆ ಎರಡೆರಡು ನಾಟಕಗಳ ಶೋ ನೀಡಿದವರು.

ಒಮ್ಮೆ ಯಾರೋ ತರಕಾರಿ ಮಾರುವ ಸ್ನೇಹಿತ ಚಾಮರಾಜಪೇಟೆಯಲ್ಲಿರುವ ಮದುವೆ ಛತ್ರಕ್ಕೆ ಬಾ ಊಟ ಹಾಕಿಸ್ತೀನಿ ಎಂದಿದ್ದನಂತೆ. ಆತನ ಮಾತು ಕೇಳಿ ಕಲ್ಯಾಣ ಮಂಟಪದ ಬಾಗಿಲಿಗೆ ಹೋಗಿನಿಂತ ಬಿರಾದಾರ್‌ಗೆ ಅಲ್ಲಿದ್ದ ಮಾರ್ವಾಡಿಗಳು 'ಅಚ್ಚಾ ಅಚ್ಚಾ' ಎಂದು ನಾಯಿಯಂತೆ ಅಟ್ಟಿದ್ದರಂತೆ. ನಂತರ ರಸ್ತೆಯಲ್ಲಿ ಸಿಕ್ಕ ಐದು ರುಪಾಯಿಯ ಮುದುರಿದ ನೋಟನ್ನು ತೆಗೆದುಕೊಂಡು ಹೋಗಿ ಇಡ್ಲಿ ತಿಂದು ಹೊಟ್ಟೆ ತುಂಬಿಸಿಕೊಂಡಿದ್ದರಂತೆ. ಹಸಿವನ್ನು ಈ ಪರಿ ಅನುಭವಿಸಿದ್ದರಿಂದಲೋ ಏನೋ ಬಿರಾದಾರ್ ತಮ್ಮ ಬಹುತೇಕ ಪಾತ್ರಗಳಲ್ಲಿ ಎಲ್ಲ ಹಸಿದವರ ಪ್ರತಿನಿಧಿಯಂತೆ ನಟಿಸುತ್ತಾರೆ. 'ಹುಲಿಯಾ' ಚಿತ್ರದಲ್ಲಿ ಹಸಿವು ತಾಳಲಾರದೆ ಬೂದಿ ತಿನ್ನುವ ದೃಶ್ಯ ಎಂಥವರ ಕಣ್ಣಲ್ಲೂ ನೀರುಕ್ಕಿಸುತ್ತದೆ.

ನಿಜಕ್ಕೂ ಹಸಿವಿನ ನೋವು ಉಂಡಿರುವ ಬಿರಾದಾರ್ ಬದುಕಿನಲ್ಲಿ ಇವತ್ತಿಗೂ ಅಂಥಾ ಬದಲಾವಣೆ ಆಗಿಲ್ಲ, ಹೊಟ್ಟೆಬಟ್ಟೆಗೆ ಮೋಸವಿಲ್ಲದಿದ್ದರೂ ಬರುವ ಆದಾಯ ಯಾವುದಕ್ಕೂ ಎಟಕುವುದಿಲ್ಲ. ಪತ್ನಿ ವಿಮಲಾ, ಚೇತನ್, ಮನೋಜ್ ಮತ್ತು ಲಾವಣ್ಯ ಎಂಬ ಮೂವರು ಮಕ್ಕಳೊಂದಿಗೆ ಬೆಂಗಳೂರಿನ ಮಂಜುನಾಥನಗರದಲ್ಲಿ ಮೂರು ಸಾವಿರ ರೂಪಾಯಿ ಬಾಡಿಗೆಯ ಸಣ್ಣದೊಂದು ಮನೆಯಲ್ಲಿ ಬಿರಾದಾರ್ ವಾಸಿಸುತ್ತಿದ್ದಾರೆ.

ಕಳೆದ ಐದಾರು ವರ್ಷಗಳಿಂದ ಬಿರಾದಾರ್ ರಾಜ್ಯ ಪ್ರಶಸ್ತಿಗಾಗಿ ಅರ್ಜಿ ಗುಜರಾಯಿಸುತ್ತಿದ್ದರೂ ಯಾವ ಸರ್ಕಾರಗಳೂ ಇವರತ್ತ ಕಣ್ಣೆತ್ತಿಯೂ ನೋಡಿರಲಿಲ್ಲ. ಇಂಥ ಬಿರಾದಾರ್ ಅವರಿಗೆ ಈಗ ಉತ್ತಮ ನಟನೆಗಾಗಿ ಸ್ಪೇನ್ ದೇಶದ 'ಗೋಲ್ಡನ್ ವ್ಹೀಲ್' ಪ್ರಶಸ್ತಿ ಲಭಿಸಿದೆ.

'ಬಿರಾದಾರ್ ಅವರೇ ಇಂಟರ್‌ನ್ಯಾಷನಲ್ ಅವಾರ್ಡ್ ಬಂದಿದೆಯಂತೆ ನಿಮಗೆ?' ಅಂತಾ ಪ್ರಶ್ನಿಸಿದರೆ 'ಅದೇನೋ ಬಂದದಂತ್ರೀ... ಪೇಪರ್‌ನಾಗ ಹಾಕ್ಯವ್ರೆ... ನಂಗೆ ಅದ್ರ ಬಗ್ಗೆ ಏನೂ ತಿಳೀವಲ್ದು. ನೀವೇ ಓಂಚೂರ್ ತಿಳ್ಕೊಂಡ್ ಹೇಳ್ರೀ ನಂಗೆ' ಎಂದು ಮುಗ್ಧವಾಗಿ ಹೇಳುತ್ತಾರೆ ಬಿರಾದಾರ್.

ಅದ್ಭುತ ಪ್ರತಿಭೆಯಾದ ವೈಜನಾಥ್ ಬಿರಾದಾರ್ ಅವರಿಗೆ ಅಭಿನಂದನೆಗಳು.

• ಅರುಣ್

Regd.No.KA/RNP/BGS/2036/2011-13. Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 22-6-2011 RNI No.

ಕೋಕೋಗಾಗಿ ಕೋಳಿ ಸಾಕಿದರು!

'ಮೈಲಾರಿ'ಯ ಭರ್ಜರಿ ಗೆಲುವಿನ ಸಂತಸದಲ್ಲಿರುವ ನಿರ್ದೇಶಕ ಆರ್. ಚಂದ್ರು ಈಗ ಕೋಳಿ ಮತ್ತು ಕೋತಿಯನ್ನು ಸಾಕಲು ಶುರು ಮಾಡಿದ್ದಾರೆ.

ಇದೇನಪ್ಪ ಕೋಳಿ ಮತ್ತು ಕೋತಿಗಳನ್ನು ಸಾಕಲು ಚಂದ್ರು ಫಾರ್ಮ್ ಶುರು ಮಾಡಿದ್ದಾರಾ ಎಂದುಕೊಳ್ಳಬೇಡಿ. ಶ್ರೀನಗರ ಕಿಟ್ಟಿಗಾಗಿ ಚಂದ್ರು ನಿರ್ದೇಶಿಸುತ್ತಿರುವ 'ಕೋಕೋ' ಚಿತ್ರಕ್ಕಾಗಿ ಒಂದು ಕೋತಿ ಮತ್ತು ಕೋಳಿಯ ಅಗತ್ಯವಿತ್ತು. ಈ ಚಿತ್ರದಲ್ಲಿ ಇವೆರಡೂ ಬಹುಮುಖ್ಯ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತವೆ. ಈ ಕಾರಣಕ್ಕೇ ಎಲ್ಲೆಲ್ಲೋ ಹುಡುಕಿ ಒಂದು ಕಲರ್‌ಫುಲ್ ಹುಂಜವನ್ನು ತಂದ ಚಂದ್ರು ಅದನ್ನು ತಮ್ಮ ಮನೆಯಲ್ಲಿ ಸಾಕುತ್ತಿದ್ದಾರಂತೆ. ಮಾಮೂಲಿಯಾಗಿ ಕಾಣಿಸುತ್ತಿದ್ದ ಹುಂಜದ ಗ್ಲಾಮರ್ ಅನ್ನು ಹೆಚ್ಚಿಸಲು ದಿನಾ ಅದಕ್ಕೆ ಬರೀ ಪಿಸ್ತ ಬಾದಾಮಿ, ಗೋಡಂಬಿಗಳನ್ನೇ ತಿನ್ನಿಸುತ್ತಿದ್ದಾರಂತೆ. ಈಗಾಗಲೇ ಅದರ ವೆಚ್ಚ ನಾಲ್ಕು ಸಾವಿರ ರೂಪಾಯಿಗಳನ್ನು ಮೀರಿದೆಯಂತೆ.



ಇನ್ನು ಚಂದ್ರು ಹೇಳಿದಂತೆ ಕುಣಿಯಬೇಕಾದ ಕೋತಿಗಾಗಿ ಸಾಕಷ್ಟು ಅಲೆದು ಕಡೆಗೂ ಬಾಗೇಪಲ್ಲಿಯಿಂದ ಒಂದು ಕೋತಿಯನ್ನು ಹಿಡಿದು ತಂದಿದ್ದಾರೆ. ಈಗ ಅದಕ್ಕೆ ಫುಲ್ ಟ್ರೈನಿಂಗ್ ಕೊಡುತ್ತಿದ್ದಾರೆ.


'ಮೈಲಾರಿ'ಯಲ್ಲಿ ಒಂದು ಫೈಟ್‌ಗಾಗಿ ಚೆನ್ನೈನಿಂದ ಟಗರನ್ನು ಕರೆಸಿ ಸಾಕಷ್ಟು ಪಬ್ಲಿಸಿಟಿ ಪಡೆದಿದ್ದ ಚಂದ್ರು ಈಗ ಕೋಳಿ ಮತ್ತು ಕೋತಿ ಮೂಲಕವೂ ಪ್ರಚಾರ ಪಡೆಯುತ್ತಿದ್ದಾರೆ. ಬರಲಿರುವ ಸಿನಿಮಾದಲ್ಲಿ ಕೋಳಿ, ಕೋತಿ ಮತ್ತು ಕಿಟ್ಟಿಯ ನಡುವೆ ಪೈಪೋಟಿ ಕಂಡುಬಂದರೂ ಅಚ್ಚರಿ ಇಲ್ಲ!



ಈ ಹಿಂದೆ ಸಿದ್ದಗಂಗಾ ಮಠ ಸೇರಿದಂತೆ ಹಲವಾರು ಮಠಗಳು ತಮ್ಮ ತಮ್ಮ ಹಿರಿಮೆಯನ್ನು ತೆರೆ ಮೇಲೆ ತಂದಿದ್ದವು. ಈಗ ಆದಿಚುಂಚನಗಿರಿ ಮಠದವರೂ ಅಂಥದ್ದೇ ಒಂದು ಪ್ರಯತ್ನಕ್ಕೆ ಕೈಯಿಟ್ಟಿದ್ದಾರೆ. 'ಶ್ರೀ ಕ್ಷೇತ್ರ ಆದಿಚುಂಚನಗಿರಿ' ಎಂಬ ಸಿನಿಮಾ ಇತ್ತೀಚೆಗೆ ಆರಂಭವಾಗಿದೆ.

ಭಕ್ತಿ ಪ್ರಧಾನ ಚಿತ್ರಗಳಿಗೆ ಖ್ಯಾತರಾದ ಸಾಯಿಪ್ರಕಾಶ್ ಈ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಈ ಚಿತ್ರಕ್ಕೆ ಗುರುಕಿರಣ್ ಮ್ಯೂಜಿಕ್ ಡೈರೆಕ್ಟರು. ಭಕ್ತಿ ಪ್ರಧಾನ ಚಿತ್ರಕ್ಕೂ ಗುರುಕಿರಣ್‌ಗೂ ಏನು ಸಂಬಂಧ ಎಂದು ನಿಮಗೆ ಅನ್ನಿಸಬಹುದು. ಈವರೆಗೆ ರಾಕ್ ಮಾದರಿಯ ಸಂಗೀತಕ್ಕೇ ಫೇಮಸ್ ಆಗಿರುವ ಗುರು ಆದಿಚುಂಚನಗಿರಿಯ ಭಕ್ತರನ್ನು ಹೇಗೆ ಕರ್ಣಾನಂದಗೊಳಿಸುತ್ತಾರೋ ಗೊತ್ತಿಲ್ಲ. ಒಟ್ಟಿನಲ್ಲಿ ಗುರುಕಿರಣ್ ಅವರ ಅಬ್ಬರದ ಸಂಗೀತಕ್ಕೆ ಶ್ರೀ ಕ್ಷೇತ್ರ ಬ್ರೇಕ್ ಹಾಕಲಿದೆ ಎಂಬುದಂತೂ ನಿಜ! ಈ ಚಿತ್ರದಲ್ಲಿ ರವಿಚಂದ್ರನ್, ಶಿವರಾಜ್‌ಕುಮಾರ್ ಸೇರಿದಂತೆ ಹಲವಾರು ಸ್ಟಾರ್ ನಟರನ್ನು ವಿಶೇಷ ಪಾತ್ರಗಳಲ್ಲಿ ನಟಿಸಲು ಆಹ್ವಾನಿಸಲು ಸ್ಕೆಚ್ ಹಾಕಿದ್ದಾರೆ ಮಠದವರು. ಇನ್ನೊಂದು ವಿಚಾರವೇನೆಂದರೆ, ಡಾ. ಬಿ. ಸರೋಜಾದೇವಿ ಅವರು ಖುದ್ದಾಗಿ ಸಾಯಿಪ್ರಕಾಶ್ ಅವರನ್ನು ಸಂಪರ್ಕಿಸಿ ತಮಗೊಂದು ಪಾತ್ರ ನೀಡಬೇಕೆಂದು ವಿನಂತಿಸಿಕೊಂಡಿದ್ದಾರಂತೆ. ಆದರೆ ಸರೋಜಾದೇವಿ ಅವರಿಗೆ ಒಪ್ಪುವ ಯಾವ ಪಾತ್ರವೂ ಚಿತ್ರದಲ್ಲಿಲ್ಲ ಎಂಬ ಕಾರಣಕ್ಕೆ ಅವರಿಗೆ ಛಾನ್ಸು ಮಿಸ್ ಆಗಿದೆ.

ಸರೋಜಾ ದೇವಿ ಅವರೇ ಅವಕಾಶ ಕೇಳಿದ ಮೇಲೆ ಇನ್ನು ಒಕ್ಕಲಿಗ ಜನಾಂಗಕ್ಕೆ ಸೇರಿದ ಇನ್ನೊಂದಿಷ್ಟು ನಿವೃತ್ತ ನಟಿಯರೂ ಛಾನ್ಸು ಕೇಳಲು ಬಾಲಗಂಗಾಧರರ ಪಾದಕ್ಕೆ ಶರಣೆನ್ನಬಹುದು!



ಥ್ರಿಲ್ಲರ್ ಮಂಜು ಎಂಬ ಕನ್ನಡದ ಸ್ಟಂಟ್ ಮಾಸ್ಟರ್ ಈಗ ಗಿನ್ನೆಸ್ ದಾಖಲೆ ಮಾಡಲು ಹೊರಟಿದ್ದಾರೆ.

ಅದೇನೆಂದರೆ ಅವರ ನಿರ್ದೇಶನ ಮತ್ತು ನಿರ್ಮಾಣದ 'ಪೊಲೀಸ್ ಸ್ಟೋರಿ-3' ಚಿತ್ರದ ಶೂಟಿಂಗ್ ಕೇವಲ ಹನ್ನೆರಡು ಗಂಟೆ ಕಾಲಾವಧಿಯಲ್ಲಿ ಮುಗಿದಿದೆ. ಈ ಚಿತ್ರದ ಉಳಿದ ಕೆಲಸಗಳೆಲ್ಲವೂ ಹನ್ನೊಂದು ದಿನಗಳಲ್ಲಿ ಪೂರ್ತಿಗೊಂಡರೆ ಅದು ಗಿನ್ನೆಸ್ ದಾಖಲೆಗೆ ಅರ್ಹವಾಗುತ್ತದೆ. ಹೀಗಾಗಿ ಶೂಟಿಂಗ್ ನಂತರ ಈಗ ಎಡಿಟಿಂಗ್, ಡಬ್ಬಿಂಗ್, ರೀ-ರೆಕಾರ್ಡಿಂಗ್... ಮೊದಲಾದ ಕೆಲಸಗಳತ್ತ ಮಂಜು ಗಮನ ಹರಿಸಿದ್ದಾರೆ.

ಈ ಸಾಧನೆಗಾಗಿ ಮಂಜು ಒಟ್ಟು ಆರು ಯುನಿಟ್‌ಗಳನ್ನು, ಆರು ನಿರ್ದೇಶಕರು, ಆರು ಛಾಯಾಗ್ರಾಹಕರ ತಂಡವನ್ನು ತಯಾರು ಮಾಡಿದ್ದರು. ನಾಲ್ವರು ಹೊಸ ನಾಯಕನಟರನ್ನು ಮಂಜು ಈ ಚಿತ್ರದ ಮುಖಾಂತರ ಪರಿಚಯಿಸುತ್ತಿದ್ದರೂ ಮುಖ್ಯ ಪಾತ್ರದಲ್ಲಿ ಸುದೀಪ್ ನಟಿಸುತ್ತಿದ್ದಾರೆ.

ಇತ್ತೀಚೆಗಷ್ಟೇ ಶಿವರಾಜ್‌ಕುಮಾರ್ ಅಭಿನಯದ 'ಸುಗ್ರೀವ' ಚಿತ್ರದ ಶೂಟಿಂಗ್ ಕೂಡ 18 ಗಂಟೆಗಳ ಅವಧಿಯಲ್ಲಿ ಪೂರ್ಣಗೊಂಡಿತ್ತು, ಆದರೆ ಆ ಚಿತ್ರದ ಉಳಿದ ಕೆಲಸಗಳು ನಿಧಾನವಾಗಿ ಸಾಗಿದ್ದರಿಂದ ಅದು ಗಿನ್ನೆಸ್‌ಗೆ ಆಯ್ಕೆಯಾಗಲಿಲ್ಲ.

ಈಗ ಮಂಜು ಇಂತಹ ಸಾಹಸಕ್ಕೆ ಕೈಹಾಕಿದ್ದಾರೆ. ಆದರೆ ಇಂತಹ 'ದಾಖಲೆ'ಗಳಿಂದ ಚಿತ್ರಕ್ಕೆ ಆರ್ಥಿಕವಾಗಿ ಯಾವುದೇ ಲಾಭವಾಗುವುದಿಲ್ಲ. ಯಾವುದೇ ಚಿತ್ರ ಗೆಲ್ಲಬೇಕಾದರೆ ಪ್ರೇಕ್ಷಕ ಅಪೇಕ್ಷಿಸುವುದು ಗುಣಮಟ್ಟವನ್ನೇ ಹೊರತು ಇಂತಹ ಗಿಮಿಕ್‌ಗಳನ್ನಲ್ಲ.

ಅದೇನೇ ಇರಲಿ, ಬಾಕ್ಸ್ ಆಫೀಸ್ ಮಾತನ್ನು ಬದಿಗಿಟ್ಟು 'ವಿಶ್ವವಿಖ್ಯಾತ'ರಾಗುವ 'ಥ್ರಿಲ್'ನತ್ತ ಸಾಗುತ್ತಿರುವ 'ಥ್ರಿಲ್ಲರ್' ಮಂಜುಗೆ ಗುಡ್‌ಲಕ್.....!





ಅನಾ... ಹೆಣವಾ... ಸುದೀ... ಅಭಿಮಾ...

ಸಿನಿಮಾ ನಟರನ್ನು ದೇವರಂತೆ ... ಅನವಶ್ಯಕವಾಗಿ ಅವರ ಹಿಂದೆ ಬಿದ್ದು ಹುಚ್ಚು ... ಅಭಿಮಾನ ತೋರುವ ಯುವಕರ ಬದುಕು ... ಅಂತ್ಯವಾಗಿಬಿಡುತ್ತೆ ಗೊತ್ತೆ?


ಹಿಂದೊಮ್ಮೆ ಉಪೇಂದ್ರನನ್ನು ನೋಡಲು ಆತನ ... ಗೋಡೆ ಏರಿದ್ದ ಅಭಿಮಾನಿಯೊಬ್ಬ ಕೆಳಕ್ಕೆ ಬಿದ್ದು ... ಕಳೆದುಕೊಂಡಿದ್ದ. ಸ್ಟಾರ್ ನಟರ ಸಿನಿಮಾ ಬಿಡು... ದಿನ ಪಟಾಕಿ ಹಚ್ಚಲು ಹೋಗಿ ಕಣ್ಣು ಕಳೆದು... ಎಷ್ಟೋ ಅಭಿಮಾನಿಗಳಿದ್ದಾರೆ. ಹೀರೋ... ಬರ್ತ್ ಡೇ ದಿನ ಅವರ ದರ್ಶನ ಪಡೆ... ಹೋಗಿ ಕಾಂಪೌಂಡುಗಳಿಂದ ಬಿದ್ದು ... ಮುರಿದುಕೊಂಡ ಲೆಕ್ಕವಿಲ್ಲದಷ್ಟು ಅ... ರಿದ್ದಾರೆ.

ಕಳೆದ ಮಾರ್ಚ್ 11ನೇ ತಾ... ನಂದೂ ಅಂಥದ್ದೇ ಒಂದು ... ನಡೆಯಿತು.

ಅಂದು ಬೆಂಗಳೂರಿನ ... ಗೌಡ ರಸ್ತೆಯ ಸಂತೋಷ್ ಥಿಯೆ... ನಲ್ಲಿ 'ಕೆಂಪೇಗೌಡ' ಚಿತ್ರ ಬಿಡು... ಸಜ್ಜಾಗುತ್ತಿತ್ತು.

ಭದ್ರಾವತಿ ಮೂಲದ ಅಯ್ಯಪ್ಪ ಅಲಿಯಾಸ್ ಮಾ... ಎಂಬಾತ ಸುದೀಪ್‌ನ ಕಟ್ಟಾ ಅಭಿಮಾನಿ. ಹೇಗಾದರೂ ... ಸುದೀಪ್‌ನನ್ನು ನೇರವಾಗಿ ನೋಡಬೇಕು, ಅವರೊಟ್ಟಿಗೆ ಫೋ... ತೆಗೆಸಿಕೊಳ್ಳಬೇಕು ಎಂಬ ಆಸೆ ಹೊಂದಿದ್ದವನು. ಈ ಕಾ... ವರ್ಷಗಳ ಹಿಂದೆಯೇ ತನ್ನ ಮನೆಯಲ್ಲೇ ಒಂದಿಷ್ಟು ... ಕದ್ದು ಬೆಂಗಳೂರಿಗೆ ಓಡಿ ಬಂದಿದ್ದ. ಸುದೀಪ್ ಚಿತ್ರ ... ಚಿತ್ರೀಕರಣಗೊಳ್ಳುತ್ತಿದ್ದರೂ ಅಲ್ಲಿಗೆ ಹಾಜರಾಗುತ್ತಿದ್ದ. ... ಸಿನಿಮಾಗಳು ಬಿಡುಗಡೆಯಾದರೆ ಬ್ಯಾನರ್ ಬಂಟಿಂಗು... ಕಟ್ಟಿ ಸಂಭ್ರಮಿಸುತ್ತಿದ್ದ. ಐವತ್ತರವತ್ತು ಅಡಿ ಎತ್ತರದ ಕಟೌ... ಮೇಲೇರಿ ಹಾಲು ಸುರಿದು ಅಭಿಷೇಕ ಮಾಡುತ್ತಿದ್ದ.

'ಕೆಂಪೇಗೌಡ' ಸಿನಿಮಾ ಬಿಡುಗಡೆಯಾದ ದಿನವೂ ಎ... ಉತ್ಸಾಹದಿಂದ ಕಟೌಟು ಕಟ್ಟಲು ಮಾದೇವ ಮೇಲೆ... ಕಟೌಟು ನೂರು ದಿನ ಅಲ್ಲಾಡದಂತೆ ಬಿಗಿಯಾಗಿ ಕ... ಹೋದ ಆತನ ಕಾಲುಗಳು ಅರೆಕ್ಷಣ ಹಿಡಿತ ಕಳೆದುಕೊಂ... ಎಲ್ಲರೂ ನೋಡನೋಡುತ್ತಿದ್ದಂತೆ ಕೆಳಕ್ಕೆ ಬಿದ್ದ ಆತನ ... ದೊಡ್ಡ ಪೆಟ್ಟಾಯಿತು. ಮಾದೇವನ ಜೊತೆಗಾರರು ತಕ್ಷಣ ಆತ... ನಿಮ್ಹಾನ್ಸ್‌ಗೆ ಕರೆದೊಯ್ದು ದಾಖಲು ಮಾಡಿದರು. ಆದರೆ ಸಿನಿ... ಮೊದಲ ಪ್ರದರ್ಶನ ಆರಂಭಗೊಳ್ಳುವ ಮುಂಚೆಯೇ ಮಾದೇವ ಉಸಿರು ನಿಲ್ಲಿಸಿದ್ದ.



ಉಪ್ಪಾರಪೇಟೆ ಪೊಲೀಸರು 'ಅನಾಥ ಶವ' ಎಂದು ಯುಡಿಆರ್ ಕೇಸು ಫೈಲ್ ಮಾಡಿ ದೇಹವನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸಾಗಹಾಕಿದರು. 'ಕೆಂಪೇಗೌಡ' ನಿಗೆ ಕಟೌಟು ಕಟ್ಟಲು ಹೋದ ವ್ಯಕ್ತಿ ದುರ್ಮರಣಕ್ಕೀಡಾದ ವಿಷಯ ಮಾಧ್ಯಮಗಳಿಗೆ ಗೊತ್ತಾದರೆ ಎಲ್ಲಿ ನೆಗೆಟೀವ್ ಪಬ್ಲಿಸಿಟಿಯಾಗುತ್ತೋ? ಸತ್ತವನಿಗೆ ಪರಿ... ಬೇರೆ ಕೊಡಬೇಕಾಗುತ್ತದೋ ಎಂದು ಹೆದರಿದ ಚಿತ್ರದ ನಿರ್ಮಾಪಕ ಶಂಕರೇ... ಈ ಸುದ್ದಿ ಹೊರಹೋಗದಂತೆ ನೋಡಿಕೊಂಡ. ಆರ್. ಅಶೋಕ್‌ರಿಂದ ಉಪ್ಪಾರ... ಪೊಲೀಸರಿಗೆ ತಾಕೀತು ಮಾಡಿಸಿ ಘಟನೆಯನ್ನು ರಹಸ್ಯಗೊಳಿಸಿದ.

ಹೀರೋಗಳ ಅಭಿಮಾನಕ್ಕೆ ಬಿದ್ದ ಮಾದೇವನಂತ ಮಂದಿ ಬಹಳಷ್ಟಿ... ಆದರೆ ಈ ಅಭಿಮಾನಿಗಳ ಪ್ರಾಣಕ್ಕೇ ಸಂಚಕಾರ ಬಂದಾಗ ಯ... ಹೀರೋ ಆಗಲಿ, ಸ್ಟಾರುಗಳಾಗಲಿ ಅವರ ಸಹಾಯಕ್ಕೆ ಬರುವು... ಕನಿಷ್ಠ ಶ್ರದ್ಧಾಂಜಲಿಯನ್ನೂ ಸಲ್ಲಿಸುವುದಿಲ್ಲ. ಛೀ!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar,